UNIVERSAL
LIBRARY
OU_200430
UNIVERSAL
LIBRARY

NARASIMHARAJA WODEYAR SERIES

ಬಿ. ವೆಂಕಟಾಚಾರ್ಯ.

NARASIMHARAJA WODIYAR SERIES

# ಶಾಂತಿ

ಎರಡನೆಯ ಭಾಗ.

ಬಿ. ವೆಂಕಟಾಚಾರ್ಯ

*All Right Reserved.*

# ವಿಜ್ಞಾಪನೆ.

ಅನೇಕ ಪಾಠಕ ಮಹನೀಯರು ಈ ಗ್ರಂಥದ ಮೊದಲನೆಯ ಭಾಗವನ್ನು ಓದಿ ಮನಸದಣಿಯದಿರುವರು. ನಮ್ಮ ಹಿಂದೂ ಸನಾತನ ಧರ್ಮದಲ್ಲಿ ಶ್ರದ್ಧಾ ಭಕ್ತಿಯುಂಟಾಗಬೇಕಾದರೆ ಈ ಉಪಸಂಹಾರರೂಪವಾದ "ಶಾಂತಿ" ಯ ಎರಡನೆಯ ಭಾಗವನ್ನು ಮನವಿಟ್ಟು ಓದಬೇಕು.

ಈ ಗ್ರಂಥವನ್ನು ಪಾಠಕಮಹನೀಯರು ಓದಿ ನಮ್ಮ ಸುಪವಿತ್ರ ಹಿಂದೂ ಸನಾತನ ಧರ್ಮದಲ್ಲಿ ಶ್ರದ್ಧಾಭಕ್ತಿಯುಳ್ಳವರಾದರೆ ಗ್ರಂಥಕರ್ತರ ಆಶೆಯು ಪರಿಪೂರ್ಣವಾಗುವುದು.

ಪಾಠಕಮಹಾಶಯರು ಎಂದಿನಂತೆ ಗ್ರಂಥಕರ್ತರ ಗ್ರಂಥಗಳಿಗೆ ಪ್ರೋತ್ಸಾಹ ಕೊಟ್ಟು ಅವರ ಖ್ಯಾತಿಯು ಇತೋಽಪ್ಯತಿಶಯವಾಗಿ ಪ್ರಚಾರವಾಗುವಂತೆ ಸಹಾಯ ಮಾಡುವರೆಂದು ನಂಬಿರುವ,

ಮೈಸೂರು.<br>ಅಕ್ಟೋಬರ್ 1922. } ಬಿ. ವಿ. ನರಸಿಂಹೈಯ್ಯಂಗಾರ್.

Printed & Published by **B. V. Narasimha Iyengar,**
at the Royal Press, Mysore—1922



ಶ್ರಿಯೈನಮಃ

# ಶಾಂತಿ.

## ಎರಡನೆಯ ಭಾಗ

### ಮೊದಲನೆಯ ಪರಿಚ್ಛೇದ.

ಮೇದಿನೀಪುರದಿಂದ ಮಯೂರಗಂಜಿಗೆ ಹೋಗುವ ಮಾರ್ಗದ ಪಾರ್ಶ್ವದಲ್ಲಿ ಒಂದು ದೊಡ್ಡದಾದ ಅಡವಿ. ಪಟ್ಟಣವನ್ನು ಬಿಟ್ಟು ಕೆಲವು ಹರಿದಾರಿ ಬರುತಲೇ ಅರಣ್ಯಕ್ಕೆ ಪ್ರಾರಂಭವಾಗುವುದು. ಕ್ರಮೇಣ ಆ ಅಡವಿಯು ನಿಬಿಡವಾಗಿ, ಹೋಗುತ ಹೋಗುತ ನಿಬಿಡತರವಾಗಿದೆ. ಈಗ ಬಾಂಧಗೋಪನೆಂಬ

ಹೆಸರಿನಿಂದ ಕರೆಯಲ್ಪಡುವ ಚಿಕ್ಕದಾದ ಹಳ್ಳಿಯು ಪೂರ್ವಕಾಲದಲ್ಲಿ ವಿರಾಟ ರಾಯನ ಗೋಗೃಹವಾಗಿದ್ದಿತು. ಆ ಗೋಪುಹಳ್ಳಿಯನ್ನು ದಾಟಿ ಇನ್ನೂ ಕೆಲವು ಹರಿದಾರಿ ಪಶ್ಚಿಮಾಭಿಮುಖವಾಗಿ ಹೋದರೆ ಅಡವಿಯು ಮತ್ತಷ್ಟು ಘನವಾಗಿರುವುದು. ಮೇದಿನೀಪುರದ ಕಚ್ಚೇರಿಯಿಂದಲೂ ಅನೇಕ ಉಪ್ಪರಿಗೆಗಳ ಮೇಲಿನಿಂದಲೂ ನೋಡಿದರೆ ಈ ಬಹುದೂರವ್ಯಾಪಿಯಾದ ಘನಾರಣ್ಯದ ದೂರ ಗತವಾದ ಶೋಭಾರಾಶಿಯು ಕಣ್ಗೋಚರಿಸುವುದು. ಈಯಡವಿಯ ಮಧ್ಯದಲ್ಲಿ ಅಡವಿಯನ್ನು ಎರಡು ಭಾಗವಾಗಿ ವಿಂಗಡಿಸಿ ಮಯೂರಗಂಜಾಭಿಮುಖವಾಗಿ ಮನೋಹರವಾದ ರಾಜಮಾರ್ಗವು ಹೋಗುತ್ತದೆ ಮಾರ್ಗದ ಉಭಯ ಪಾರ್ಶ್ವದಲ್ಲಿಯೂ ದುರ್ಭೇದ್ಯವಾದ ಅರಣ್ಯ.

ಆ ಅರಣ್ಯದ ಘನತಮವಾದ ಪ್ರದೇಶದಲ್ಲಿ ಪ್ರಸ್ತರದಿಂದ ನಿರ್ಮಿತವಾದ ಬಹು ದೊಡ್ಡದಾದ ಒಂದು ಉಪ್ಪರಿಗೆ ಮನೆಯು ನಿಂತಿದೆ. ರಾಜಮಾರ್ಗದಿಂದ ಆ ದೊಡ್ಡದಾದ ಭವನದ ಯಾವ ಭಾಗವೂ ದೃಷ್ಟಿಗೆ ಗೋಚರವಾಗುವುದಿಲ್ಲ ಮತ್ತು ಆ ಭವನವು ಅತ್ತಕಡೆ ಇರುತ್ತದೆಂಬ ಅನುಮಾನವೂ ಹುಟ್ಟುವುದಿಲ್ಲ. ಅಲ್ಲಿಗೆ ಹೋಗಿ ಬರುವುದಕ್ಕೆ ಹಾದಿ ಯಾವುದೂ ಗೋಚರವಿಲ್ಲ. ಆದುದರಿಂದ ಜನರಿಗೆ ಅದರ ವಿಚಾರವಾಗಿ ಏನೊಂದೂ ತಿಳಿಯದು.

ಆದರೆ ಆ ರಮ್ಯವಾದ ಉಪ್ಪರಿಗೆಯ ಮನೆಯು ಜನವಿಹೀನವಾಗಿರಲಿಲ್ಲ. ಅದು ಅನೇಕ ನರನಾರಿಯರಿಗೆ ಆವಾಸಸ್ಥಳವಾಗಿದ್ದಿತು. ಅಲ್ಲಿನ ಅಧಿವಾಸಿಗಳು ಆ ನಿಬಿಡವಾದ ಅರಣ್ಯದಲ್ಲಿ ಏತಕ್ಕೆ ಅಲ್ಲಿ ವಾಸಮಾಡುತ್ತಾರೆ? ಆ ಹುಲಿ ಕರಡಿ ಮುಂತಾದ ಹಿಂಸ್ರ ಜಂತುಗಳಿಂದ ತುಂಬಿದ ಅಡವಿಯಲ್ಲಿ ಏತಕ್ಕೆ ವಾಸ ಮಾಡುತ್ತಾರೆ? ಅವರಿಗೆ ಜೀವನೋಪಾಯವೇನು? ಎಂಬಿವೇ ಮುಂತಾದ ವಿಷಯಗಳು ಅತಿಶಯ ಕೌತುಕಜನಕವಾದುದು. ಪಾಠಕ ಮಹಾಶಯರೆ! ನಮ್ಮ ಸಂಗಡ ಬನ್ನಿರಿ ಆ ವನ ಮಧ್ಯದಲ್ಲಿರುವ ಪುರಿಯೊಳಗೆ ಪ್ರವೇಶಮಾಡೋಣ.

ಗಭೀರವಾದ ರಾತ್ರಿ ದಿವಾಭಾಗದಲ್ಲಿಯೇ ಈ ಕಗ್ಗಾಡಿನಲ್ಲಿ ದಾರುಣವಾದ ಗೌಗತ್ತಲೆ ಕವಿತುಕೊಂಡಿರುವುದು. ಈ ಘೋರವಾದ ರಾತ್ರಿಯಲ್ಲಿ ಅಂಧಕಾರವು ಮೂರ್ತಿಯನ್ನು ತಾಳಿರುವ ಹಾಗೆ ಬೋಧೆಯಾಗುತಲಿದ್ದಿತು. ಆದರೆ ಆ ವಿಶಾಲವಾದ ಭವನದ ಹಿಂದೊಂದು ಕೊಟಡಿಯಿಂದ ಬೆಳಕಿನ ಪ್ರಕಾಶವು ಬರುತಲಿದ್ದಿತು. ಪುರಮಧ್ಯದಲ್ಲಿ ಪ್ರವೇಶಮಾಡಿ ಉಜ್ವಲವಾದ ಬೆಳಕು

ಉರಿಯುವ ಕೊಟಡಿಯೊಳಗೆ ಹೋಗಿ ನಿಂತು ನೋಡಿದರೆ ಅದೊಂದು ದೇವಾಲಯವಾಗಿರುವುದು. ಆಹಾ! ಎಷ್ಟು ಮನೋಹರ! ಎಷ್ಟು ಭುವನ ಮೋಹನವಾಗಿದೆ! ಆ ಕೊಟಡಿಯ ಮಧ್ಯದಲ್ಲಿ ರಜತ ಮಂಚದ ಮೇಲೆ ಶಿಖಿಯ ಪುಚ್ಛ ಚೂಡಾಧಾರಿಯಾದ ಕೊಳಲು ವದನವುಳ್ಳ ನಗುಮುಖನಾದ ಸ್ಮೇರೋತ್ಫುಲ್ಲ ಲೋಚನಗಳುಳ್ಳ ಅಪೂರ್ವ ಶ್ಯಾಮ ಸುಂದರನ ಮೂರ್ತಿಯು ಪ್ರಕಾಶಿಸುತಲಿದ್ದಿತು. ವಾಮ ಭಾಗದಲ್ಲಿ ಅತಸೀ ಕುಸುಮ ಸುಕಾಂತಳಾದ ವಿಕಸಿತಾನನಳಾದ ಪ್ರೇಮದಿಂದ ಪ್ರದೀಪ್ತವಾದ ಲೋಚನಗಳುಳ್ಳ ಪ್ರೇಮಮಯಿಯಾದ ರಾಧೆಯ ಮೋಹಿನೀ ಮೂರ್ತಿಯು ಪ್ರಕಾಶಿಸುತಲಿದ್ದಿತು. ವಿಗ್ರಹಗಳೆರಡಕ್ಕೂ ಯಾವ ಯಾವ ಅಲಂಕಾರವು ಎಲ್ಲೆಲ್ಲಿ ತಕ್ಕದ್ದೋ ಅಲ್ಲಲ್ಲಿ ಅವು ತೊಡಿಸಲ್ಪಟ್ಟಿದ್ದುವು. ಮಸ್ತಕದ ಮೇಲೆ ಸ್ವರ್ಣಸೂತ್ರ ನಿರ್ಮಿತವಾದ ಮುತ್ತಿನ ಝಾಲರಿಯಿಂದ ಸಮನ್ವಿತವಾದ ಒಂದು ಚಮತ್ಕಾರವಾದ ಝಾಲರೆ ಹರಿ! ಹರಿ! ಏನು ಕಾಂತಿ! ಸರ್ವ ರೂಪಕ್ಕೂ ಕೇಂದ್ರಸ್ವರೂಪವಾಗಿ ಸರ್ವ ಶೋಭಾರಾಶಿಗೂ ಉತ್ಪಾದಕವಾಗಿದ್ದರೆ ಇಷ್ಟು ಶೋಭಾರಾಶಿಯು ಮತ್ತಾವುದರಲ್ಲಿ ಸಂಭವ? ಆಹಾ! ವಿಗ್ರಹಗಳೆರಡೂ ಸಜೀವವಾಗಿ ವಾಙ್ಮಯವಾಗಿವೆಯೊ! ಯಾರು ಸರ್ವವ್ಯಾಪಿಯೋ, ಬ್ರಹ್ಮಾಂಡವೆಲ್ಲಾ ಯಾರ ಒಂದು ರೋಮಕೂಪದಲ್ಲಿರುವುದೋ ಅವನೇ ಇಲ್ಲಿದ್ದಾನೆಂಬುವುದಕ್ಕೆ ಸಂದೇಹವೇನು? ಇಂತಹ ಯುಕ್ತಿಯು ಭಕ್ತರಾದವರಿಗೆ ಕರ್ಣಕಠೋರವಾಗಿರುವುದು. ಈ ಮೂರ್ತಿಯೇ ಅವನು, ಈ ಮೂರ್ತಿಯೇ ಸಾಕ್ಷಾತ್ ಭಗವಂತನು ಎಂದು ಹೇಳಿದರೆ ಭಕ್ತನಾದವನಿಗೆ ಚೆನ್ನಾಗಿರುವುದಲ್ಲದೆ ಆತನು ಹಾಗೆಯೇ ತಿಳಿದಿದ್ದಾನೆ.

(ಅನುಸಂಧಾನದಿಂದ)

ಆ ಕೊಟಡಿಯಲ್ಲಿ ಒಬ್ಬ ಕೃಷ್ಣಕಾಯಳಾದ ರುಕ್ಷಕೇಶಳಾದ ಧರ್ಮತೇಜೋದ್ದೀಪ್ತಳಾದ ಅಲೌಕಿಕವಾದ ಕಾಂತಿವಿಶಿಷ್ಟಳಾದ ಹೆಂಗಸು ಕುಳಿತುಕೊಂಡು ಹೂಮಾಲೆಯನ್ನು ಪೋಣಿಸುತಲಿದ್ದಳು. ಮತ್ತು ಮಧ್ಯೆ ಮಧ್ಯೆ ಮುಖವನ್ನೆತ್ತಿ ನಗುಮುಖಳಾಗಿ ಆ ಮಂಚದ ಮೇಲಿದ್ದ ನಾರಾಯಣಮೂರ್ತಿಯ ಕಡೆ ನೋಡುತಲಿದ್ದಳು. ಈ ಪ್ರಕಾರ ಅನೇಕ ತರವೆ ದೇವದರ್ಶನ ಮಾಡಿದ ಮೇಲೆ ಆ ಪುಣ್ಯತೇಜಃಪ್ರದೀಪ್ತಳಾದ ಸುಂದರಿಯು ವಿಗ್ರಹಗಳನ್ನು ದೃಷ್ಟಿಸಿ ನೋಡುತ್ತ, 'ಈ ದಿನ ನೀನು ಬಹಳ ದುಷ್ಟನಾಗಿಬಿಟ್ಟೆ! ಈ ದಿನ ನೀನು ನನ್ನ

ಮಾತನ್ನು ಕೇಳುವುದಿಲ್ಲ. ನಾನು ಸಾಯಂಕಾಲದಿಂದಲೂ ಊಟಮಾಡುವು ದಕ್ಕೆ ನಿನಗೆ ಎಷ್ಟು ಹೇಳಿದರೂ ನೀನು ಕೇಳುವುದಿಲ್ಲ. ರಾತ್ರಿ ಎಷ್ಟುಹೊತ್ತಾಗಿ ಹೋಯಿತು ! ಇನ್ನೂ ನಿನಗೆ ಊಟವಿಲ್ಲ ಒಳ್ಳೆಯದು, ಇರು. ಶಾಂತಿ ದೇವಿಯು ಬರಲಿ, ಆಗ ನಿನಗೆ ಮಾಡಿಸುತ್ತೇನೆ' ಎಂದು ಹೇಳಿಕೊಳ್ಳುತ್ತಿದ್ದಳು.

ಸ್ವಲ್ಪಹೊತ್ತಿನಮೇಲೆ ಪುನಃ, 'ದುಷ್ಟ ! ಹೇಳಿದ ಮಾತು ಕೇಳದೆ, ಪುನಃ ನಗುತ್ತೀಯಾ ? ನಿನ್ನದು ಬಹಳ ದುಷ್ಟತನವಾಯಿತು !' ಎಂದಳು.

ಅನಂತರ ರಾಧಿಕಾ ಕಡೆಗೆ ತಿರುಗಿ, 'ಇನ್ನು ನೀನು ಎಂತಹ ಹೆಣ್ಣೆ ! ದುಷ್ಟ ಹುಡುಗ ಊಟಮಾಡದಿದ್ದರೆ, ನೀನೂ ಊಟಮಾಡುವುದಿಲ್ಲವೆ ? ನೀನೇಕೆ ಊಟಮಾಡುವುದಿಲ್ಲವಮ್ಮ ?' ಎಂದಳು

ಈ ಸಮಯದಲ್ಲಿ, ಅಪಾರ್ಥಿವರೂಪಪ್ರಭಾಸಂಪನ್ನಳಾದ ಪುಣ್ಯಸ್ವರೂಪವಾದ ಮೂರ್ತಿಮತಿಯೋ ಎಂಬಹಾಗಿದ್ದ ಶೋಭಾಮಯಿಯಾದ ಸುಂದರಿಯೊಬ್ಬಳು ಅಲ್ಲಿಗೆ ಬಂದಳು ಅವಳ ಆಗಮನದಿಂದ ಗೃಹವೆಲ್ಲಾ ಅಧಿಕತರವಾಗಿ ಉಜ್ವಲವಾಯಿತು. ಅವಳು ಬರುತಲೇ ಆ ಕೃಶಾಂಗಿಯಾದ ಸುಂದರಿಯನ್ನು ಕುರಿತು, 'ಸುರಮಾ ! ಏನಾಗುತ್ತದೆ ? ಹುಡುಗರ ಸಂಗಡ ಕಾದಾಡುವ ಹಾಗಿದೆ ಯೆಂದು ತೋರುತ್ತದೆ' ಎಂದಳು

ಸುರಮ —ಶಾಂತಿ ಬಂದಳೆ ? ನೋಡು, ತಾಯಿ ! ಇಷ್ಟು ರಾತ್ರಿಯಾಗಿ ಹೋಗಿದೆ. ಈ ಹುಡುಗರಿಬ್ಬರೂ ಊಟಮಾಡುವುದಕ್ಕೆ ಏಳುವುದಿಲ್ಲ. ನಾನು ಎಷ್ಟೋ ಹೇಳಿದೆ ನಾನು ಎಷ್ಟು ಹೇಳಿದರೂ ನಕ್ಕುಬಿಟ್ಟು ಮಾತನ್ನು ಕಿವಿಯ ಮೇಲೆ ಹಾಕಿಕೊಳ್ಳುವುದಿಲ್ಲ. ಬಹಳ ದುಷ್ಟರಾಗಿ ಹೋಗಿದ್ದಾರೆ, ನೀನು ಬಂದು ಅವರ ದುಷ್ಟತನವನ್ನೆಲ್ಲಾ ತಪ್ಪಿಸುತ್ತೇನೆಂದು ಹೇಳಿದ್ದೇನೆ, ತಾಯಿ ! ಈಗ ಸರಿಯಾದ ಹೊತ್ತಿಗೆ ಬಂದೆ ಅವರಿಗೆ ಹೇಗೆ ಗದರಿಸಿ ಏನು ಹೇಳಬೇಕೋ ಹೇಳು.

ಶಾಂತಿ—ನಿನ್ನ ಹುಡುಗರು ಹೊಸದಾಗಿ ಈ ದಿನ ದುಷ್ಟತನವನ್ನು ಕಲಿತವರಲ್ಲ ಅವರು ಮೊದಲಿನಿಂದಲೂ ಹೀಗೆ ದುಷ್ಟರು, ಊಟಮಾಡುವ ವಿಚಾರದಲ್ಲಿ ನಾನು ಅವರಿಗೆ ಹೇಳಲಾರೆ. ಆದರೆ ಅವರ ದುಷ್ಟತನ ತಪ್ಪಿಸುವುದಕ್ಕೆ ಈಗಲೇ ಏನಾದರೂ ಮಾಡುತ್ತೇನೆ. ಏತಕ್ಕೆ, ಪ್ರಭೋ ! ಇನ್ನೂ ಚಿಕ್ಕಮನೆಯಲ್ಲಿ ಕೂಡಿಹಾಕಿಸಿಕೊಳ್ಳುವುದಕ್ಕೆ ನಿನಗೆ ಇಷ್ಟವೋ ?

ಅನಂತರ ಪುರವನ್ನೂ ಕಡೆ ತಿರುಗಿಕೊಂಡು, ಇನ್ನು ನಿನ್ನ ಹುಡುಗರು ದುಷ್ಟತನ ಮಾಡುವುದಿಲ್ಲ. ನಾನು ಈಗ ಬರುತ್ತೇನೆ. ಹರಿ! ನೀನು ನನ್ನನ್ನು ಯಾವ ಕೆಲಸಕ್ಕೆ ಕಳುಹಿಸಿದ್ದೀಯೋ ಆ ಕೆಲಸವು ಇನ್ನೂ ಪೂರೈಸಲಿಲ್ಲ. ನಿನ್ನ ಕೃಪೆಯಿಲ್ಲದೆ ಹೋದರೆ ಅದು ಪೂರೈಸುವುದಿಲ್ಲ. ಅದು ಎಷ್ಟು ದಿನಕ್ಕೆ ಪೂರ್ತಿಗೈಯುವುದೋ ಅದನ್ನು ನೀನೇ ಬಲ್ಲೆ—ಎಂದು ಹೇಳಿಬಿಟ್ಟು ಅನಂತರ ಪುರವನ್ನು ಕುರಿತು, ಪುರವೇ! ನಾನು ಈಗ ಗುರುದೇವನನ್ನು ನೋಡುವುದಕ್ಕೆ ಹೋಗುತ್ತೇನೆ, ನಿನ್ನ ಹುಡುಗರು ಮಲಗಿದ ಮೇಲೆ ಬಂದು ನನ್ನನ್ನು ನೋಡು. ನಿನ್ನ ಸಂಗಡ ಮಾತನಾಡುವುದು ಅನೇಕವಿದೆಯೆಂದು ಹೇಳಿದಳು.

ಹೀಗೆ ಹೇಳಿ ಆ ಸುಕುಮಾರಿಯಾದ ಸುರಸುಂದರಿಯು ನಗುಮುಖಿಳಾಗಿ ಆ ದೇವಚರಣಕ್ಕೆ ಪ್ರಣಾಮವನ್ನು ಮಾಡಿ, ಸ್ವಲ್ಪ ನಗುತನಗುತ ದೇವದಂಪತಿಗಳಿಗೆ ಒಂದು ಪೆಟ್ಟು ಕೊಡುವವಳಹಾಗೆ ಕೈಮುಷ್ಟಿಯನ್ನು ತೋರಿಸಿ ಹೊರಟು ಹೋದಳು.

## ಎರಡನೆಯ ಪರಿಚ್ಛೇದ.

ರಾತ್ರಿ ಎರಡು ಪ್ರಹರದಮೇಲಾಗಿದ್ದಿತು, ಆ ದೊಡ್ಡದಾದ ಭವನದ ಪಾರ್ಶ್ವದಲ್ಲಿ ನಾಲ್ಕುಗೋಡೆಗಳಿಂದ ಸುತ್ತುವರಿಯಲ್ಪಟ್ಟ ಸ್ವತಂತ್ರವಾದ ಒಂದು ಚಿಕ್ಕ ಯೋಗಮಂದಿರ. ಅಲ್ಲಿ ನಿಬಿಡವಾದ ಅಂಧಕಾರದಲ್ಲಿ ಒಬ್ಬ ಧ್ಯಾನಮಗ್ನನಾದ ಪುರುಷನು ಕುಳಿತಿದ್ದನು. ಅವನೆದುರಿಗೆ ಅಗ್ನಿಕುಂಡ ಉರಿಯುತಲಿದ್ದಿತು. ಆ ಅಗ್ನಿಯ ಪ್ರಕಾಶವು ಅವನ ತೇಜಃಪುಂಜವಾದ ಕಳೇಬರದ ಮೇಲೂ ಸ್ಮಶ್ರು ಸಮಾವೃತವಾದ ಮುಖದ ಮೇಲೂ ಬಿದ್ದಿದ್ದಿತು ಅವನು ಕೌಪೀನಧಾರಿ. ಅವನ ವಯಸ್ಸನ್ನು ಇಷ್ಟೆಂದು ಊಹಿಸುವುದು ಅಸಾಧ್ಯ. ಐವತ್ತಕ್ಕೆ ಮೇಲಿರಬಹುದೆಂದು ತೋರುತಲಿದ್ದಿತು ಕೂದಲು ಒಂದೂ ಬಿಳುಪಾಗಿರಲಿಲ್ಲ. ಶರೀರವೆಲ್ಲಾ ಶೀರ್ಣವಾಗಿದ್ದಿತು. ಆದರೂ ಉಜ್ವಲವಾಗಿ ಪೇಶಲವಾಗಿದ್ದಿತು. ದೀರ್ಘಾಕಾರವಾದ ದೇಹ.

ಬಹಳ ಹೊತ್ತು ಧ್ಯಾನದಲ್ಲಿದ್ದಮೇಲೆ ಆ ಯೋಗಿಯ ಧ್ಯಾನಭಂಗವಾಯಿತು. ಅವನು ಕಣ್ಣುತೆರೆದು ನೋಡುತ್ತಲೇ ನಾವು ಮೊದಲು ನೋಡಿದ್ದ

ಶಾಂತಿಯೆಂಬ ಸುಂದರಿಯು ಅವನ ಚರಣಕ್ಕೆರಗಿದಳು. ಸನ್ಯಾಸಿಯು ಅವಳನ್ನು ನೋಡಿ, ಶಾಂತಿ! ಬಂದು ಎಷ್ಟು ಹೊತ್ತು ಆಯಿತು? ವಿಘ್ನವೇನೂ ಆಗಲಿಲ್ಲವಷ್ಟೆ? ಎಂದನು.

ಶಾಂತಿ—ಪ್ರಭೊ! ಈಗ ಬಂದು ಸ್ವಲ್ಪಹೊತ್ತಾಯಿತು. ಮೊದಲು ಹರಿ ಮಂದಿರಕ್ಕೆ ಹೋಗಿ ಶ್ಯಾಮಸುಂದರನಿಗೆ ಸಮಸ್ತ ಸಮಾಚಾರವನ್ನೂ ಅರುಹಿದೆನು. ಅನಂತರವೇ ಇಲ್ಲಿಗೆ ಬಂದೆನು. ವಿಘ್ನವೆಂಬುವುದನ್ನು ಯಾವುದಕ್ಕೆ ಹೇಳುತ್ತಾರೋ ಅದನ್ನು ನಾನರಿಯೆನು. ನಾನು ಕಂಡಿರುವುದು ಈ ಶ್ಯಾಮಸುಂದರ, ಈ ಜ್ಞಾನಾನಂದ ಠಾಕೂರರು. ಇವರಿಬ್ಬರನ್ನು ಕಂಡಿದ್ದೇನೆ. ಎಲ್ಲಿ ಹೋಗಲಿ, ಯಾವಕೆಲಸವನ್ನು ಮಾಡಲಿ, ಯಾವಾಗಲೂ ಈ ಶ್ಯಾಮಸುಂದರ, ಈ ಜ್ಞಾನಾನಂದ ಠಾಕೂರರು ಇವರಿಬ್ಬರೂ ನನ್ನ ಜತೆಯಲ್ಲಿರುವ ಹಾಗೆ ತಿಳಿಯುತ್ತೇನೆ. ಇನ್ನು ವಿಘ್ನ ಮಾಡುವವರು ಯಾರು? ಹೃದಯವು ಯಾವಾಗಲಾದರೂ ದುರ್ಬಲವಾಗಿರುವ ಹಾಗೆ ಬೋಧೆಯಾದರೆ, ಒಂದು ತಡವೆ ಕಣ್ಣುಮುಚ್ಚಿಕೊಂಡು ಪ್ರಭುವನ್ನು ಧ್ಯಾನಿಸಿಕೊಂಡಮಾತ್ರಕ್ಕೆ ಸಕಲವಾದ ಸಾಹಸವೂ ಬಲವೂ ತಾನಾಗಿಯೇ ಬರುತ್ತವೆ. ಒಂದು ಪಾರ್ಶ್ವದಲ್ಲಿ ಶ್ಯಾಮಸುಂದರನೂ ಒಂದು ಪಾರ್ಶ್ವದಲ್ಲಿ ಠಾಕೂರರೂ ಇರುವಹಾಗೆ ತೋರುತ್ತದೆ. ಪ್ರಭೊ! ಹೀಗಿರುವಾಗ ವಿಘ್ನದ ಆಶಂಕೆಗೆ ಕಾರಣವೆಲ್ಲಿದೆ?

ಜ್ಞಾನಾನಂದ—ವತ್ಸೆ! ಶ್ಯಾಮಸುಂದರನು ಯಾರನ್ನು ತನ್ನವನೆಂದು ತಿಳಿಯುವನೊ, ಯಾರು ಶ್ಯಾಮಸುಂದರನನ್ನು ತನ್ನವನೆಂದು ತಿಳಿಯುವರೋ ಅವರಿಗೆ ಯಾವಾಗಲೂ ಯಾವ ಭಯವೂ ಇಲ್ಲ. ಈ ಪಾಪಭೂಯಿಷ್ಠವಾದ ಭೂಮಿಯಲ್ಲಿ ನಿನ್ನಂತಹ ಪ್ರಾಣಿಯ ಆವಿರ್ಭಾವವು ಭಗವಂತನ ಲೀಲೆಯ ಪ್ರಕಾಶಕ್ಕೆ ಉಪಾಯ ಮಾತ್ರವಾಗಿದೆ. ರೋಗಿಯು ಸುಸ್ಥನಾಗಿದ್ದಾನೇನು?

ಶಾಂತಿ—ಹೌದು, ಮಹಾಸ್ವಾಮಿ?

ಜ್ಞಾನಾನಂದ—ಆವಾವ ಉಪಾಯಗಳನ್ನು ಅವಲಂಬನೆ ಮಾಡಿದೆ?

ಶಾಂತಿ—ನನ್ನನ್ನು ನೋಡಿದಮಾತ್ರದಿಂದಲೇ ರೋಗಿಯು ವಿಶೇಷ ಉತ್ಸಾಹಿತನಾದನು. ಅವನ ದೇವಿಯಾಗಿರುವ ಹೆಂಡತಿಯು ಆಂತರಿಕವಾದ ಉತ್ಸಾಹದಿಂದ ನನ್ನ ಹತ್ತಿರಬಂದಳು. ಬಂದವಳು ನನ್ನ ಕೈಯನ್ನು ಹಿಡಿದು

ಕೊಂಡು ತನ್ನ ಸ್ವಾಮಿಯ ಹಾಸಿಗೆಯ ಹತ್ತಿರ ಕರೆದುಕೊಂಡು ಹೋದಳು. ಅಲ್ಲಿ ಇಬ್ಬರೂ ನಾನಾ ಪ್ರಕಾರವಾದ ಪ್ರೀತಿ ಮತ್ತು ಅನುರಾಗ ಭರಿತವಾದ ಮಾತುಗಳನಾಡಿ ನನ್ನನ್ನು ವಿನೋದಿತಳನ್ನಾಗಿ ಮಾಡುವಪ್ರಯತ್ನವನ್ನು ಜರುಗಿಸಿದರು. ಕಾರಾಗಾರದಲ್ಲಿದ್ದಾಗ ಆತನ ಮಾತನ್ನು ಕೇಳಿ ನಾನು ಒಂದು ತಡವೆ ಇದ್ದಕ್ಕಿದ್ದಹಾಗೆ ಜ್ಞಾನಶೂನ್ಯಳಾಗಿ ಸ್ವಲ್ಪಹೊತ್ತು ವಿಮೋಹಿತಳಾಗಿದ್ದೆ ಆ ತಪ್ಪನ್ನು ಸ್ವಾಮಿಗೆ ಅರುಹಿದ್ದೆನು. ಈ ತಡವೆಯು ಹಾಗೆಯೇ ಮತಿಭ್ರಷ್ಟವಾದೀತೆಂಬ ಭಯದಿಂದ ಅವರು ಮಾತನಾಡುವಾಗೆಲ್ಲಾ ನಿರಂತರವೂ ಪ್ರಭುಗಳ ಚರಣಗಳ ಸ್ಮರಣೆ ಮಾಡುತಲಿದ್ದೆನು. ಭಾಗ್ಯಬಲದಿಂದ ಈ ತಡವೆ ಯಾವ ವಿಘ್ನವೂ ಉಂಟಾಗಲಿಲ್ಲ.

ಜ್ಞಾನಾನಂದ—ಅನಂತರ ?

ಶಾಂತಿ--ಅನಂತರ ಪ್ರಭುಗಳ ಉಪದೇಶಾನುಸಾರವಾಗಿ ಪ್ರಭುಗಳನ್ನೇ ಕಾಯಮನೋವಾಕ್ಯಗಳಿಂದ ಸ್ಮರಿಸುತ್ತ ರೋಗಿಗೆ ಶರೀರದಲ್ಲಿ ಬಲವು ಬರಲೆಂದು ಪ್ರಾರ್ಥಿಸಿದೆನು. ರೋಗಿಯು ತನಗೆ ಯಾವದುರ್ಬಲವೂ ಇಲ್ಲವೆಂದು ಹೇಳಿದನು. ತದನಂತರ ಅವನು ಆಹಾರದಲ್ಲಿ ಇಚ್ಛೆಯಿಲ್ಲವೆಂದು ಹೇಳಿದಮೇಲೆ ನಾನು ಊಟಕ್ಕೆ ತರುವುದಾಗಿ ಹೇಳಿದೆ. ಆತನು ಸಂತೋಷವಾಗಿ ಚೆನ್ನಾಗಿ ಊಟಮಾಡಿದನು ಅನಂತರ ಗಂಡಹೆಂಡಿರಿಬ್ಬರೂ ನನ್ನನ್ನು ಅವರ ಗೃಹವಾಸಿಯಾಗಿದ್ದುಕೊಂಡು ಇರುವುದಕ್ಕೋಸ್ಕರ ಬಹುತರವಾಗಿ ಪ್ರಬೋಧಿಸಲು ಪ್ರಯತ್ನಪಟ್ಟರು. ಆದರೆ ನಾನು ಒಪ್ಪಿಕೊಳ್ಳಲಿಲ್ಲ. ಹಾಗೆ ಮಾಡಿದುದು ಒಳ್ಳೆಯದೊ ಅಥವಾ ಕೆಟ್ಟದ್ದೊ ನಾನರಿಯೆನು. ಆದರೆ ನಾನು ಅವರನ್ನು ಪದೆಪದೆ ನೋಡುವುದಕ್ಕೊಪ್ಪಿಕೊಂಡು ಬಂದಿದ್ದೇನೆ. ಮತ್ತು ತಮ್ಮ ಅಭಿಪ್ರಾಯಾನುಸಾರವಾಗಿ ಅವರು ತೀರ್ಥಯಾತ್ರೆ ಮಾಡುವುದು ಒಳ್ಳೆಯದೆಂದು ಅವರಿಗೆ ತಿಳಿಸಿದ್ದೇನೆ

ಜ್ಞಾನಾನಂದ—ಬಹಳ ಒಳ್ಳೆಯದು ಮಾಡಿದೆ. ಹೇಗಾದರೂ ಆಗಲಿ ಆ ಇಬ್ಬರು ಸಾಧು ಸಜ್ಜನರನ್ನು ನಮ್ಮ ಸಂಪ್ರದಾಯದ ದಳಕ್ಕೆ ಸೇರಿಸಿಕೊಳ್ಳಬೇಕು. ಅದಕ್ಕೋಸ್ಕರ ನೀನು ಮಧ್ಯಮಧ್ಯೆ ಹೋಗಿ ಬರುವುದು ಆವಶ್ಯಕ. ಪುನಃ ಮತ್ತಾವಾಗ ಹೋಗಬೇಕೆಂದಿರುತ್ತಿ ?

ಶಾಂತಿ—ಯಾವಾಗ ಅಪ್ಪಣೆಯಾದರೆ ಆಗ ಹೋಗುತ್ತೇನೆ. ಆ ವಾರದಲ್ಲಿ ಒಂದು ನೋಡುವುದಾಗಿ ಅವರಿಗೆ ಹೇಳಿದ್ದೇನೆ. ತಮ್ಮ ಇಷ್ಟ

ಜ್ಞಾನಾನಂದ—ಹಾಗೆಯೇ ಆಗಲಿ—ನೀನು ಇಲ್ಲಿಲ್ಲದಿರುವಾಗ ನಿನ್ನ ಈ ಶಾಂತಿನಿಕೇತನಕ್ಕೆ ಇನ್ನಿಬ್ಬರು ಅತ್ಯಂತ ಉಗ್ರಸ್ವಭಾವವುಳ್ಳ ದುಶ್ಚರಿತ್ರರಾದ ವರು ಬಂದಿದ್ದಾರೆ. ನೀನು ಅವರನ್ನು ನೋಡಬೇಕಾದುದು ಬಹಳ ಆವಶ್ಯಕ ವಾಗಿದೆ ಇಲ್ಲದಿದ್ದರೆ ಅವರ ಉನ್ನತಿಗೆ ಉಪಾಯಾಂತರವೇ ಇಲ್ಲವಾಗಿದೆ.

ಶಾಂತಿಯು ಅವನತ ಶಿರಳಾಗಿ, ಅವರ ಸ್ವಭಾವವು ಬಹಳ ಕಲುಷಿತ ವಾದುದೊ ? ಅವರು ಅತ್ಯಂತ ಉಚ್ಛೃಂಖಲರೆ ? ಎಂದಳು.

ಜ್ಞಾನಾನಂದ—ಇನ್ನು ಅವರ ಹಾಗೆ ದುಶ್ಚರಿತ್ರರು ಯಾರೂ ಇರಲಾ ರರು, ಅದಕ್ಕೋಸ್ಕರ ಅವರನ್ನು ನೋಡುವುದಕ್ಕೆ ಭಯಪಡುತ್ತೀಯಾ ?

ಶಾಂತಿ—ಯಾವುದಕ್ಕೆ ಭಯ ? ಪ್ರಭೊ ! ತಮ್ಮ ಉಪದೇಶವನ್ನು ಚೆನ್ನಾಗಿ ಅರಿತವಳಾಗಿದ್ದರೆ ಈ ಪ್ರಪಂಚದಲ್ಲಿ ನನಗೆ ಭಯಕ್ಕೆ ಸಂಭವವೇ ಇಲ್ಲ ಸುಖದುಃಖ, ಮಾನಾಪಮಾನ, ಕಾರ್ಯಾಕಾರ್ಯ, ಆತ್ಮಪರ, ಇವುಗಳನ್ನೆಲ್ಲಾ ತ್ಯಜಿಸಬೇಕೆಂದು ಪ್ರಭುಗಳ ಉಪದೇಶವಾಗಿದೆ. ಕಾರ್ಯಮಾಡುತ್ತೇನೆ, ತಮ್ಮ ಅಪ್ಪಣೆಯಪ್ರಕಾರ, ಕಾರ್ಯಮಾಡುವುದಿಲ್ಲವಾದರೆ, ಅದೂ ತಮ್ಮ ಅಪ್ಪಣೆಯ ಪ್ರಕಾರವಾಗಿದೆ. ಫಲಾಫಲವನ್ನು ತಮ್ಮ ಚರಣದಲ್ಲಿ ವಿಜ್ಞಾಪಿಸುತ್ತೇನೆ ಆ ಕಾರ್ಯದ ಲಾಭಾಲಾಭವೇನೋ ಅದು ಪ್ರಭುಗಳಿಗೇವೆ ಗೊತ್ತು, ಅದನ್ನು ತಿಳಿದುಕೊಳ್ಳುವುದಕ್ಕೆ ನನಗೆ ಶುದ್ಧವಾಗಿ ಇಷ್ಟವಿಲ್ಲ. ಆ ಇಬ್ಬರು ಮನು ಷ್ಯರು ಎಲ್ಲಿದ್ದಾರೆ ?

ಜ್ಞಾನಾನಂದ—ದೀಕ್ಷಿತರಾಗದಿರುವರು ಇರುವಸ್ಥಳದಲ್ಲಿ ಅವರ ಬಾ ಯಲ್ಲಿದ್ದಾರೆ.

ಶಾಂತಿ—ಈಗ ಪ್ರಭುಗಳ ಅಪ್ಪಣೆ ಮತ್ತಾವುದೂ ಇಲ್ಲವೊ ?

ಜ್ಞಾನಾನಂದ—ಇಲ್ಲ, ತಾಯಿ !

ಶಾಂತಿ—ಹಾಗಾದರೆ ಈಗ ಹೋಗಿಬರುತ್ತೇನೆ.

ಶಾಂತಿಯು ಹಿಂದಿರುಗಿದಳು. ಜ್ಞಾನಾನಂದನು ಮನಸ್ಸಿನಲ್ಲಿ, ನಿನ್ನ ಹಾಗೆ ಈ ಪ್ರಪಂಚದಲ್ಲಿ ನಿಷ್ಕಾಮವಾದ ಧರ್ಮವನ್ನು ತಿಳಿದವರು ಮತ್ತಾರೂ ಇಲ್ಲ. ನಿನ್ನ ಯೋಗಚರ್ಚೆಯು ಸಾರ್ಥಕವಾಯಿತು, ನಿನ್ನ ಯೋಗಸಾಧನೆಯು

ಸಾರ್ಥಕವಾಯಿತು. ಶ್ಯಾಮಸುಂದರನು ಪ್ರಾಣಿಗಳ ಮೇಲೆ ಅತ್ಯಂತ ಕರುಣಾ ಪರವಶನಾಗಿಯೇ ನಿನ್ನಂತಹ ದೇವಿಯನ್ನು ಆಗಿಂದಾಗ ಧರಾಧಾಮಕ್ಕೆ ಕಳುಹಿಸುತ್ತಾನೆ. ನೀನು ನನ್ನ ಶಿಷ್ಯಳಾದರೂ ನಾನು ನಿನ್ನ ಶಿಷ್ಯನಾಗುವುದಕ್ಕೆ ಯೋಗ್ಯನಲ್ಲ. ನಿನ್ನ ಸಾಹಸ, ನಿನ್ನ ಧೀರತೆ, ನಿನ್ನ ಸದ್ವಿವೇಚನೆ, ನಿನ್ನ ಪವಿತ್ರತೆ, ನಿನ್ನ ಧರ್ಮಮಯತಾ, ಈ ಸದ್ಗುಣಗಳನ್ನೆಲ್ಲಾ ಪರೀಕ್ಷೆ ಮಾಡಿದ ಹಾಗಾಯಿತು. ವತ್ಸೆ! ಈ ದಿನ ನಿನಗೆ ವಹಿಸಿರುವ ಭಾರವಾದ ಕೆಲಸದಿಂದ ನಿನ್ನ ತೇಜಸ್ಸಿನ ಪರೀಕ್ಷೆಯಾಗುತ್ತದೆ. ನಾನು ಇಷ್ಟು ದಿನ ಯೋಗ ಸಾಧನೆಮಾಡಿ ಅದರ ಬಲದಿಂದ ಅಷ್ಟಸಿದ್ಧಿಯಲ್ಲಿ ಸ್ವಲ್ಪಮಾತ್ರವಾದರೂ ಸಿದ್ಧಿಯನ್ನು ಹೊಂದಿದ್ದರೆ, ಆ ಸಿದ್ಧಿಯು ನನ್ನ ಇಷ್ಟಪ್ರಕಾರವಾಗಿ ನಿನ್ನನ್ನು ಆಶ್ರಯಿಸಿರುವುದು, ಆದುದರಿಂದ ನಿನ್ನನ್ನು ಪರೀಕ್ಷೆ ಮಾಡುವುದರಿಂದ ನನ್ನ ಸ್ವಂತ ಪರೀಕ್ಷೆಯೇ ಆಗುವುದೆಂದಂದುಕೊಂಡನು.

ಶಾಂತಿಯು ಗುರುವಿನಿಂದ ಅಪ್ಪಣೆಯನ್ನು ಪಡೆದು ಸ್ವಲ್ಪ ದೂರ ಬರುವುದರೊಳಗಾಗಿ ಹರಿಮಂದಿರದಲ್ಲಿ ಮಂಗಳಾರತಿ ಸೂಚಕವಾದ ವಾದ್ಯಧ್ವನಿಯೆದ್ದಿತು. ಆ ವಾದ್ಯಧ್ವನಿಯನ್ನು ಕೇಳಿ ಶಾಂತಿಯು ಮೊದಲು ಹರಿಮಂದಿರಕ್ಕೆ ಹೋದಳು.

ಅಲ್ಲಿ ಹೋಗಿ ನೋಡಲಾಗಿ ಆ ವಿಗ್ರಹಗಳ ಸಮಕ್ಷಮ ಕೈಮುಗಿದುಕೊಂಡು ಅನೇಕ ಗಂಡಸರೂ ಹೆಂಗಸರೂ ನಿಂತುಕೊಂಡಿದ್ದರು. ಎಲ್ಲರೂ ಒಂದೇ ಸಮನಾದ ಉಡುಪುಳ್ಳವರಾಗಿ ಪ್ರಶಾಂತವಾದ ಮೂರ್ತಿಯನ್ನು ಧಾರಣೆಮಾಡಿದ್ದರು. ಎಲ್ಲರೂ ಕಾವಿಬಟ್ಟೆಯನ್ನುಟ್ಟಿದ್ದರು. ಇದುರಿಗೆ ಒಬ್ಬ ಬ್ರಾಹ್ಮಣನು ಪ್ರದೀಪ್ತವಾದ ಬೆಳ್ಳಿಯ ಪಂಚಾರತಿಯನ್ನು ಹಿಡಿದುಕೊಂಡು ದೇವರಿಗೆ ಆರತಿಯನ್ನು ಮಾಡುತಲಿದ್ದನು. ಶಾಂತಿಯು ಹೋಗಿ ಆ ಜನರ ಸಮೂಹದ ಹಿಂದುಗಡೆ ನಿಂತುಕೊಂಡಳು. ಆಗ ಎಲ್ಲರೂ ದೇವರ ಮಂಗಳಾರತಿಯನ್ನು ನೋಡುವುದರಲ್ಲಿ ನಿವಿಷ್ಟಚಿತ್ತರಾಗಿದ್ದರು. ಅದುಕಾರಣ ಯಾರೂ ಅವಳನ್ನು ನೋಡಲಿಲ್ಲ. ಮಂಗಳಾರತಿಯಾಯಿತು. ದರ್ಶನಕ್ಕೆ ಬಂದಿದ್ದವರೆಲ್ಲರೂ ಭಕ್ತಿಪೂರಿತವಾದ ಮನಸ್ಸಿನಿಂದ ದೇವರಿಗೆ ನೆಲದಮೇಲೆ ಬಿದ್ದು ಸಾಷ್ಟಾಂಗವಾಗಿ ನಮಸ್ಕಾರ ಮಾಡುತಲಿದ್ದರು. ಆ ಸಮಯದಲ್ಲಿ ಸಮುಚ್ಚವಾದ ಅಪ್ಸರಕಂಠವನ್ನು ಹಿಂದೆ ಹಾಕುವ ಮಧುರವಾದ ಸ್ವರದಿಂದ ಅಪೂರ್ವವಾದ ಸಂಗೀತ ಧ್ವನಿಯೆದ್ದು ಅಲ್ಲಿ

ನೆರದಿದ್ದವರ ಹೃದಯವನ್ನು ಅಪಾರ್ಥಿವವಾದ ಆನಂದ ರಸದಿಂದ ತುಂಬಿಸಿ ತೇಲಾಡಿಸಿತು. ಶಾಂತಿಯು ಹಾಡುತ್ತಾಳೆ.

ದಿನಮಣಿ ಮಂಡಲ ಮಂಡನ ಭವಖಂಡನ
ಮುನಿಜನ ಮಾನಸಹಂಸ ||
ಕಾಳಿಯ ವಿಷಧರ ಗಂಜನ ಜನರಂಜನ
ಯದುಕುಲ ನಳಿನ ದಿನೇಶ ||
ಮಧುಮುರ ನರಕ ವಿನಾಶನ ಗರುಡಾಸನ |
ಸುರಕುಲ ಕೇಳಿನಿದಾನ |
ಅಮಲ ಕಮಲದಳ ಲೋಚನ ಭವಲೋಚನ
ತ್ರಿಭುವನ ಭವನನಿದಾನ ||
ಜನಕಸುತ ಕೃತಭೂಷಣ ಜಿತದೂಷಣ
ಸಮರಶಮಿತ ದಶಕಂಠ |
ಅಭಿನವಜಲಧರಸುಂದರ ಧೃತಮಂದರ
ಶ್ರೀಮುಖ ಚಂದ್ರ ಚಕೋರ||

ಸಂಗೀತವನ್ನು ಕೇಳಿದ ಮಾತ್ರದಿಂದಲೇ ಎಲ್ಲರೂ ಶಾಂತಿಯ ಹೊರತ ಮತ್ತಾರೂ ಹಾಡಿಲ್ಲವೆಂದು ತಿಳಿದು ಕೊಂಡರು. ಆಗ ಎಲ್ಲರೂ ಸಸಂಭ್ರಮದಿಂ ಅತ್ತಕಡೆ ತಿರುಗಿ ನೋಡಿದರು. ಸಂಗೀತವು ಮುಗಿಯುತಲೇ ಎಲ್ಲರೂ ಶಾಂ ದೇವಿಗೆ ಭಕ್ತಿ ಪುರಸ್ಸರವಾಗಿ ಸಾಷ್ಟಾಂಗ ಪ್ರಣಾಮವನ್ನು ಮಾಡಿದರು. ಶ್ಯಾವ ಸುಂದರನು ನಿಮ್ಮೆಲ್ಲರ ಮನಸ್ಸನ್ನು ತನ್ನ ಕಡೆಗೆ ಆಕರ್ಷಣ ಮಾಡಿಕೊಳ್ಳಲೆಂದು ಆಶೀರ್ವಾದ ಮಾಡಿದಳು. ಪ್ರಣಾಮವನ್ನು ಮಾಡಿದವರಲ್ಲನೇಕರು ಶಾಂ ಗಿಂತಲೂ ಹೆಚ್ಚು ವಯೋಜ್ಯೇಷ್ಠರಾಗಿದ್ದರು ಶಾಂತಿಯು ಎಲ್ಲರೂ ಪ್ರಣಾವ ವನ್ನು ಮಾಡಿದಾಗ ಸರ್ವಾಂತಃಕರಣದಲ್ಲಿ ಗುರುದೇವನನ್ನು ಸ್ಮರಿಸಿಕೊಳ್ಳುತ್ತ ಮೇಲೆ ಹೇಳಿದ ಆಶೀರ್ವಾದವನ್ನು ಮಾಡಿದಳು.

ಅಲ್ಲಿದ್ದವರೆಲ್ಲರೂ ಒಬ್ಬೊಬ್ಬರಾಗಿ ಶಾಂತಿಯಿಂದ ಅಪ್ಪಣೆಯನ್ನು ತೆಗದು ಕೊಂಡರು. ಶಾಂತಿಯು ಎಲ್ಲರೊಡನೆಯೂ ಧರ್ಮೋನ್ನತಿ ವಿಷಯಕವಾಗಿ ಮಾತನಾಡಿ ಅವರನ್ನು ಕಳುಹಿಸಿಕೊಟ್ಟಳು. ಅನಂತರ ಅವಳು ಆ ಪುಣ್ಯಾಶೀ ಳಾದ ಸುರಮೆಯು ಬಳಿಗೆ ಹೋದಳು.

# ಮೂರನೆಯ ಪರಿಚ್ಛೇದ.

ಆ ಶಾಂತಿನಿಕೇತನದಲ್ಲಿ ಅರುಣೋದಯವಾಯಿತು. ಆ ನಿಬಿಡವಾದ ಅರಣ್ಯದ ಮಧ್ಯದಲ್ಲಿ ಸರ್ವಮೋಹನವಾದ ಬಾಲಾರುಣಕಿರಣದ ಪ್ರಕಾಶವು ವಿಭಾಸಿತವಾಯಿತು. ಮರಗಳನ್ನು ಆಶ್ರಯಿಸಿಕೊಂಡಿದ್ದ ವಿಹಂಗಮಕುಲವು ಮಧುರವಾದ ಸಂಗೀತದಿಂದ ಉಷೆಯ ಸಮಾಗಮನವನ್ನು ಘೋಷಣೆ ಮಾಡಿದವು. ದಳದಳವಾಗಿ ಶಿಖಿಶಿಖಿನೀಗಳು ಶಾಂತಿನಿಕೇತನದಲ್ಲಿ ಆಹಾರವನ್ನು ಹುಡುಕುವ ಆಶೆಯಿಂದ ಅಲ್ಲಿಗೆ ಪ್ರವೇಶ ಮಾಡಿದವು, ಮತ್ತು ಭಯಚಕಿತವಾದ ಹರಿಣಗಣವೂ ನಿರ್ಭೀಕವಾದ ಭಾವದಿಂದ ಆ ಹಿಂಸಾದ್ವೇಷ ವಿರಹಿತವಾದ ಪುಣ್ಯಪುರಿಯ ಸಮೀಪದಲ್ಲಿ ಬಂದು ವಿಹರಣ ಮಾಡುತಲಿರುವುವು. ಆ ಪುರವಾಸಿಗಳಾದ ದೇವದೇವಿಯರು ಸೂರ್ಯೋದಯಕ್ಕೆ ಬಹಳ ಮೊದಲು ಭಕ್ತಿಭಾವದಿಂದ ಹರಿನಾಮೋಚ್ಚಾರಣೆಮಾಡುತ, ತಮ್ಮ ತಮ್ಮ ಕೃಷ್ಣಾಜಿನ ಶಯ್ಯೆಗಳನ್ನು ಬಿಟ್ಟೆದ್ದು ಲಲಿತವಾದ ಅನೇಕವಾದ ರಾಗಗಳಲ್ಲಿ ಮಧುರವಾದ ಸ್ವರಗಳಿಂದ ಶ್ಯಾಮಸುಂದರನ ಸ್ತೋತ್ರವನ್ನು ಹೇಳುತ್ತ ತಮ್ಮ ತಮ್ಮ ಕರ್ತವ್ಯವಾದ ಕಾರ್ಯಗಳಲ್ಲಿರುತಲಿದ್ದರು

ಆ ವಿಶಾಲವಾದ ಪುರಿಯ ಅಧಿವಾಸಿಗಳು ಯಾರೂ ಕೆಲಸವಿಲ್ಲದೆ ಅಲಸರಾಗಿರುತ್ತಿರಲಿಲ್ಲ ಆಶ್ಚರ್ಯಕರವಾದ ನಿಯಮಗಳಿಗೊಳಪಟ್ಟವರಾಗಿ ಅವರೆಲ್ಲರೂ ಹಗಲೆಲ್ಲಾ ಅಲ್ಲಿಯೇ ನಿರಂತರವಾಗಿ ಕೆಲಸಗಳಲ್ಲಿ ನಿರತರಾಗಿರುತಲಿದ್ದರು. ಅವರೆಲ್ಲರೂ ಒಂದಪೂರ್ವವಾದ ಪರಿಪಾಟಿಗೊಳಪಟ್ಟವರಾಗಿ ಕೆಲವರು ಹರಿಣಗಳಿಗೂ ಪಕ್ಷಿಗಳಿಗೂ ಆಹಾರವನ್ನು ಕೊಡುವರು ಕೆಲವರು ಅಡುಗೆ ಮಾಡುವುದಕ್ಕೆ ಪದಾರ್ಥಗಳನ್ನು ಸಿದ್ಧಪಡಿಸುತಲಿದ್ದರು. ಕೆಲವರು ಪುಷ್ಪವನ್ನೆತ್ತಿಕೊಂಡು ಬರುತ್ತಾರೆ. ಕೆಲವರು ಸೌದೆಯನ್ನು ತರುತ್ತಾರೆ—ಕೆಲವರು ಪೂಜಾಸಾಮಗ್ರಿಗಳನ್ನು ಸಿದ್ಧಪಡಿಸುತ್ತಾರೆ. ಹೀಗೆ ಬೇರೆಬೇರೆ ಕಾರ್ಯಗಳಲ್ಲಿ ಬೇರೆಬೇರೆ ಜನರು ನಿರತರಾಗಿದ್ದಾರೆ. ಕಾರ್ಯದ ಗುರುತ್ವಾನುಸಾರವಾಗಿ ಆಯಾಕೆಲಸಕ್ಕೆ ಹೆಚ್ಚುಮಂದಿ ನಿಯುಕ್ತರಾಗಿದ್ದಾರೆ. ಒಬ್ಬರ ಕಾರ್ಯದಲ್ಲಿ ಮತ್ತೊಬ್ಬರ ಸಂಘರ್ಷಣ ಅಥವಾ ಚರ್ಚೆಯಿಲ್ಲ. ಒಬ್ಬರ ಸಂಗಡ ಮತ್ತೊಬ್ಬರು ಬೇರೆಮಾತನಾಡು

ತ್ತಿರಲಿಲ್ಲ. ಎಲ್ಲರೂ ನಗುಮುಖರಾಗಿ ಸಂತೋಷವುಳ್ಳವರಾಗಿದ್ದರು. ಶಾಂತಿ ಮತ್ತು ಆನಂದವು ಎಲ್ಲರ ಸರ್ವಾಂಗಗಳಲ್ಲಿಯೂ ತುಳುಕುತಲಿರುವುದು ಹೆಂಗಸರೂ ಗಂಡಸರೂ ಸಮಭಾವದಲ್ಲಿ ಘನೀಭೂತವಾದ ಹಾಗೆ ನಿರ್ದಿಷ್ಟವಾದ ಕರ್ತವ್ಯಪಾಲನದಲ್ಲಿ ನಿಯುಕ್ತರಾಗಿದ್ದರು. ಆದರೆ ಯಾರ ಹೃದಯದಲ್ಲಿಯೂ ಬಿಂದುಮಾತ್ರವಾದರೂ ದುಷ್ಟವಾದ ಪ್ರವೃತ್ತಿಯಿಲ್ಲ. ಯಾರ ಮುಖದಲ್ಲಿಯೂ ಸ್ವಲ್ಪವೂ ಅಪವಿತ್ರತೆಯಿಲ್ಲ. ಮತ್ತು ಯಾರ ಕಣ್ಣುಗಳಲ್ಲಿಯೂ ತಿಲಮಾತ್ರವಾದರೂ ಲಾಲಸೆಯಿಲ್ಲ. ಎಲ್ಲರೂ ಪರದುಃಖಸ್ರವಣಹೃದಯರಾಗಿ ಹರಿಭಕ್ತಿಪರಾಯಣರಾಗಿ ಅಸಚ್ಚಿಂತಾವರ್ಜಿತರಾಗಿದ್ದರು. ಅಹೊ ! ಈ ವಸುಂಧರೆಯಲ್ಲಿ ಈ ಸ್ವರ್ಗ ಧಾಮವನ್ನು ಪ್ರತಿಷ್ಠೆಮಾಡಿದವರಾರು ? ಸ್ವರ್ಗದಲ್ಲಿ ಇದಕ್ಕಿಂತಲೂ ಅಧಿಕತರವಾದ ಸುಖಕರವಾದುದುಂಟೋ ಅಥವಾ ಇಲ್ಲವೋ ತಿಳಿಯದು.

ಆ ಪುಣ್ಯಧಾಮದಲ್ಲಿ ಎಲ್ಲಾ ಕಡೆಯಲ್ಲಿಯೂ ಇಂತಹ ವಿಮಲವಾದ ಆನಂದವು ವಿದ್ಯಮಾನವಾಗಿರಲಿಲ್ಲ ನಾವು ಈ ದಿನ ಹೋಗಿ ನೋಡಬೇಕೆಂದು ಇರುವ ಸ್ಥಳಗಳು ಒಂದೊಂದು ಅಸತು ಮತ್ತು ದುಃಖದ ಆಲಯವಾಗಿದೆಯೆಂದು ಹೇಳಿದರೂ ಅತ್ಯುಕ್ತಿಯಾಗಲಾರದು. ಒಂದುಸ್ಥಳದಲ್ಲಿ ಇಬ್ಬರು ಪರುಷವಾದ ಮೂರ್ತಿಯುಳ್ಳ ಪುರುಷರು ಕುಳಿತುಕೊಂಡು ಮಾತುಕಥೆಗಳನ್ನು ಆಡುತ್ತಾರೆ. ಅವರ ದೇಹಘಟನೆಯನ್ನು ನೋಡಿದರೆ ಅವರು ಬಹಳ ಬಲಿಷ್ಟರೆಂದು ಹೇಳಬೇಕಾಗಿದೆ. ಅವರು ಕೃಷ್ಣಕಾಯರು ಆರಕ್ತವಾದ ಲೋಚನವುಳ್ಳವರು ಅವರ ಮಾತುಕಥೆಯನ್ನು ಕೇಳಿದರೆ ಅವರು ಅತ್ಯಂತ ಮೂರ್ಖರೆಂದೂ ಅಸಭ್ಯರೆಂದೂ ಮತ್ತು ಕಲುಷಿತ ಸ್ವಭಾವವುಳ್ಳವರೆಂದೂ ಬೋಧೆಯಾಗುವುದು. ಅವರ ಸಂಭಾಷಣೆಯ ಕೆಲವಂಶವನ್ನು ಪಾಠಕರಿಗೆ ತಿಳಿಸಬೇಕೆಂದು ನಮಗೆ ಆಶೆಯುಂಟಾಗಿದೆ. ಅವರಿಬ್ಬರಲ್ಲೊಬ್ಬನು, ರಾಮು ! ಬಹಳ ಕಷ್ಟವಾಗಿ ಹೋಯಿತು.

ರಾಮು — ಏನುಮಾಡುವುದಕ್ಕಾದೀತು ! ಹೇಳಣ್ಣ !

ಯದು — ಹೋಗು ಮುರ್ಖಾಳ ! ಹಾಗೆ ಹೇಳುವವನಾದರೆ, ಇಷ್ಟು ಯೋಚನೆಯೇತಕ್ಕೆ ? ಮಾಡುವುದೇನು ? ಬಹಳ ಕಷ್ಟಕ್ಕೆ ಬಿದ್ದಹಾಗಾಯಿತು. ಸುಮ್ಮನಿರಬೇಕು ಭಾರಿಮನೆ. ವಿಶಾಲವಾಗಿದೆ. ಆದರೆ ನಾಲ್ಕುಕಡೆಯೂ ದೊಡ್ಡ ದೊಡ್ಡ ಗೋಡೆ. ಹೇಗಾದರೂ ಮಾಡಿ ಓಡಿಹೋಗೋಣವೆಂದರೆ ಸ್ವಲ್ಪಕೂಡ ಸಂದು

ಗೊಂದುಇಲ್ಲ ಒಂದುಕಡೆ ದೊಡ್ಡ ಬಾಗಿಲು, ಅದೂ ಕಬ್ಬಿಣದ್ದು. ಮತ್ತೊಂದು ಕಡೆಯಲ್ಲಿ ಬಾಗಿಲು ಕಟ್ಟಿಹೋಗಿದೆ. ಎಷ್ಟು ಒದ್ದರೂ ಬಾಗಿಲು ಮುರಿಯುವ ಹಾಗಿಲ್ಲ. ಹೀಗಿರುವಾಗ ಮಾಡುವುದೇನು ? ಅಣ್ಣ !

ರಾಮ—ಯಾರು ಕರೆತಂದರು ? ಏತಕ್ಕೆ ಎಲ್ಲಿಂದ ಕರೆತಂದರು ? ಏನೂ ಗೊತ್ತಾಗಲಿಲ್ಲ. ಅಣ್ಣಾ ! ಕಡೆಗೆ ಏನಾದರೂ ಭೂತವು ಹಿಡಿದುಕೊಂಡರೆ ಮಾಡುವುದೇನು ? ಏನುಗೊತ್ತಪ್ಪಾ ! ನೀನೇನಾದರೂ ಹೇಳು. ಇದರ ನೆರೆ ಹೊರೆಯಲ್ಲಿ ಇನ್ನೂ ಮನೆಗಳಿವೆ. ಆದರೆ ಹೆಂಗಸರು ಬಹಳ ಮಂದಿಯಿದ್ದಾರೆ, ಒಂದೊಂದು ತಡವೆ ಎಂತಹ ಕಂಠಸ್ವರವು ಬಂದು ಕಿವಿಗೆ ಬೀಳುತ್ತದೆ ! ಅಣ್ಣಾ ! ಎಂತಹ ಸೊಗಸಾದ ಹೆಂಗಸರಿದ್ದಾರೆ !

ಯದು—ಆ ಹೆಂಗಸರಾದರೂ ಬಂದು ಮಾತನಾಡುವುದಾದರೆ ಹೇಗಾ ದರೂ ಹೊತ್ತುಕಳೆಯಬಹುದು. ಎಲೊ, ಅಣ್ಣ ! ಕುಡಿಯುವುದಕ್ಕೆ ಸಾರಾಯಿ ಇಲ್ಲ. ತಿನ್ನುವುದಕ್ಕೆ ಗಾಂಜಾಯಿಲ್ಲ. ಒಂದು ಹೆಣ್ಣುಕೂಡಇಲ್ಲ. ಇಲ್ಲಿಕೂತು, ಮಾಡುವುದೇನು ? ಹೇಳು.

ಹೀಗೆ ನಾನಾ ದುಷ್ಟವಾದ ಮಾತನಾಡುತ್ತಿರುವಾಗ, ಕಬ್ಬಿಣದ ಬಾಗಿಲು ನಿಶ್ಶಬ್ದವಾಗಿ ತೆರೆಯಲ್ಪಟ್ಟಿತು. ಮೆಲ್ಲಮೆಲ್ಲನೆ ಶಾಂತಿದೇವಿಯು ಅಲ್ಲಿಕಾಣಿಸಿ ಕೊಂಡಳು. ಅವಳನ್ನು ನೋಡಿದ ಕೂಡಲೇ ರಾಮನು ಯದುವಿನ ಬೆನ್ನುತಟ್ಟಿ ದನು. ಅನಂತರ ರಾಮನು, ಎಲೊ ! ತಾಯಿ ಸರಸ್ವತಿಯು ನಮ್ಮ ದುಃಖವನ್ನು ತಿಳಿದು ಬಂದಿದ್ದಾಳೆ. ಏನು ಹೇಳುತ್ತಿ ! ಎಂತಹ ಮಾತು ! ಅವಳ ಚಹರೆ ಹೇಗಿದೆ! ಈಗ ಒಂದು ಶೀಶೆ ಸಾರಾಯಿ ಸಿಕ್ಕಿದರೆ ಬಹಳ ಚನ್ನಾಗಿದೆ ಎಂದನು.

ಯದು—ತಾಯಿಯು ಅಂತಃಕರಣವಿಟ್ಟು ನೋಡಿದರೆ ಒಂದು ಹೆಣ್ಣನ್ನೂ, ಜತೆಮಾಡಿಕೊಡುವಳು. ಆಗ ಆವಶ್ಯಕವಾಗಿ ಸಾರಾಯಿಯೂ ಸಿಕ್ಕುವುದು, ಛಿ ! ಅದೇಕೆ ಹೆಂಗಸು ಅಲ್ಲಿಯೇ ನಿಂತುಬಿಟ್ಟಳು ! ದಯಮಾಡಿ ಇತ್ತಕಡೆ ಅವಳು ಬರಬಾರದೆ ?

ಶಾಂತಿದೇವಿಯು ನಿರ್ಭೀಕ ಭಾವದಿಂದ ಸ್ವಲ್ಪ ಸ್ವಲ್ಪ ಮುಂದಾದಳು. ಅವಳನ್ನು ಕಂಡು, ರಾಮನು ಅಸ್ಫುಟವಾದ ಸ್ವರದಿಂದ ಯದುವಿನ ಕಿವಿಯಲ್ಲಿ, ಬೇಡಕಣೊ ! ಏನೂ ಹೇಳಬೇಡ. ಕಾಣುವುದಿಲ್ಲವೆ—ಎಂತಹ ದೇವರಹಾಗಿ

ಕುವವಳು ? ಏನು ಮಾಡಿದರೆ ಏನಾದೀತೊ ? ಆ ಚಹರೆಯಲ್ಲಿ ಗೊತ್ತಾಗುವು ದಿಲ್ಲವೆ ? ಮನುಷ್ಯರಿಗೆ ಇಂತಹ ಚಹರೆಯುಂಟೆ ! ಎಂದನು.

ಯದು — ಕ್ರುದ್ಧಭಾವದಿಂದ — ನೀನು ಎಂಥತ ಮೂರ್ಖನೋ ಅಂತಹ ಮಾತುಹೇಳುತ್ತಿ. ದೇವರು ಕೊಡಿದೆ ನಿನಗೋಸ್ಕರ — ಒಂದೆರಡು ತಮಾಷಿ ಮಾಡುತ್ತೇನೆ, ನೋಡು.

ಅನಂತರ, ದೇವಿಯ ಕಡೆಗೆ ಕಣ್ಣುಹಾಕಿ, 'ಬಾ, ನನ್ನಪ್ರಾಣ ! ಬೇಗ ಬಾ, ಭಯವೇನು ? ನಿನ್ನನ್ನು ಅನಾದರಿಸುವುದು ನಮ್ಮಪ್ಪನಿಗೂ ಸಾಧ್ಯವಿಲ್ಲ' ವೆಂದನು.

ಶಾಂತಿದೇವಿಯು ಕ್ರಮಶಃ ಆ ಇಬ್ಬರು ಬರ್ಬರರ ಸಮೀಪಕ್ಕೆ ಬಂದಳು. ಆಗ ರಾಮು ಮತ್ತು ಯದುವಿಗೆ ಮಾತು ನಿಂತುಹೋಯಿತು. ಅವರ ದುರಾಶೆಯು ಮರೆತು ಹೋಯಿತು. ಅವರ ದುರಭಿಸಂಧಿಯೂ ಮರೆತುಹೋಯಿತು. ಅವರಿಬ್ಬರೂ ರೆಪ್ಪೆಹಾಕದೆ ಆ ಅಪಾರ್ಥಿವವಾದ ಕಾಂತಿ, ಆ ಅಲೌಕಿಕವಾದ ಶೋಭಾ, ಆ ಭುವನ ದುರ್ಲಭವಾದ ತೇಜಃಪ್ರಭೆ ಇವುಗಳನ್ನು ನೋಡುತಲಿದ್ದರು. ಶಾಂತಿದೇವಿಯು ಮತ್ತಷ್ಟು ಹತ್ತಿರ ಬಂದಳು ಮತ್ತು ಯದುವಿನ ತಲೆಯ ಮೇಲೆ ತನ್ನ ನಿಷ್ಪಾಪವಾದ ಕರಕಮಲವನ್ನಿಟ್ಟು ಸ್ನೇಹ ಪೂರ್ವಕವಾಗಿ, ಮಗು ! ಹೀಗಿರುವುದಕ್ಕೆ ನಿನಗೆ ಬಹಳ ಕಷ್ಟವೆ ? ಎಂದು ಕೇಳಿದಳು.

ಹಾ ಹಾ ! ಇಂತಹ ಸ್ವರವು ಮನುಷ್ಯನ ಕಂಠಸ್ವರವಾಗಿರುವುದೆ ! ಆನಂದದಿಂದೊಡಗೂಡಿದ ಕರುಣೆಯು ಆ ದೇವಿಯ ಸರ್ವಾಂಗದಲ್ಲಿಯೂ ವರ್ಷಿಸುತಲಿದ್ದಿತು, ಹರಿ ! ಹರಿ ! ಯದು ಅವಾಕ್ಕಾದನು ರಾಮನು ಬಳಹ ಹೊತ್ತು ಆ ನಿರ್ಮಲವಾದ ವದನ ಮಂಡಲವನ್ನು ನೋಡುತ್ತ ಹಾ ಎಂದು ಬಾಯಿ ಬಿಟ್ಟುಕೊಂಡಿದ್ದನು. ಅನಂತರ ಬಟ್ಟೆಯನ್ನು ಸೊಂಟಕ್ಕೆ ಕಟ್ಟಿಕೊಂಡು ಸಾಷ್ಟಾಂಗ ನಮಸ್ಕಾರ ಮಾಡಿ, ತಾಯಿ ! ನಿನ್ನ ಮಗನ ಅಪರಾಧವನ್ನು ಕ್ಷಮಿಸು, ತಾಯಿ ! ಎಂದನು.

ಶಾಂತಿದೇವಿಯು ಪರಮಾದರದಿಂದ ಅವನ ಕೈಯನ್ನು ಹಿಡಿದು, ಭಯವೇನಪ್ಪಾ ! ಶ್ಯಾಮಸುಂದರನು ಅವಶ್ಯಕವಾಗಿ ಕ್ಷಮಿಸುವನೆಂದು ಹೇಳಿದಳು.

ಆದರೆ ಯದು ಇನ್ನೂ ಏನೂ ತೋಚದೆ ನಿಂತಿದ್ದನು. ಅವನು ಇನ್ನೂ ರೆಪ್ಪೆಹಾಕದೆ ಬಿರುಗಣ್ಣು ಬಿಟ್ಟು ಆ ಕಲುಷ ಶೂನ್ಯವಾದ ಅಪೂರ್ವವಾದ ಶ್ರೀ

ಸಂದರ್ಶನವನ್ನು ಮಾಡುತಲಿದ್ದಾನೆ ರಾಮನು ಅವನಿಗೆ ಕೈಯಿಂದ ಒಂದು ಪೆಟ್ಟನ್ನು ಕೊಟ್ಟು, ಗೊತ್ತಾಗುವುದಿಲ್ಲವೇನೋ ಮುರ್ಖಾಳ! ಸಗ್ಗದಿಂದ ತಾಯಿ ಭಗವತಿಯು ಇಳಿದು ಬಂದಿದ್ದಾಳೆ, ಕಾಣುವುದಿಲ್ಲವೆ ? ಎಂದನು.

ಶಾಂತಿ —ಇಲ್ಲ, ತಮ್ಮ ! ನಾನು ಭಗವತಿಯಲ್ಲ ನಾನು ನಿಮ್ಮ ಹಾಗೆ ಮನುಷ್ಯಳು. ಇಷ್ಟುಹೊತ್ತಿನ ಮೇಲೆ ಯದುವಿಗೆ ಮಾತನಾಡುವ ಶಕ್ತಿಯು ಒಂದಿತು, ಆಗವನು ಅಮ್ಮಾ ! ನಿನ್ನ ಕಾಲಿನ ಧೂಳಿಯನ್ನು ನನ್ನ ತಲೆ ಮೇಲೆ ಉದರಿಸಿ ನನ್ನನ್ನುದ್ಧಾರಮಾಡೆಂದನು.

ಹೀಗೆಂದು ಹೇಳಿ ಆದೇವಿಯ ಪಾದವನ್ನು ಸ್ಪರ್ಶಮಾಡುವುದಕ್ಕೆ ಪ್ರವೃತ್ತನಾದುದರ ಮೇಲೆ, ಅವಳು ಅವನನ್ನು ನಿವಾರಣೆ ಮಾಡಿ ನಿಲ್ಲಿಸಿ, ಬೇಡ, ಅಣ್ಣಾ ! ನನ್ನ ಪಾದಧೂಳಿಯಿಂದ ಫಲವೇನೂ ಇಲ್ಲ. ಸಾಕ್ಷಾತ್ ಶ್ಯಾಮಸುಂದರನೇ ನಿನ್ನನ್ನು ಈಗಲೇ ಉದ್ಧಾರಮಾಡುವನೆಂದು ಹೇಳಿದಳು.

ಯದು—ಆದರೆ, ಅಮ್ಮಾ ! ನಾನು ಬಹಳ ಪಾಪಿಯಾಗಿದ್ದೇನೆ ನಾನು ಎಷ್ಟೋಜನರನ್ನು ಎದೆಯನ್ನು ಭರ್ಜಿಯಿಂದಿರಿದು ಕೊಂದು ಹಾಕಿದ್ದೇನೆ. ಅನೇಕ ಸತೀ ಸಾವಿತ್ರಿಯರ ಧರ್ಮವನ್ನು ನಷ್ಟಪಡಿಸಿದ್ದೇನೆ. ಎಷ್ಟೋ ಕಳವು ಮಾಡಿದ್ದೇನೆ. ಅಮ್ಮಾ ! ನನ್ನ ಪಾಪಕ್ಕೆ ಪಾರವೇ ಇಲ್ಲ ನನ್ನ ಮೇಲೆ ನಿನ್ನ ದಯೆಯುಂಟಾದೀತೆ ?

ಶಾಂತಿದೇವಿಯು ಪ್ರತ್ಯುತ್ತರವನ್ನು ಕೊಡುವುದಕ್ಕೆ ಮೊದಲು, ರಾಮನು ತಾಯಿ ! ನಾನು ಯದುವಿಗಿಂತಲೂ ಸಹಸ್ರಪಾಲು ಹೆಚ್ಚು ಪಾಪಿ. ನನಗೆ ಉಪಾಯವೇ ಇಲ್ಲ. ನಾನು ದುಡ್ಡಿನ ಆಶೆಗೆ ಸಹೋದರರನ್ನು ಪ್ರಾಣದಿಂದ ಹೊಡೆದು ಹಾಕಿದ್ದೇನೆ. ನನ್ನ ಪಾಪಗಳನ್ನು ಹೋಲಿಸಿ ನೋಡಿದರೆ ಯದುವು ದೇವತೆಯೆಂದು ಹೇಳಬೇಕು ಅಮ್ಮಾ, ತಾಯಿ ! ನನ್ನ ಗತಿಯೇನೆ ? ನನಗೆ ಉಪಾಯಯಾವದು ? ಬೇಗನೆ ಹೇಳು ತಾಯಿ ! ಎಂದನು.

ಶಾಂತಿ — ಭಯವೇನಣ್ಣಾ ! ಶ್ಯಾಮಸುಂದರನು ನಿಮ್ಮಿಬ್ಬರಿಗೂ ಉಪಾಯವನ್ನು ದಯಪಾಲಿಸುವನು. ನಿಮಗೇನೂ ಭಯವಿಲ್ಲ. ಅವನು ದಯಪಾಲಿಸಿರುವುದರಿಂದಲೇ ಇಷ್ಟುದಿನಗಳಮೇಲೆ ನೀವು ಮಾಡಿದ ಪಾಪಗಳನ್ನೆಲ್ಲಾ ತಿಳಿಯುವರಾದಿರಿ. ಇನ್ನುಮೇಲೆ ನಿಮಗೆ ಯಾವ ಭಯವೂ ಇಲ್ಲ. ಈಗ ನಿಮಗೆ ಒಳ್ಳೆಯದಾಗುತ್ತದೆ.

ಯದುವು ನನ್ನನ್ನು ಏನುಮಾಡಿಬಿಡುತ್ತಿ? ಯಾವ ಉಪಾಯದಿಂದ ನನಗೆ ಮಂಗಳವಾದೀತೆಂದು ಕೇಳಿದನು.

ಶಾಂತಿ – ನೀವು ಯಾವಾಗಲಾದರೂ ಶ್ರೀಕೃಷ್ಣನನ್ನು ನೋಡಿದ್ದೀರಾ?

ಇಬ್ಬರು – ಬಹಳ ಬಹಳ ನೋಡಿದ್ದೇವೆ.

ಶಾಂತಿ—ಒಳ್ಳೆಯದಾಯಿತು ಆ ಮೂರ್ತಿಯನ್ನು ನೀವು ಈಗ ಧ್ಯಾನ ಮಾಡುತ್ತಿರಿ. ಶಿಖಿಪುಚ್ಛಚೂಡಾಧಾರಿಯಾದ ಪಿತಾಂಬರಧಾರಿಯಾದ ಶ್ರೀ ಕೃಷ್ಣನ ರೂಪವನ್ನು ನೀವು ಚಿಂತಿಸುತ್ತಿರಿ. ನೀವು ಎಷ್ಟರಮಟ್ಟಿಗೆ ಬೇರೆಕಡೆ ಮನಸ್ಸು ಹೋಗದೆ ಆ ಮೂರ್ತಿಯನ್ನು ಧ್ಯಾನಮಾಡ ಬಲ್ಲಿರೋ ಭಗವಂತನು ಅಷ್ಟುಬೇಗನೆ ಉದ್ಧಾರ ಮಾಡುವನು. ನೀವು ಮೂರು ಘಂಟೆಯುಹೊತ್ತು ಹೀಗೆ ಧ್ಯಾನಮಾಡಿರಿ. ಅನಂತರ ಪುನಃ ನಾನು ಬಂದು ನಿಮ್ಮನ್ನು ನೋಡುವೆನು. ನಿಮಗೆ ಏನೇನುಬೇಕೋ ಅದನ್ನು ಆಯಾಕಾಲದಲಿ ಒದಗಿಸಿ ಕೊಡುವೆನು.

ರಾಮು—ಅಪ್ಪಣೆಯ ಪ್ರಕಾರ.

ಯದು—ಅಮ್ಮ! ನೀನು ಒಂದುವೇಳೆ ಬರುವುದಕ್ಕೆ ಮರೆತುಹೋದರೆ ನಾವು ಬಹಳ ನಿರ್ಭಾಗ್ಯರಾಗುವೆವು

ಶಾಂತಿ—ಇಲ್ಲ ಮಗು! ನಿಮ್ಮನ್ನು ಬಿಟ್ಟು ಹೋದರೂ ನಿಮ್ಮ ವಿಚಾರ ವನ್ನೇ ನೆನಪಿನಲ್ಲಿಟ್ಟು ಕೊಂಡಿರುವೆನು. ನಿಮಗೇನೂ ಭಯವಿಲ್ಲ. ಏನೂ ಯೋಚನೆಬೇಡ.

ಯದು—ಹಾಗಾದರೆ ಸ್ವಲ್ಪ ನಿಮ್ಮ ಪಾದಧೂಳಿಯನ್ನು ದಯಪಾಲಿಸಿ ಹೋಗು, ತಾಯಿ!

ಶಾಂತಿ—ಅದರಿಂದ ನಿನಗೆ ತೃಪ್ತಿಯಾಗುವುದಾದರೆ ತೆಗೆದುಕೊಳ್ಳ ಬಹುದು.

ರಾಮು—ಬಹಳ ತೃಪ್ತಿ.–ತಾಯಿ! ನಮಗೆ ಮತ್ತಾವುದೂ ಬೇಕಿಲ್ಲ.

ಆಗ ಶಾಂತಿಯು ತನ್ನ ವಕ್ಷದಮೇಲೆ ಕೈಯಿಟ್ಟುಕೊಂಡು ಶಾಮಸುಂ ದರನು ನಿಮ್ಮ ಮತಿಯನ್ನು ಚನ್ನಾಗಿ ಮಾಡಲೆಂದು ಹೇಳಿದಳು.

ಅವರಿಬ್ಬರೂ ಭಕ್ತಿಯೊಡನೆ ದೇವಿಯ ಪಾದಧೂಳಿಯನ್ನು ತೆಗೆದು ಶಿರಸ್ಸಿ ನಲ್ಲಿ ಧಾರಣೆ ಮಾಡಿಕೊಂಡು ಲಲಾಟದಲ್ಲಿಯೂ ನಾಲಿಗೆಯಮೇಲೂ ಇಟ್ಟು ಕೊಂಡರು. ಶಾಂತಿದೇವಿಯು ಮೆಲ್ಲಮೆಲ್ಲನೆ ಹೊರಟು ಹೋದಳು. ಆಗ

ಬ್ಬಿಣದ ಬಾಗಲು ಹಾಕಲ್ಪಟ್ಟಿತು. ಆಗ ರಾಮನು, ಅಣ್ಣಾ ! ಇದೇನಿದು ? ಂದನು.

ಯದು —ದೇವತೆಯಲ್ಲದೆ ಮತ್ತೇನು ? ನೋಡುವುದಿಲ್ಲವೆ; ಈ ಸ್ಥಳವು ಗದಗಲುರಿಯುವ ಹಾಗೆ ಪ್ರಕಾಶವಾಗಿದ್ದುದು ಒಂದೇತಡವೆಗೆ ಕತ್ತಲೆಯಾಗಿ ಹೋಯಿತು ?

ಅವರಿಬ್ಬರೂ ಇದನ್ನೆಲ್ಲಾ ಬಹುವಿಧವಾಗಿ ಚರ್ಚಿಸಿ ಆಲೋಚಿಸಿ ನೋಡಿ ರು. ಆದರೆ ಯಾವದೂ ಗೊತ್ತಾಗಲಿಲ್ಲ; ಅನಂತರ ರಾಮನು; ಹೇಗಾದರೂ ಗಲಿ; ಕಡೆಪರ್ಯಂತವೂ ಇದ್ದು ನೋಡಿಬಿಡೋಣವೆಂದನು.

ರಾಮ—ಹಾಗಾದರೆ ಹೇಗೆ ಧ್ಯಾನಮಾಡಬೇಕೆಂದು ಹೇಳಿದ್ದಾಳೋ ಾಗೆಯೇ ಧ್ಯಾನಮಾಡಲಾರಂಭಿಸು

ಇಬ್ಬರೂ ಕಣ್ಣುಮುಚ್ಚಿಕೊಂಡು ಧ್ಯಾನಮಾಡಲಾರಂಭಿಸಿದರು. ಸ್ವಲ್ಪ ಹೊತ್ತಿನಲ್ಲಿಯೇ ಯದು ಏನುಮಾಡುತ್ತಾನೋ ನೋಡೋಣವೆಂದು ರಾಮನು ಣ್ಣುತೆರೆದನು. ಯದುವೂ ಅದೇ ಸಮಯದಲ್ಲಿ ರಾಮನು ಏನುಮಾಡುತ್ತಾನೋ ೋಡೋಣವೆಂದು ಕಣ್ಣುತೆರೆದನು. ರಾಮನು ಕಣ್ಣುತೆರೆದಿದ್ದನು ಅಷ್ಟು ಡು; ಯದು, ಕಳ್ಳ ! ದೂರಹೋಗು; ನೀನು ಧ್ಯಾನಮಾಡುವುದು ಹೀಗೆ ಳೇ ಂದನು.

ಅನಂತರ ಇಬ್ಬರೂ ಮಾತನಾಡಿಕೊಂಡು; ಹೆಚ್ಚು ವಿಶ್ವಾಸದಿಂದ ಧ್ಯಾನ ಾಡುತ್ತ ಕೂತರು ಪುನಃ ಸ್ವಲ್ಪ ಹೊತ್ತಿನಲ್ಲಿಯೇ ಅವರ ಧ್ಯಾನಭಂಗ ಾಯಿತು. ಹೀಗೆ ಪದೇಪದೆ ಪ್ರಯತ್ನಮಾಡಿದುದರ ಮೇಲೆ ಅವರಿಬ್ಬರೂ ಕ್ಕಮಟ್ಟಿಗೆ ಕೃತಕಾರ್ಯರಾದರು.

## ನಾಲ್ಕನೆಯ ಪರಿಚ್ಛೇದ.

ಮಧ್ಯಾಹ್ನದ ಮೇಲೆ ಶಾಂತಿಧಾಮವು ಅಪೂರ್ವವಾದ ಭಾವವನ್ನು ಳಿದ್ದಿತು. ಅಲ್ಲಿದ್ದ ದೇವದೇವಿಯರೆಲ್ಲರೂ ಪೂರ್ಣಾನಂದಿತವಾದ ಮನಸ್ಸಿನಿಂದ ಗವಂತನ ಚಿಂತೆಯಲ್ಲಿ ಮಗ್ನರಾಗಿದ್ದರು. ಆ ವಿಶಾಲವಾದ ಪುರಿಯಲ್ಲಿ ಒಂದು

ಕಡೆ ಶ್ರೀಮದ್ಭಾಗವತ ಪುರಾಣವಾಗುತಲಿದ್ದಿತು ಆ ಪುಣ್ಯತೇಜಸ್ಸಿನಿಂದ ಪ್ರದೀಪ್ತನಾದ ಪುರಾಣಿಕನು ವೇದಿಯ ಮೇಲೆಕುಳಿತುಕೊಂಡು ಅನನ್ಯಮನಸ್ಕನಾಗಿ ಗ್ರಂಥವನ್ನೋದುತ್ತಾನೆ. ಅಲ್ಲಿನ ದೇವದೇವಿಯರ ಹಾಗಿದ್ದ ಅನೇಕ ನರನಾರಿಯರು ಸುತ್ತಲೂ ಕುಳಿತುಕೊಂಡು ತದ್ಗತಚಿತ್ತರಾಗಿ ಶ್ರವಣಮಾಡುತ್ತಾರೆ. ಒಂದುಕಡೆ ಶ್ರೀಮದ್ಭಗವದ್ಗೀತೆಗೆ ಅನೇಕ ಭಾಷ್ಯಾನುಮೋದಿತವಾದ ಅರ್ಥವು ಹೇಳಲ್ಪಡುತಲಿವೆ. ಒಂದುಕಡೆಯಲ್ಲಿ ಶ್ಯಾಮಸುಂದರನ ಸೇವೆಗೋಸ್ಕರ ಬೇಕಾದ ನಾನಾವಿಧವಾದ ಸಾಮಗ್ರಿಗಳು ಸಿದ್ಧವಾಗುತಲಿವೆ—ಒಂದು ಕಡೆ ಧರ್ಮಸಂಗೀತವಾಗುತ್ತದೆ. ಒಂದುಕಡೆಯಲ್ಲಿ ಶಾಸ್ತ್ರಪಙ್ಕ್ತಿಯನ್ನು ಸಮನ್ವಯಮಾಡುವದರಲ್ಲಿ ಒಂದು ಪೂರ್ವಮೀಮಾಂಸಾಕಾರನು ಅನೇಕ ಅಧಿಕರಣಗಳನ್ನುದರಿಹಸಿ ಶಾಸ್ತ್ರಪಙ್ಕ್ತಿಯನ್ನು ಸಮನ್ವಯ ಮಾಡುವುದರಲ್ಲಿದ್ದಾನೆ. ಸರ್ವತ್ರ ಆನಂದ-ಸರ್ವತ್ರ ಪವಿತ್ರತಾ ಸರ್ವತ್ರ ಸರಳತೆ-ಸರ್ವತ್ರ ಶಾಂತಿ. ಈ ಪಾಪತಾಪದಿಂದ ಪೂರ್ಣವಾದ ಧರಾಧಾಮದಲ್ಲಿ ಇಂತಹ ಶಾಂತಿನಿಕೇತನದ ಆವಿರ್ಭಾವವು ವಸ್ತುತಃ ವಿಧಾತನ ವಿಶೇಷವಾದ ಕರುಣೆಯ ಪರಿಚಾಯಕವಾಗಿದೆ.

ಆ ಶಾಂತಿಧಾಮದ ಮತ್ತೊಂದು ಕಡೆಯಲ್ಲಿ, ಒಂದುವಿಸ್ತಾರವಾದ ಪುಷ್ಪಕಾನನವಿದ್ದಿತು. ಅಲ್ಲಿ ಅಗಣ್ಯವಾದ ಹೂವುಗಳಲ್ಲಿ ಅಗಣ್ಯವಾದ ಪುಷ್ಪಗಳರಳಿ ಅಪೂರ್ವವಾದ ಕಾಂತಿಯನ್ನು ಬೀರುತಲಿತ್ತು. ನರನಾರಿಯರು ಇಷ್ಟವಾದರೆ ಅಲ್ಲಿಹೋಗಿತಿರುಗಾಡುವರು. ಶ್ಯಾಮಸುಂದರನಿಗೋಸ್ಕರ ಬೇಕಾದ ಹೂವುಗಳನ್ನೆತ್ತಿ ಸಂಗ್ರಹಮಾಡುವರು. ಅಥವಾ ಅಲ್ಲಿದ್ದ ಕುಂಜವಿಶೇಷದಲ್ಲಿ ಅಥವಾ ವೇದಿವಿಶೇಷದಲ್ಲಿ ಕುಳಿತುಕೊಂಡು ಧ್ಯಾನಮಾಡುವರು. ಆ ಬಹು ದೂರವ್ಯಾಪಿಯಾದ ಉದ್ಯಾನದ ಮಧ್ಯದಲ್ಲಿ ಅಲ್ಲಲ್ಲಿ ಪುಷ್ಪಲತಾಗುಲ್ಮಾದಿಗಳು ಒಟ್ಟೊಟ್ಟಿಗೆ ಜಡೆಜಡೆಯಾಗಿ ಬೆಳದು ಘನಾರಣ್ಯದ ಹಾಗೆ ಮಾಡಲ್ಪಟ್ಟಿರುವುದು. ಆ ಅರಣ್ಯದೊಳಗಡೆ ಅಲ್ಲಲ್ಲಿ ಅತಿಪರಿಷ್ಕಾರವಾದ ರಮ್ಯವಾದ ಸ್ಥಾನಗಳಿರುವುವು. ಅವಶ್ಯಕಬಿದ್ದಾಗ ಆ ನರನಾರಿಯರು ಆ ಸ್ಥಳದಲ್ಲಿ ಕುಳಿತುಕೊಂಡು ಏಕಾಂತವಾದ ಮನಸ್ಸಿನಿಂದ ಅಭೀಷ್ಟವಾದ ದೇವತೆಯನ್ನು ಧ್ಯಾನಮಾಡುತಲಿರುವರು

ಈ ಶಾಂತಿಕಾನನದಲ್ಲಿ ಒಂದುನಿಬಿಡವಾದ ಕುಂಜದಲ್ಲಿ ಜ್ಞಾನಾನಂದಯೋಗಿಯು ಕುಳಿತಿದ್ದಾನೆ. ಆತನ ತೇಜಃಪ್ರಭಾವವುಳ್ಳ ದೀರ್ಘವಾದ ದೇಹ

ಮತ್ತು ಪ್ರಶಾಂತವಾದ ಕಣ್ಣುಗಳ ಕಾಂತಿಯನ್ನು ಸಂದರ್ಶನಮಾಡಿದರೆ ಹೃದಯ ದಿಂದ ತಾನಾಗಿಯೇ ಅವನ ಮೇಲಿನ ಒಂದು ಭಕ್ತಿಪ್ರವಾಹವು ಹುಟ್ಟಿ ಅವನ ಚರಣಗಳನ್ನು ತೊಳೆಯಲು ಪ್ರವೃತ್ತವಾಗುವುದು. ಮತ್ತು ಅವನು ಸಾಕ್ಷಾತ್ ಭಗವಂತನೆಂದು ವಿಶ್ವಾಸಹುಟ್ಟುವುದು.

ಶಾಂತಿದೇವಿಯು ತೇಜಸ್ಸನ್ನೂ ಜ್ಯೋತಿಯನ್ನೂ ಬೀರುತ್ತ ಆ ಸ್ಥಳಕ್ಕೆ ಬಂದಳು. ಬಂದು ಆಂತರಿಕವಾದ ಭಕ್ತಿಯಿಂದ ಆ ದೇವರಚರಣಕ್ಕೆ ಪ್ರಣಾಮವನ್ನು ಮಾಡಿ ನತಶಿರಳಾಗಿ ನಿಂತಿದ್ದಳು. ಅವಳನ್ನು ನೋಡಿದ ಕೂಡಲೆ ಜ್ಞಾನಾನಂದನು ಮನಸ್ಸಿನಲ್ಲಿ. ಪ್ರಣಾಮವನ್ನು ಮಾಡಿದರೆಮಾಡು. ನಿನ್ನ ಪ್ರಣಾಮವನ್ನು ಗ್ರಹಣಮಾಡುವದಕ್ಕೆ ಯೋಗ್ಯನಾದವನು ನಾನು ಅಲ್ಲ. ನಿನ್ನ ತೇಜಸ್ಸಿನ ಪರೀಕ್ಷೆಯೂ ಯಥೇಷ್ಟವಾಗಿ ಆಯಿತು. ಆದರೆ ಇನ್ನೂ ಸ್ವಲ್ಪ ಉಳಿದಿದೆ. ಅದೂಕ್ರಮವಾಗಿ ವ್ಯವಸ್ಥೆಯಾಗುವುದು. ಈಗ ಪ್ರಕೃತ ನಿನಗೆ ಏನೆಂದು ಆಶೀರ್ವಾದವನ್ನುಮಾಡಲಿ ನಿನಗೆ ಏನೂಬೇಕಾಗಿಲ್ಲವೆ ? ಎಂದು ಹೇಳಿಕೊಂಡು ಪ್ರಕಾಶವಾಗಿ, ಶ್ಯಾಮಸುಂದರನು ನಿನಗೆ ಮಂಗಳ ಮಾಡಲಿ. ವತ್ಸೆ ! ನಾನು ಕೂಡಲೆ ಭಿಕ್ಷೆಯಾತ್ರೆಗೆ ಹೊರಡುವೆನು. ನೀನೂ ನನ್ನ ಸಂಗಡ ಹೊರಡಬೇಕು ಎಂದನು.

ಶಾಂತಿ— ತಮ್ಮ ಅಪ್ಪಣೆ.

ಜ್ಞಾನಾನಂದ—ಹಾಗಾದರೆ ಯಾವುದಾದರೂ ನಿನ್ನ ಕೆಲಸದಲ್ಲಿ ಪೂರ್ತಿ ಯಾಗದೆ ಉಳಿದಿರುವುದು ಇದ್ದರೆ ಅದನ್ನೆಲ್ಲಾ ಪೂರ್ತಿಮಾಡಿಬಿಡು.

ಶಾಂತಿ— (ನಕ್ಕು) — ಗುರುವೆ ! ಈ ಸಂಸಾರದಲ್ಲಿ ನನ್ನ ಕಾರ್ಯವು ಯಾವದೂ ಇಲ್ಲ. ತಾವುಹೇಳಿ ಯಾವುದಾದರೂ ಕೆಲಸವನ್ನು ಮಾಡಿಸಿದರೆ ಆ ಕೆಲಸವನ್ನು ಮಾಡುವವಳಾಗಿದ್ದೇನೆ. ಎಲ್ಲವೂ ತಮ್ಮ ಕೆಲಸವಾಗಿದೆ. ಇನ್ನು ಉಳಿದಿರುವ ಕೆಲಸವಾವುದೋ ನಾನದನ್ನರಿಯೆನು. ಕಾರ್ಯವು ಅನಂತ—ಸೀಮಾ ರಹಿತವಾದುದು. ಅದಕ್ಕೆ ತುದಿಮೊದಲು ಎಲ್ಲಿ ? ಹೀಗಿರುವಾಗ ಕೆಲಸವನ್ನು ಪೂರ್ತಿಗೈಯಬೇಕೆಂದು ಹೇಳೋಣಾಯಿತು ಹೇಗೆ ?

ಜ್ಞಾನಾನಂದನು ಮನಸ್ಸಿನಲ್ಲಿ, ಯಾವಭಾಗ್ಯಬಲದಿಂದ — ಪೂರ್ವ ಜನ್ಮದ ಯಾವ ಅಸಾಧಾರಣವಾದ ಸುಕೃತಿಯಫಲದಿಂದ ಇಂತಹಶಿಷ್ಯಳಿಗೆ ಉಪದೇಶಮಾಡುವಭಾರವು ನನಗೆ ಉಂಟಾಗಿದೆಯೊ ! ನನ್ನ ಸಾಧನವುಸಾರ್ಥಕ!

ಎಂದಂದುಕೊಂಡು. ಪ್ರಕಾಶ್ಯವಾಗಿ ಇಬ್ಬರು ಕಲುಷಿತರಾದ ಮನುಷ್ಯರನ್ನು ಹೋಗಿ ನೋಡಬೇಕೆಂದು ಹೇಳಿದ್ದೆನಷ್ಟೆ? ಅವರನ್ನು ನೋಡಿದೆಯಾ? ಎಂದನು.

ಶಾಂತಿ —ನೋಡಿದೆ ಮಹಾಸ್ವಾಮಿ!

ಜ್ಞಾನಾನಂದ—ಅವರು ನಿನ್ನ ಮೇಲೆ ಬಹಳ ಅತ್ಯಾಚಾರವನ್ನು ನಡೆಸಿರಬೇಕೆಂದು ತೋರುತ್ತದೆ.

ಶಾಂತಿ— (ನಕ್ಕು)—ಪ್ರಭೋ! ಅವರು ನನ್ನಮೇಲೆ ಅತ್ಯಾಚಾರವನ್ನು ನಡೆಸುವುದಕ್ಕೆ ನಾನಾರು! ಪ್ರಭುಗಳ ಪಾದಪದ್ಮಗಳನ್ನು ಧ್ಯಾನಮಾಡುವುದಕ್ಕೆ ನಾನು ಅಸಮರ್ಥಳಾದರೆ ಆಗ ನಾನು ಒಂದು ಕೀಟಕ್ಕಿಂತಲೂ ಹೇಯಳು, ಮತ್ತು ಎಲ್ಲಾ ಜನರೂ ತಮ್ಮ ಕಾಲುಗಳಿಂದ ನನ್ನನ್ನು ಪೇಷಣಮಾಡುವುದಕ್ಕೆ ಯೋಗ್ಯಳಾಗುವೆನು. ಆದರೆ ಯಾವವರೆಗೂ ನಾನು ಅನನ್ಯ ಮನಳಾಗಿ ಪ್ರಭುಗಳ ಪಾದಪದ್ಮಗಳನ್ನು ಧ್ಯಾನಮಾಡಲು ಸಮರ್ಥಳಾಗಿರುವೆನೋ ಅದವರೆಗೂ ನಾನು ನನ್ನ ಸ್ವಾತಂತ್ರ್ಯವನ್ನು ಅನುಭವಮಾಡುವುದಿಲ್ಲದುದರಿಂದ ನಾನು ಇದ್ದಹಾಗೂ ಇಲ್ಲ — ನನ್ನ ಇರುವಿಕೆಯೋ ಇರುವುದಿಲ್ಲ. ಹೀಗಿರುವಾಗ ಅತ್ಯಾಚಾರವೇ ಆಗಲಿ, ಶಿಷ್ಟಾಚಾರವೇ ಆಗಲಿ, ಧರ್ಮವೇ ಆಗಲಿ ಅಧರ್ಮವೇ ಆಗಲಿ ಜ್ಞಾನವೇ ಆಗಲಿ, ಅಜ್ಞಾನವೇ ಆಗಲಿ ಪ್ರೇಮವೇ ಆಗಲಿ ಹಿಂಸೆಯೋ ಆಗಲಿ, ಯಾವುದನ್ನೂ ತಿಳಿಯಲಾರದವಳಾಗಿದ್ದೇನೆ. ತಾವು ಸಾಕ್ಷಾತ್ ಭಗವಂತನ ಸ್ವರೂಪ, ಸರ್ವದರ್ಶಿಗಳಾಗಿ ಸರ್ವವ್ಯಾಪಿಯಾಗಿರೋಕಾಗಿದೆ. ಯಾವಮನುಷ್ಯನು ಭಾಗ್ಯವಶಾತ್ ತಮ್ಮ ಶಿಷ್ಯತ್ವವನ್ನು ಹೊಂದಿ ಪೂರ್ವಜನ್ಮ ಮತ್ತು ಈ ಹೊಸ ಜನ್ಮವನ್ನು ಹೊಂದಿರುವನೋ ಅಂತಹವನ ಹೃದಯದ ಭಾವ ಮತ್ತು ಅವಸ್ಥೆಯು ತಮಗೆ ಎಂದಿಗೂ ಗೋಚರವಾಗದಿರದು. ಹೀಗಿರುವಾಗ ಏತಕ್ಕೆ ಹೀಗೆ ಅಪ್ಪಣೆ ಕೊಡಿಸೋಣಾಗುತ್ತದೆ!

ಜ್ಞಾನಾನಂದ—ಹಾಗಾದರೆ, ಅವರು ಯಾವ ಅತ್ಯಾಚಾರವನ್ನೂ ನಡೆಸಲಿಲ್ಲ? ಒಳ್ಳೆಯದಾಯಿತು. ಅವರು ಏನಾದರೂ ಹಿತವಾದ ಮಾರ್ಗವನ್ನು ಅವಲಂಬಿಸುವ ಹಾಗಿದ್ದಾರೊ?

ಶಾಂತಿ—ಅಪ್ಪಣೆಯಾದರೆ ಅವರನ್ನೇ ಪ್ರಭುಗಳ ಸನ್ಮುಖಕ್ಕೆ ಕರೆತರುವೆನು.

ಜ್ಞಾನಾನಂದ—ಈಗಲೇವೆ? ಇಷ್ಟು ಬೇಗನೆ?

ಶಾಂತಿ—ತಮಗೆ ಒಪ್ಪಿದರೆ.

ಜ್ಞಾನಾನಂದ—ನಿನ್ನ ಇಷ್ಟವೇ ನಿನ್ನ ಗುರುವಿನ ಇಷ್ಟವಾಗಿದೆ.

ಶಾಂತಿ—(ಪುನಃ ನಕ್ಕು)—ಆದರೆ ನನಗೆ ಇಷ್ಟವನ್ನುಂಟುಮಾಡುವವರು ಯಾರು ?

ಶಾಂತಿಯು ಹೊರಟು ಹೋದಳು. ಜ್ಞಾನಾನಂದನು ಮನಸ್ಸಿನಲ್ಲಿ, ಭೂಮಿಯು ಪವಿತ್ರಳಾದಳು. ಈ ದೇವಿಯು ಭೂಮಿಯಮೇಲೆ ವಿಚರಣ ಶೀಲಳಾಗಿರುವಾಗ ಅದು ಪುಣ್ಯಭೂಮಿಯೇ ಸರಿ. ಈ ದೇವಿಯು ಇಡುವ ಪ್ರತಿಯೊಂದು ಹಜ್ಜೆಯಿಂದಲೂ ಭೂದೇವಿಯು ಪುಳಕಿತಳಾಗುವಳು ಎಂದಂದುಕೊಂಡು, ಪ್ರೇಮಾವೇಶದಿಂದ ಧ್ಯಾನಮಗ್ನನಾದನು. ಅವನ ದೇಹವು ತಪ್ತವಾದ ಬಂಗಾರದ ಹೊಳಪನ್ನು ತಾಳಿತು. ಅಪಾರ್ಥಿವವಾದ ಕಾಂತಿಯು ಅವನ ಶರೀರವನ್ನೆಲ್ಲಾ ಆವರಿಸಿಕೊಂಡಿತು. ಅವನ ದೇಹವು ಸ್ವರ್ಗೀಯವಾದ ಜ್ಯೋತಿಯನ್ನುಗಿಯುತಲಿದ್ದಿತು.

ಈ ಸಮಯದಲ್ಲಿ ರಾಮನನ್ನೂ ಯದುವನ್ನೂ ಸಂಗಡ ಕರೆದುಕೊಂಡು ಶಾಂತಿದೇವಿಯು ಪುನಃ ಆ ಕುಂಜದೊಳಗೆ ಪ್ರವೇಶ ಮಾಡಿದಳು ಆದರೆ ಇದೇನು ವ್ಯಾಪಾರ! ರಾಮ ಮತ್ತು ಯದುವಿನ ಕಣ್ಣುಗಳಿಂದ ಪ್ರೇಮವಾರಿಯು ಸುರಿಯುತಲಿದೆ. ಇಬ್ಬರೂ ಆನಂದದಿಂದ ಪುಳಕಿತರಾಗಿದ್ದಾರೆ. ಈಯವಸ್ಥೆಯಲ್ಲಿ ಅವರಿಬ್ಬರೂ ಆ ಮಹಾಪುರುಷನ ಇದುರಿಗೆ ಬಂದು ಅವನ ಅದ್ಭುತವಾದ ತೇಜಸ್ಸನ್ನು ಕಂಡು ಮೂಕರಾಗಿ ನಿಂತರು. ಶಾಂತಿದೇವಿಯು ಅವರಿಬ್ಬರಿಗೂ ಸಂಜ್ಞೆಮಾಡಿ ಮಹಾ ಪುರುಷನಿಗೆ ಪ್ರಣಾಮವನ್ನು ಮಾಡುವಹಾಗೆ ತಿಳಿಸಿದಳು. ಅವರಿಬ್ಬರೂ ನೆಲದಮೇಲೆ ಸಾಷ್ಟಂಗವಾಗಿ ಪ್ರಣಾಮವನ್ನು ಮಾಡಿದರು. ಪ್ರಣಾಮವನ್ನು ಮಾಡಿ ಎದ್ದು ನಿಂತಮೇಲೆ ಅವರು ಮತ್ತೊಂದು ಬೇರೆ ಭಾವವನ್ನು ತಾಳಿದರು. ಅವರ ಕಣ್ಣೀರು ಸುರಿಯುವುದು ನಿಂತಿತು. ಅಭಾವಭೋಧೆಯು ತೊಲಗಿತು. ಸಂತೋಷವು ದೇಹ ಮತ್ತು ಮನಸ್ಸಿನಲ್ಲಿ ಪರಿಪೂರ್ಣವಾಗಿ ತುಂಬಿತು. ಆನಂದದಲ್ಲಿ ಮಗ್ನರಾದರು

ಆಗ ಆ ಧ್ಯಾನನಿರತನಾದ ಸಾಧುವು ಕಣ್ಣುತೆರೆದನು. ಆ ಸರ್ವದರ್ಶಿಯಾದ ನಯನಗಳ ಪ್ರಶಾಂತವಾದ ದೃಷ್ಟಿಯು ಆ ಇಬ್ಬರಮೇಲೆ ಬಿದ್ದಿತು ಆಗಲೇ ಅವರ ಪ್ರಾಣವು ಪೂರ್ಣವಾದ ತೃಪ್ತಿಯನ್ನು ಹೊಂದಿತು. ಅವರು ತಾವು ಧನ್ಯರಾ

ರಿವೆಂದು ತಿಳಿದು ಕೃತಾರ್ಥರಾದರು. ಅನಂತರ ಮಹಾಪುರುಷನು ಅವರಿಬ್ಬ
ರನ್ನೂ ಕುರಿತು ನೀವು ಈಸ್ಥಳಕ್ಕೆ ಬಂದು ಅತ್ಯಂತ ಕಾತರರಾದಿವೆಂದೂ ಇಲ್ಲಿ
ರುವುದು ನಿಮಗೆ ಕಷ್ಟಕರವಾದುದೆಂದೂ ತಿಳಿದಿರುವುದಾಗಿ ಕೇಳಿದೆನೆಂದು
ಹೇಳಿದನು.

ಭಾಷೆಯು ಆಗವರ ಭಾವವನ್ನು ಪ್ರಕಾಶಪಡಿಸುವುದಕ್ಕೆ ವ್ಯಾಘಾತ
ಮಾಡಲಿಲ್ಲ ರಾಮನು ದೇವರೆ! ಅಜ್ಞಾನದ ಅಪರಾಧವನ್ನು ಕ್ಷಮಿಸಬೇಕು.
ನಾವು ಇದುವರೆಗೂ ಸ್ವರ್ಗಸುಖವನ್ನು ತಿಳಿದವರಾಗಿರಲಿಲ್ಲ. ಅದುಕಾರಣ
ವ್ಯಾಕುಲರಾಗಿದ್ದೆವು.

ಯದು—ದಯಾಮಯನೆ! ನಮಗೆ ಇನ್ನೇನೂ ಕಷ್ಟವಿಲ್ಲ. ನಾವು ಈ
ಸ್ವರ್ಗದಿಂದ ಮತ್ತೆಲ್ಲಿಯೂ ಹೋಗಲಾರೆವು. ನಾವು ಇದುವರೆಗೂ ನರಕ
ದಲ್ಲಿರುತಲಿದ್ದೆವು. ಈ ನಮ್ಮ ತಾಯಿಯು ನಮ್ಮನ್ನು ಸ್ವರ್ಗಕ್ಕೆ ಕರತಂದಿ
ದ್ದಾಳೆ. ನಾವು ಈ ಪಾದಗಳನ್ನು ಬಿಟ್ಟು ಮತ್ತೆಲ್ಲಿಗೂ ಹೋಗುವುದಿಲ್ಲ.

ಯದು—ಮಾತುನಿಲ್ಲಿಸುತಲೇ ರಾಮನು ಶಾಂತಿಯಕಡೆಗೆ ತಿರುಗಿಕೊಂಡು,
ತಾಯಿ! ಈ ಅಧಮನಾದ ಹುಡುಗನನ್ನು ನಿನ್ನಬಳಿಯಲ್ಲಿಟ್ಟುಕೊಳ್ಳಲಾರಿಯಾ?
ನಿನ್ನ ಆಶೀರ್ವಾದ ಬಲದಿಂದ ನಾವು ಧ್ಯಾನಮಾಡುತ್ತ ಶ್ರೀಕೃಷ್ಣನನ್ನು ಸಾಕ್ಷಾ
ತ್ತಾಗಿ ಪಡೆದೆವು. ಓಹೊ! ಆ ಶೋಭಾರಾಶಿಯಮಾತು ಏನೆಂದು ಹೇಳಲಿ?
ನೀನು ನಮ್ಮನ್ನು ಇಲ್ಲಿಂದ ಓಡಿಸಿಬಿಟ್ಟರೆ ನಿನ್ನನ್ನು ನೋಡುವುದಕ್ಕೆ ಇಲ್ಲದೆ
ಹೋಗುತ್ತದೆ. ನಿನ್ನನ್ನು ನೋಡದಿದ್ದರೆ ಶ್ರೀಕೃಷ್ಣನೂ ನಮಗೆ ದರ್ಶನವನ್ನು
ಕೊಡುವುದಿಲ್ಲ. ಹಾಗಾದರೆ ನಮಗೆ ತಾವೇಗತಿ. ನಾವು ಸತ್ತು ಹೋಗಿಬಿಡು
ತ್ತೇವೆ ನಮ್ಮನ್ನು ನಿನ್ನ ಸನ್ನಿಧಾನದಿಂದ ಓಡಿಸಬೇಡವೆಂದು ಬಹುವಿಧವಾಗಿ
ಬೇಡಿಕೊಂಡನು.

ಯದು—ತಾಯಿ! ಈತನೇ ನಾರಾಯಣನೆ? ನಾವು ನೋಡಿದ ದೇವರು
ಬೇರೆವಿಧವಾಗಿದ್ದಾನೆ. ಅವನ ರೂಪವೇ ಬೇರೆ. ಆದರೆ ಕಾಂತಿಯೇನೋ
ಹೀಗೆಯೇ ಇದೆ. ತಾಯಿ! ಈತನು ಕೇವಲ ದಯಾಮಯನಾಗಿದ್ದಾನೆ. ಹಾಗಿ
ರುವಾಗ ನಾವೇಕೆ ನಿನ್ನಬಳಿ ಇರಕೂಡದು?

ಮಹಾಪುರುಷ—ವತ್ಸ! ನಿಮಗೆ ಯಾವ ತಾಯಿಯೋ ಅವಳು ನಿಮಗೂ
ತಾಯಿ, ನನಗೂ ತಾಯಿ. ಅವಳೇ ಈ ಸ್ವರ್ಗಧಾಮಕ್ಕೆ ಅಧಿಷ್ಠಾತ್ರಿ. ಅವಳನ್ನು

ಶಾಂತಿದೇವಿಯೆಂದು ಕರೆಯುತ್ತಾರೆ. ಅದುಕಾರಣ ಈ ಸ್ಥಳಕ್ಕೆ ಶಾಂತಿನಿಕೇತನವೆಂದು ಹೆಸರು. ನೀವು ಕಾಯಮನೋವಾಕ್ಯಗಳಿಂದ ಈ ದೇವಿಯ ಚರಣವನ್ನು ಮನಸ್ಸಿನಲ್ಲಿಟ್ಟುಕೊಂಡು ಅವಳ ಆಜ್ಞೆಗೆ ವಶವರ್ತಿಗಳಾಗಿದ್ದರೆ ನಿಮ್ಮ ಸಕಲ ಇಷ್ಟಾರ್ಥವೂ ಪೂರ್ತಿಯಾಗುತ್ತದೆ. ನೀವು ಅವಶ್ಯಕವಾಗಿ ಇಲ್ಲಿರಿ. ಮಕ್ಕಳು ತಾಯಿಯನ್ನು ಬಿಟ್ಟಿರುವುದಕ್ಕಾದೀತೆ? ಇಂದಿನಿಂದ ನಿಮಗೆ ಹೊಸ ನಾಮಕರಣ ಮಾಡುವುದಾಗುತ್ತದೆ.

ಮಹಾಪುರುಷನು ಈ ಮಾತುಗಳನ್ನು ಹೇಳುತ್ತಿರುವಾಗ ಶಾಂತಿದೇವಿಯು ನಯನಮುದಿತಳಾಗಿ ಕೇವಲ ತನ್ನ ಗುರುವಿನ ಚರಣವನ್ನು ಧ್ಯಾನ ಮಾಡುತಲಿದ್ದಳು.

ಅನಂತರ ಮಹಾಪುರುಷನು ರಾಮನ ಕೈಹಿಡಿದುಕೊಂಡು ಸ್ವಲ್ಪಮೃತ್ತಿಕೆಯನ್ನು ಅವನ ಹಣೆಗೆ ಹಚ್ಚಿಸಿ, ಇಂದಿನಿಂದ ನಿನ್ನ ಹೆಸರು ಅಭಿರಾಮನೆಂದು ಕರೆಯುವರು. ಎಂದನು.

ಅನಂತರ ಯದುವಿನ ಕೈಯನ್ನು ಹಿಡಿದುಕೊಂಡು ಅದೇಪ್ರಕಾರಮಾಡಿ, ಇಂದಿನಿಂದ ನಿನ್ನನ್ನು ನಾರಾಯಣನೆಂದು ಕರೆಯುವರೆಂದು ಹೇಳಿದನು.

ಮಹಾಪುರುಷನ ಕರಸ್ಪರ್ಶವಾದ ಕೂಡಲೇ ಅಭಿರಾಮ ಮತ್ತು ನಾರಾಯಣ ಇವರ ಶರೀರದಿಂದ ಅಲೌಕಿಕವಾದ ಅಜ್ಞಾತಪೂರ್ವವಾದ ಒಂದು ತಡಿತಪ್ರವಾಹವು ಹೊರಟಹಾಗಾಯಿತು. ಅವರು ಚಲಚ್ಛಕ್ತಿಶೂನ್ಯರಾಗಿ ವಾಕ್‌ಶಕ್ತಿಹೀನರಾಗಿ ಬಾಹ್ಯಜ್ಞಾನಶೂನ್ಯರಾಗಿ ಹೋದರು. ಮಹಾಪುರುಷನು, ತಾಯಿ! ನಿನ್ನ ಹೊಸಸಂತಾನರನ್ನು ಕರೆದುಕೊಂಡು ಹೋಗು. ಇವರಿಗೆ ಆಶ್ರಮವನ್ನು ನಿರ್ದೋಷವಾಗಿ ಮಾಡಿಕೊಡು. ಈ ದಿನ ಇವರಿಗೆ ಭಗವಂತನ ಪರಿಚಯವನ್ನು ಮಾಡಿಕೊಡು ಎಂದು ಹೇಳಿದನು.

ಶಾಂತಿದೇವಿಯು ಎರಡು ಕೈಗಳಿಂದಲೂ ಇಬ್ಬರ ಸಂತಾನರ ಕೈಯನ್ನು ಹಿಡಿದುಕೊಂಡು ಭಕ್ತಿಪುರಸ್ಸರವಾಗಿ ಮಹಾಪುರುಷನಿಗೆ ಪ್ರಣಾಮವನ್ನು ಮಾಡಿದಳು. ಮಹಾಪುರುಷನು ನಕ್ಕು, ಶಾಂತಿನಿಕೇತನದಲ್ಲಿ ತಾಯಿಯೂ ಕೂಡ ಮಕ್ಕಳಿಗೆ ಪ್ರಣಾಮವನ್ನು ಮಾಡುತ್ತಾಳೆಂದನು.

# ಐದನೆಯ ಪರಿಚ್ಛೇದ

ಸಾಯಂಕಾಲದ ಸಮಯದಲ್ಲಿ ಶಾಂತಿನಿಕೇತನದಲ್ಲಿ ಮತ್ತೊಂದು ಭಾವ-ಅಲ್ಲಿನ ದೇವದೇವಿಯರು ಆಗ ಶ್ಯಾಮಸುಂದರನಿಗೆ ಆರತಿಯಾಗುವು ದಕ್ಕೆ ಆಯೋಜನಸಂಕಲನಮಾಡುವ ಗದ್ದಲದಲ್ಲಿದ್ದರು. ಕೆಲವರು ಮಾಲೆಗ ಳನ್ನು ಕಟ್ಟುತಲಿದ್ದರು ಕೆಲವರು ಪುಷ್ಪವನ್ನು ಒದಗಿಸಿಕೊಡುತಲಿದ್ದರು. ಕೆಲವರು ಭೋಗಕ್ಕೆ ಆಯೋಜನಮಾಡುತಲಿದ್ದರು. ಕೆಲವರು ಚಂದನವನ್ನು ಅರಿಯುತಲಿದ್ದರು. ಕೆಲವರು ದೇವರ ಪೂಜೆಯ ಬೆಳ್ಳಿ ಬಂಗಾರದ ಪಾತ್ರೆ ಗಳನ್ನೂ ಆರತಿಗಳನ್ನೂ ಬೆಳಗಿ ಶುದ್ಧಿಮಾಡುತಲಿದ್ದರು. ಕೆಲವರು ಸಾಲು ದೀಪಗಳಿಗೆ ಬತ್ತಿಎಣ್ಣೆ ಹಾಕುತಲಿದ್ದರು. ಕೆಲವರು ದೇವಾಲಯವನ್ನು ಗುಡಿಸಿ ಸಾರಿಸಿ ರಂಗವಲ್ಲಿಯನ್ನಿಡುತಲಿದ್ದರು. ಹೀಗೆ ನಾನಾವಿಧವಾದ ಕಾರ್ಯಗಳ ಲ್ಲಿದ್ದುತಲಿದ್ದರು.

ಕ್ರಮವಾಗಿ ಸಂಜೆಯಾಯಿತು. ಆರತಿಮುಂತಾದುದು ಸಿದ್ಧವಾಯಿತು. ಆಗ ಓಲಗ ತಾಳ ಮೇಳ ಮುಂತಾದ ವಾದ್ಯಗಳಿಗೆ ಆರಂಭವಾಯಿತು. ಆ ವಾದ್ಯಧ್ವನಿಯು ಅದರ ಪ್ರತಿಧ್ವನಿಯೂ ಸೇರಿ ಆ ಪ್ರಶಸ್ತವಾದ ದೇವಾ ಲಯವೂ ನಾಲ್ಕುಕಡೆಯಲ್ಲಿಯೂ ಇದ್ದ ಅರಣ್ಯವೆಲ್ಲಾ ಆಮೋದಿತವಾಯಿತು. ಆಶ್ರಮ ನಿವಾಸಿಗಳಾದ ನರನಾರಿಗಳೆಲ್ಲರೂ ಅವರವರು ಇದ್ದ ಸ್ಥಳಗಳಿಂದ ಬೇಗನೆ ದೇವಾಲಯಕ್ಕೆ ಬಂದು ಸೇರಿದರು. ಒಳಗೆ ಪೂಜೆ ನೈವೇದ್ಯವಾಗುತ ಲಿದ್ದಿತು

ಆಗ ಮೊದಲು ಮಹಾಪುರುಷ ಜ್ಞಾನಾನಂದನೂ ಅವನ ಹಿಂದೆ ಅಭಿರಾಮ ಮತ್ತು ನಾರಾಯಣಿ ಕಡೆಗೆ ಶಾಂತಿದೇವಿಯೂ ದೇವಾಲಯದೊಳಗೆ ಬಂದರು. ಮಹಾಪುರುಷನ ದರ್ಶನವಾದಕೂಡಲೇ ಎಲ್ಲರೂ ಭಕ್ತಿಭಾವದಿಂದ ಅವನ ಪಾದಧೂಳಿಯನ್ನು ತೆಗೆದುಕೊಂಡು ಶಿರದಲ್ಲಿ ಧಾರಣೆಮಾಡಿಕೊಂಡರು. ಮಹಾಪುರುಷನು ನಯನಮುದಿತನಾಗಿ ಕೈಮುಗಿದುಕೊಂಡು ನಿಂತಿದ್ದನು. ಮಹಾಪುರುಷನು ಬರುತ್ತಲೇ ಎಲ್ಲರ ಹೃದಯದಿಂದಲೂ ಒಂದು ಆನಂದ ಲಹರಿಯು ಪ್ರವಹಿಸಲಾರಂಭವಾಯಿತು. ಅವನ ಪ್ರಶಾಂತವಾದ ಮುಗಳ

ನಗೆಯುಳ್ಳ ವದನವೂ ಅವನ ತೇಜಃಪುಂಜವಾದ ದೇಹ, ಇವುಗಳ ಅಪರೂಪ ವಾದ ಕಾಂತಿಯ ದರ್ಶನದಿಂದ ಎಲ್ಲರೂ ಪರಮ ಪುಳಕಿತರಾದರು.

ಶಾಂತಿದೇವಿಗೂ ಎಲ್ಲರೂ ಅಂತರಿಕವಾದ ಭಕ್ತಿಸಹಕಾರದಿಂದ ಪ್ರಣಾಮವನ್ನು ಮಾಡಿದರು ಅವಳೂ ಮಹಾಪುರುಷನ ಹಾಗೆ ನಯನ ಮುದ್ರಿತೆಳಾಗಿ ಪ್ರಭುವಿನ ಪಾದಗಳನ್ನು ಧ್ಯಾನಮಾಡುತಲಿದ್ದಳು. ಅವಳು ಆನಂದ ಮತ್ತು ಕಾಂತಿಯನ್ನು ಬೀರುತ್ತ ಮಹಾಪುರುಷನ ಹಿಂದೆ ಹೋದಳು. ಇನ್ನು ಅಭಿರಾಮನೂ ನಾರಾಯಣನೂ ಏನುನಾಡುವುದೀತು? ಅವರು ಮೊದಲು ಅವಾಕ್ಕಾದರು. ಇಷ್ಟು ದೇವದೇವಿಗಳ ಹಾಗಿರುವವರ ಸುಲಲಿತವಾದ ಪುಣ್ಯಪ್ರದೀಪ್ತವಾದ ಕಳೇಬರಗಳನ್ನು ದರ್ಶನಮಾಡಿ ಸುರಭಿ ಕುಸುಮ ಚಂದನಾದಿಗಳ ಗಂಧಗಳನ್ನು ಉಪಭೋಗಮಾಡಿ ವಾದ್ಯಧ್ವನಿಯ ಗಾಂಭೀರ್ಯವನ್ನು ಅನುಭವಮಾಡಿ. ಭಕ್ತಿ ಮತ್ತು ಆನಂದದ ಅದ್ಭುತವಾದ ವಿಕಾಸವನ್ನು ನೋಡಿ ಪವಿತ್ರತಾ ಮತ್ತು ಪುಣ್ಯದ ಸಮಾರಣವನ್ನು ಉಪಭೋಗ ಮಾಡಿ ಅವರು ಮನಸ್ಸಿನಲ್ಲಿ ತಾವು ಸಶರೀರಿಗಳಾಗಿ ಸ್ವರ್ಗಕ್ಕೆ ಬಂದಿದ್ದೇನೆಂದು ತಿಳಿದುಕೊಂಡರು. ಅವರು ಸ್ವಲ್ಪಹೊತ್ತು ಏನುಮಾಡುವುದಕ್ಕೂ ತೋಚದೆ ಚಿಂತವರಾಗಿದ್ದು, ಅನಂತರ ಉನ್ಮತ್ತ ಭಾವದಿಂದ ಅಲ್ಲಿ ನೆರದಿದ್ದ ಎಲ್ಲರ ಪಾದಗಳ ಮೇಲೂ ಬಿದ್ದು ಅವರು ನಿಂತಿದ್ದ ಸ್ಥಳದಲ್ಲಿದ್ದ ಧೂಳಿಯನ್ನು ತಗೆದುಕೊಂಡು ಶಿರದಲ್ಲೂ ಮುಖದಲ್ಲಿಯೂ ಧಾರಣಮಾಡಿಕೊಂಡರು.

ಮಂಗಳಾರತಿಗೆ ಆರಂಭವಾಯಿತು. ಮಹಾಪುರುಷನು ಸ್ವಂತವಾಗಿ ಆ ದೊಡ್ಡದಾದ ಆರತಿಯನ್ನು ತೆಗೆದುಕೊಂಡು ದೇವರಿಗೆ ಮಂಗಳಾರತಿಯನ್ನು ಮಾಡಿದನು. ವಾದ್ಯಧ್ವನಿ ಆನಂದಧ್ವನಿ ಕರತಾಳಧ್ವನಿ ಮುಂತಾದುದು ದಿಗ್ವಲಯವನ್ನು ತುಂಬಿತು. ಆರತಿಯು ಪೂರೈಸುತಲೇ ಎಲ್ಲರೂ ದೇವರನ್ನು ನೃತ್ಯ ಮಾಡುತ್ತ ಪ್ರದಕ್ಷಿಣಮಾಡಿದರು. ಹಾ ಹಾ! ಏನು ಅಪೂರ್ವ! ಎಷ್ಟು ಸುಲಲಿತ! ಎಷ್ಟು ಅಲೌಕಿಕ! ಆ ಹಾ! ಆ ನೃತ್ಯ—ಪ್ರೇಮೋನ್ಮಾದಪೂರ್ಣವಾದ ಪಾದವಿಕ್ಷೇಪ—ಆ ಪವಿತ್ರವಾದ ಅಂಗಭಂಗಿ! ಅದನ್ನೆಲ್ಲಾ ವರ್ಣಿಸಲೂ ಸಾಧ್ಯವೆ! ಹರಿ! ಹೇ ಪುರುಷೋತ್ತಮ! ಎಷ್ಟುಕಾಲ ಕಳೆದರೆ ಭೂಲೋಕದಲ್ಲಿ ಜನರು ಈ ಸ್ವರ್ಗಸುಖಕ್ಕೆ ಅಧಿಕಾರಿಗಳಾಗುವರು? ಎಷ್ಟು ದಿನವಾದರೆ ಮಾನವನು ಭಕ್ತಿಯಮಹಾತ್ಮ್ಯದಿಂದ ವಿಮೋಹಿತನಾಗಿ ನಿಸಗೋಸ್ಕರ ಈ ಪ್ರಕಾರ

ಉನ್ಮತ್ತನಾಗುವನು ? ಹೇ ಜಗನ್ನಾಥ ! ಜೀವನು ಯಾವಾಗ ನಿನ್ನ ಮಹಿಮೆಯನ್ನು ಹೃದ್ಗತವಾಗಿ ಮಾಡಿಕೊಂಡು ಧನ್ಯನಾಗುವನು ?

ಆ ನೃತ್ಯಾವೋದಗಳು ಸಮಾಪ್ತಿಯಾದಮೇಲೆ ಸರನಾರಿಭಕ್ತರೆಲ್ಲರೂ ಸಮಸ್ವರದಲ್ಲಿ ಸಂಗೀತವನ್ನು ಪ್ರಾರಂಭಿಸಿದರು. ಆ ಸಂಗೀತವನ್ನು ಕೇಳಿ ಸ್ಥಾವರ ಜಂಗಮ ಸರ್ವಭೂತಗಳೂ ಧನ್ಯವಾಗಲಾರಂಭವಾಯಿತು. ಆ ಸಂಗೀತ:-

ಪ್ರಳಯಪಯೋಧಿ ಜಲೆಧೃತವಾನಸಿವೇದಂ
ವಿಹಿತವಹಿತ್ರ ಚರಿತ್ರಮಖೇದಂ
ಕೇಶವಧೃತ ಮೀನಶರೀರ
ಜಯಜಗದೀಶಹರೇ ||

ಕ್ಷಿತಿರತಿ ವಿಪುಳತರೆ ತಿಷ್ಠತಿತವಪೃಷ್ಠೆ
ಧರಣಿಧಾರಣ ಕಿಣಚಕ್ರಗರಿಷ್ಠೆ
ಕೇಶವಧೃತ ಕೂರ್ಮಶರೀರ
ಜಯಜಗದೀಶಹರೇ. ||

ವಸತಿದಶನಶಿಖರೆ ಧರಣೀತವಲಗ್ನಾ
ಶಶಿನಿ ಕಳಂಕಕಲೆವನಿಮಗ್ನಾ
ಕೇಶವಧೃತ ಸೂಕರರೂಪ
ಜಯಜಗದೀಶಹರೇ ||

ತವಕರಕಮಲವರೆನಖಮದ್ಭುತಶೃಂಗಂ
ದಳಿತಹಿರಣ್ಯಕಶಿಪುತನು ಭೃಂಗಂ
ಕೇಶವಧೃತನರಸಿಂಹರೂಪ
ಜಯಜಗದೀಶಹರೇ ||

ಛಲಯಸಿ ವಿಕ್ರಮಣೆ ಬಲಿಮದ್ಭುತವಾಮನ
ಪದನಖನೀರ ಜನಿತ ಜನಪಾವನ
ಕೇಶವಧೃತ ವಾಮನರೂಪ
ಜಯಜಗದೀಶಹರೇ ||

ಕ್ಷತ್ರಿಯರುಧಿರಮಯೆ ಜಗದಪಗತಪಾಪಂ
ಸ್ನಪಯ ಸಿಪಯಸಿಶಮಿತಭವತಾಪಂ

ಕೇಶವಧೃತ ಭೃಗುಪತಿರೂಪ
ಜಯಜಗದೀಶಹರೆ ||
ವಿತರಸಿ ದಿಕ್ಷುರಣೆ ದಿಕ್ಪತಿಕಮನೀಯಂ
ದಶಮುಖ ಮೌಳಿಬಲಿಂರಮಣೀಯಂ
ಕೇಶವಧೃತ ರಾಮಶರೀರ
ಜಯಜಗದೀಶಹರೆ ||
ವಹಸಿವಪುಷಿವಿಶದೆ ವಸನಂ ಜಲದಾಭಂ
ಹಲಹತಿಭೀತಿ ಮಿಳಿತಯಮುನಾಭಂ
ಕೇಶವಧ ತ ಹಲಧರರೂಪ
ಜಯಜಗದೀಶಹರೆ ||
ನಿಂದಸಿಯಜ್ಞವಿಧೆರಹಹಶ್ರುತಿಜಾತಂ
ಸದಯಹೃದಯದರ್ಶಿತಪಶುಘಾತಂ
ಕೇಶವಧೃತ ಬುದ್ಧಶರೀರ
ಜಯಜಗದೀಶಹರೆ ||
ಮ್ಲೇಚ್ಛನಿವಹ ನಿಧನೆ ಕಲಯಸಿಕರವಾಲಂ
ಧೂಮಕೇತುಮಿವಕಿಮಪಿ ಕರಾಳಂ
ಕೇಶವಧೃತ ಕಲ್ಕಿಶರೀರ.
ಜಯಜಗದೀಶಹರೆ ||

ಸಂಗೀತವು ಸಮಾಪ್ತವಾದ ಕೂಡಲೇ ಮಹಾಪುರುಷನು ಹೊರಟು ಹೋದನು. ಇತರರು ಮೊದಲು ದೇವರಿಗೆ ಸಾಷ್ಟಾಂಗವಾಗಿ ಪ್ರಣಾಮವನ್ನು ಮಾಡಿ ಅನಂತರ ಶಾಂತಿದೇವಿಗೆ ಪ್ರಣಾಮವನ್ನು ಮಾಡಿ ಬಟ್ಟಿಬ್ಬರಾಗಿ ಹೊರಟು ಹೋದರು. ಕೇವಲ ಶಾಂತಿ, ಅಭಿರಾಮ, ನಾರಯಣ ಈ ಮುವ್ವರು ಮಾತ್ರ ಮಂದಿರದಲ್ಲಿ ಉಳಿದರು.

ಈ ದಿನ ಮಹಾಪುರಷನ ಆಜ್ಞಾನುಸಾರವಾಗಿ ಶಾಂತಿದೇವಿಯು ಅಭಿರಾಮ ನಾರಾಯಣ ಇವರಿಗೂ ಶ್ಯಾಮಸುಂದರನಿಗೂ ಪರಿಚಯಮಾಡಿ ಕೊಡುತ್ತಾಳೆ.

# ಆರನೆಯ ಪರಿಚ್ಛೇದ.

ರಮಾಪತಿಯು ತೀರ್ಥಯಾತ್ರೆ ಹೊರಡುವನು. ಅವನ ಪಯಣಕ್ಕೆ ಸಿದ್ಧವಾಗ ತನ್ನ ಸಹಾಯಕ್ಕೆ ಕಾರಕೂನರಿಬ್ಬರೂ ದಾಸ ದಾಸಿಯರೂ ಅನೇಕರು ಹೋಗುವರು. ಮತ್ತು ಅವನ ದಿವಾನ ವಿಹಾರಿಲಾಲ ಮಿತ್ರನೂ ಹೋಗುವನು. ಪದಾರ್ಥಗಳೂ ಸಾಮಾನುಗಳೂ ಬೇಕಾದುದಕ್ಕಿಂತಲೂ ಹೆಚ್ಚಾಗಿ ಸಿದ್ಧವಾಗುತಲಿದ್ದುವು. ವಿಹಾರಿಲಾಲನು ಬಾಲ್ಯಕಾಲದಲ್ಲಿಯೇ ತಂದೆತಾಯಿಗಳನ್ನು ಕಳೆದುಕೊಂಡವನಾಗಿ ದಯಾಪರವಶನಾದ ರಾಧಾನಾಥನ ಮನೆಯಲ್ಲಿಯೇ ಪಾಲಿತನಾಗಿದ್ದನು. ಮೊದಲುಮೊದಲು ಜಮೀನುದಾರಿಯಲ್ಲಿ ಚಿಲ್ಲರೆ ಕೆಲಸಗಳನ್ನು ಮಾಡುತಲಿದ್ದನು ಅನಂತರ ಒಂದು ಗುಮಾಸ್ತ ಕೆಲಸಕ್ಕೆ ಬಂದು ಕ್ರಮವಾಗಿ ಹೆಚ್ಚು ಕೆಲಸಕ್ಕೆ ಬಂದನು. ಹಡಗು ಮುಣುಗಿಹೋಗಿ ರಮಾಪತಿಯು ರಾಧಾನಾಥನ ಆಶ್ರಯಕ್ಕೆ ಬಂದಮೇಲೆ ಅವನು ಅಲ್ಲಿ ಯಾರಾರಲ್ಲಿ ಸ್ನೇಹವನ್ನು ಬೆಳಸಿದ್ದನೋ ಅವರುಗಳಲ್ಲಿ ವಿಹಾರಿಲಾಲನು ಸರ್ವಪ್ರಧಾನ ಸ್ನೇಹಿತನಾಗಿದ್ದನು. ಅದು ಮೊದಲ್ಗೊಂಡು ವಿಹಾರಿಯೂ ರಮಾಪತಿಗೆ ಅಭಿನ್ನವಾದ ಹೃದಯಸ್ಪೃಕ್ಕ ಸ್ನೇಹಿತನಾಗಿದ್ದನು. ಈ ಅತುಳವಾದ ಐಶ್ವರ್ಯವು ರಮಾಪತಿಯ ಕೈವಶವಾದಮೇಲೆ ಅವನು ವಿಹಾರಿಲಾಲನೊಂದಿಗೆ ಆಲೋಚಿಸದೆ ಯಾವ ಕಾರ್ಯವನ್ನೂ ಮಾಡುತ್ತಿರಲಿಲ್ಲ. ಕಡೆಗೆ ದಿವಾನ ಕೆಲಸವು ಖಾಲಿಯಾದಾಗ ವಿಹಾರಿಲಾಲನಿಗೆ ಆ ಕೆಲಸವನ್ನು ಕೊಟ್ಟನು. ವಿಹಾರಿಯು ಕಾರ್ಯದಲ್ಲಿ ಬಹಳ ಸಮರ್ಥನಾಗಿದ್ದನು ಬಹಳ ತಿಳುವಳಿಕೆಯಿಂದ ಕೆಲಸವನ್ನು ನಿರ್ವಹಿಸುತಲಿದ್ದನು.

ದಾಸದಾಸಿಯರು ವಿಹಾರಿಬಾಬುವನ್ನು ಪ್ರಭುವಿನ ಪರಿವಾರಕ್ಕೆ ಸೇರಿದ್ದವನಾಗಿ ಮರ್ಯಾದೆಯಿಂದ ಕಾಣುತಲಿದ್ದರು. ವಿಹಾರಿಯು ಚಿಕ್ಕಂದಿನಿಂದಲೂ ಪರಿವಾರದಲ್ಲಿಯೇ ಇದ್ದವನಾದುದರಿಂದ ಅವನನ್ನು ಎಲ್ಲರೂ ಮನೆಯವನೆಂತಲೇ ಭಾವಿಸುತ್ತಲಿದ್ದರು. ಸಂಬಾಲಿಯು ಅವನನ್ನು ಅಣ್ಣನೆಂದು ಕರೆಯುವಳು ಮಾಧುರಿಯೂ ಮತ್ತು ಮಗುವೂ ಅವನನ್ನು ಮಾವ ಎಂದು ಕರೆಯುವರು. ರಮಾಪತಿಯು ಅವನನ್ನು ಭಾವಾ ಎಂದು ಕರೆಯುವನು. ಪುರಮಧ್ಯದಲ್ಲಿ ವಿಹಾರಿಯು ಹೋಗಿ ಬರುವುದಕ್ಕೆ ಯಾವ ಅಭ್ಯಂತರವೂ ಇರಲಿಲ್ಲ. ಅವನ

ಅಪ್ಪಣೆಯನ್ನು ಎಲ್ಲರೂ ಪಾಲನೆ ಮಾಡುತಲಿದ್ದರು. ವಿಹಾರಿಬಾಬು ಹೇಳಿದ್ದಾನೆಂದು ತಿಳಿದಕೂಡಲೆ ಸುರಬಾಲೆಯು ಅದಕ್ಕೆ ಪ್ರತಿಯೇನೂ ಹೇಳುತ್ತಿರಲಿಲ್ಲ. ಮತ್ತು ರಮಾಪತಿಯೂ ಅದಕ್ಕೆ ಸಮ್ಮತಿಸುವನು.

ಆದರೆ ಮನುಷ್ಯನ ಮನಸ್ಸು ಅತಿದುರ್ಜ್ಞೇಯವಾದುದು, ಬಹಿರಾವರಣವನ್ನು ನೋಡಿ ಮನುಷ್ಯನ ಹೃದಯವಿಚಾರವನ್ನು ಮಾಡುವುದಕ್ಕಾಗುವುದಿಲ್ಲ. ಕಾರ್ಯವನ್ನು ನೋಡಿ ಮನಸ್ಸಿನ ಸ್ಥಿತಿಯನ್ನು ಊಹಿಸುವುದಕ್ಕಾಗುವುದಿಲ್ಲ. ರಮಾಪತಿಯು ಈ ಪರಮಾತ್ಮೀಯನಾದ ಮತ್ತು ಪರಮ ಪ್ರಾಣಸ್ನೇಹಿತನಾದ ವಿಹಾರಿಯು ಅಂತರ್ಯದಲ್ಲಿ ಅವನಿಗೆ ಪರಮ ಶತ್ರುವಾಗಿದ್ದನು. ಪ್ರಕೃತದಲ್ಲಿ ರಮಾಪತಿಯು ಆಲಸ್ಯದಿಂದ ಮರಣಾಪನ್ನನಾಗಿ ಶಯ್ಯಾಗತನಾಗಿದ್ದು ಆಗವನ ಪ್ರಾಣರಕ್ಷಣೆಯವಿಷಯದಲ್ಲಿ ಚಿಕಿತ್ಸರೂ ಹತಾಶರಾಗಿದ್ದಾಗ ವಿಹಾರಿಲಾಲನು ಬಾಹ್ಯತಃ ನಟಿಸಿ ಪ್ರಕಾಶಪಡಿಸಿದ ಅವನ ವ್ಯಸನಕ್ಕೆ ಪಾರವೇ ಇರಲಲ್ಲ. ಆದರೆ ಆರಾದರೂ ಆಗವನ ತತ್ಕಾಲದ ಆಂತರಿಕವಾದ ಹೃದಯವನ್ನು ಹುಡುಕಿ ನೋಡಬಲ್ಲವರಾಗಿದ್ದರೆ ಆಗವನ ಸಂತೋಷಕ್ಕೆ ಪಾರವೇ ಇರಲಿಲ್ಲವೆಂದು ತಿಳಿಯಬಹುದಾಗಿತ್ತು. ಅವನು ಆಕಾಲದಲ್ಲಿ ಕಾಯಮನೋವಾಕ್ಕಾಗಿ ರಮಾಪತಿಯ ಮರಣವನ್ನೇ ಕೋರುತಲಿದ್ದನು. ಅವನ ಚಿತ್ತವು ಏತಕ್ಕೆ ಇಂತಹ ಭಾವವನ್ನು ತಾಳಿದ್ದಿತೋ ಅದು ಕ್ರಮಶಃ ಗೊತ್ತಾಗುವುದು.

ಆಪಾತತಃ, ರಮಾಪತಿ, ಸುರಬಾಲೆ, ಮಾಧುರಿ, ಮಗು, ವಿಹಾರಿಬಾಬು, ಅವಶ್ಯಕವಾದ ದಾಸದಾಸಿಯರು ಇಷ್ಟುಮಂದಿ ಯಾತ್ರೆಗೆ ಹೊರಡತಕ್ಕವರೆಂದು ಗೊತ್ತಾಗಿತ್ತು. ಬೇಕಾದುದೆಲ್ಲಾ ಸಿದ್ಧವಾಯಿತು. ಹೌರಾ ಸ್ಟೇಷನಿನಲ್ಲಿ ರೈಲುಬಂಡಿಯನ್ನು ರಿಜರ್ವಮಾಡಿದ್ದಾಯಿತು.

ರಮಾಪತಿಯು ಮೊದಲಿನಹಾಗೆ ಅಪ್ರಫುಲ್ಲನಾಗಿ ಕಾತರನಾಗಿಲ್ಲ. ಅವನು ಎರಡು ಮೂರು ತಡವೆ ಸುಕುಮಾರಿಯನ್ನು ನೋಡಿದ್ದನು. ಅವಳ ಸಂಗಡ ಬಹಳವಾಗಿ ಮಾತುಕಥೆಯೂ ನಡೆದದೆ. ಆ ದೇವಿಯು ಪುನಃ ಪದೇಪದೆ ಬಂದು ನೋಡುವುದಾಗಿ ಹೇಳಿದ್ದಾಳೆ. ಆದುದರಿಂದ ರಮಾಪತಿಯೂ ಸುರಬಾಲೆಯೂ ಸಂಪೂರ್ಣವಾಗಿ ಸುಖಿಯರಾಗಿದ್ದಾರೆ. ಯಾವ ದಾರುಣವಾದ ದುಃಖಭಾರವು ಅವರಿಬ್ಬರನ್ನು ಸಂಪೂರ್ಣವಾಗಿ ನೆಲಕ್ಕೆ ಅದುಮಿಬಿಟ್ಟಿತ್ತೋ ಈಗದು ಅಂತರ್ಹಿತ

ವಾಗಿ ಹೋಗಿತ್ತು. ಅವರಿಬ್ಬರೂ ಸುಕುಮಾರಿಯು ತಮ್ಮನ್ನು ಬಿಟ್ಟು ಅಗಲಿ ಹೋಗದಿರುವುದಕ್ಕೆ ಬೇಕಾದುದನ್ನೆಲ್ಲಾ ಮಾಡಿದ್ದರು. ಆದರೆ ಅವರ ಪ್ರಯತ್ನವು ಸಂಪೂರ್ಣವಾಗಿ ಸಫಲವುಳ್ಳದುದಾಗಲಿಲ್ಲ. ಸುಕುಮಾರಿಯು ಅವರ ಸಂಗಡ ವಾಸವಾಗಿರಲು ಸಮ್ಮತಿಸಲಿಲ್ಲ. ಅವಳು ತಾನು ಅವರೊಡನೆ ವಾಸವಾಗಿರುವುದಕ್ಕೆ ಇರುವ ಅನೇಕ ಅನನುಕೂಲಗಳನ್ನೂ ತನ್ನ ಅಸ್ವಾತಂತ್ರ್ಯವನ್ನೂ ಕುರಿತು ಬಹಳವಾಗಿ ಹೇಳಿಕೊಂಡಿದ್ದಳು. ಅನಂತರ ತಾನು ಪದೇಪದೆ ಬಂದು ಅವರನ್ನು ನೋಡುವುದಾಗಿ ಭರವಸೆ ಹೇಳಿದುದರ ಮೇಲೆ ಅವರು ಯತ್ನವಿಲ್ಲದೆ ಹಾಗೆಯೇ ಆಗಲೆಂದು ಸುಮ್ಮನಾದರು.

ಸುಕುಮಾರಿಯು ಈಗ ವಾಸವಾಗಿರುವುದೆಲ್ಲಿ? ಅವಳಿಗೆ ಊಟಕ್ಕೆ ಮಾರ್ಗವೇನು? ಅವಳ ರಕ್ಷಕರಾರು? ಎಂಬಿವೇ ಮುಂತಾದ ವಿಷಯಗಳಲ್ಲಿ ರಮಾಪತಿಯಾಗಲಿ ಸುರಬಾಲೆಯಾಗಲಿ ಅವಳಿಂದ ಯಾವ ಸಮಾಚಾರವನ್ನೂ ತಿಳಿದುಕೊಳ್ಳಲಸಮರ್ಥರಾಗಿದ್ದರು. ಇಂತಹ ವಿಷಯವನ್ನು ಕುರಿತು ಪ್ರಶ್ನೆ ಮಾಡಿದರೆ ಸುಕುಮಾರಿಯು ಕೇವಲ ಭಗವಂತನ ಹೆಸರನ್ನು ಹೇಳುವಳು. ಸುರಬಾಲೆಯು, ತನ್ನ ಸವತಿಯು ಜಲಮಗ್ನಳಾದ ಮೇಲೆ ಆವದೋ ಅಸ್ವೈಸರ್ಗಿಕವಾದ ಉಪಾಯದಿಂದ ದೇವತ್ವವನ್ನು ಹೊಂದಿದ್ದಾಳೆಂದೂ, ಹಾಗಿಲ್ಲದೆ ಹೋಗಿದ್ದರೆ, ಇಂತಹ ಮಾತೂ, ಇಂತಹ ರೂಪವೂ ಇಂತಹ ಸಾಮರ್ಥ್ಯವೂ ಮನುಷ್ಯಮಾತ್ರನಿಗೆ ಇರಲಾರದೆಂದೂ ಸ್ಥಿರಮಾಡಿಕೊಂಡು, ತನಗೆ ದೇವರ ದರ್ಶನವಾಯಿತೆಂತಲೂ ತನಗೆ ದೇವರ ಪರಿಚಯುವಾಯಿತೆಂತಲೂ ಮನಸ್ಸಿನಲ್ಲಿ ತಿಳಿದುಕೊಂಡು ಅದರಿಂದುಂಟಾದ ಅವಳ ಆನಂದಕ್ಕೂ ಸಂತೋಷಕ್ಕೂ ಪಾರವೇ ಇರಲಿಲ್ಲ. ರಮಾಪತಿಯೂ, ತನ್ನ ಹೆಂಡತಿಯು ಆವುದೋ ಒಂದು ಅಸಂಭಾವಿತವಾದ ಉಪಾಯದಿಂದ ಅಲೌಕಿಕವಾದ ಸಾಮರ್ಥ್ಯವನ್ನು ಹೊಂದಿದ್ದಾಳೆಂದೂ ಅವಳ ಆಕೃತಿ ಮತ್ತು ಪ್ರಕೃತಿಯು ಚಿರಕಾಲವೂ ದೇವತುಲ್ಯವಾಗಿದ್ದುದು ಈಗ ಅಭೂತಪೂರ್ವವಾದ ಪರಿವರ್ತನವಾಗಿದೆಯೆಂದೂ, ತನ್ನ ಸುಕುಮಾರಿಯಾಗಿದ್ದವಳು ಲೋಕಾಂತರವನ್ನು ಹೊಂದಿ ದೇವಸಾಮರ್ಥ್ಯವನ್ನೂ ದೇವಕಾಂತಿಯನ್ನೂ ಹೊಂದಿದ್ದಾಳೆಂದೂ ಕೇವಲ ದೇವಲೀಲೆಯನ್ನು ಪ್ರಕಾಶಗೊಳಿಸುವುದಕ್ಕೋಸ್ಕರ ಭೂಮಿಯ ಮೇಲೆ ಪುನಃ ಆವಿರ್ಭೂತಳಾಗಿದ್ದಾಳೆಂದೂ ಹೇಗಾದರೂ ಆಗಲಿ, ಅವಳು ಸುಖಿಯಾಗಿದ್ದಾಳೆಂದೂ ತಿಳಿದುಕೊಂಡಿದ್ದನು.

ಈ ಪ್ರಕಾರ ಅವಸ್ಥಾಪನ್ನರಾದ ರಮಾಪತಿ ಮತ್ತು ಸುರಬಾಲೆಯು ಗೊತ್ತಾದ ದಿನ ಪರಮಾನಂದದಿಂದ ರೈಲು ಬಂಡಿ ಹತ್ತಿ ತೀರ್ಥಯಾತ್ರೆಗೋಸ್ಕರ ಪಯಣಮಾಡಿದರು. ಹೊಗೆಯ ಬಂಡಿಯು ಈ ಆನಂದಪೂರ್ಣರಾದ ವ್ಯಕ್ತಿಗಳನ್ನು ವಹನ ಮಾಡಿಕೊಂಡು ವಾಯುವೇಗದಿಂದ ಓಡಲಾರಂಭಿಸಿತು. ಎಷ್ಟೋ ವನಗಳು ಎಷ್ಟೋ ಕಾನನಗಳು, ಎಷ್ಟೋ ಜಲಾಶಯಗಳು, ಎಷ್ಟೋ ಪ್ರಾಂತರಗಳು, ಎಷ್ಟೋ ಗ್ರಾಮಗಳು, ಎಷ್ಟೋ ಧಾನ್ಯಕ್ಷೇತ್ರಗಳು, ಇವೇ ಮುಂತಾದವು ಅವರ ಕಣ್ಣುಗಳಿಗಿದುರಾಗಿ ಕುಣಿದಾಡಿಕೊಂಡು ಹೋದವು. ಎಷ್ಟು ಜನತೆ, ಎಷ್ಟು ವ್ಯಸ್ತತೆ, ಎಷ್ಟು ಉತ್ಸಾಹ ಕಣ್ಣಿಗೆ ಗೋಚರವಾಗುತಲಿತ್ತು! ಮಾಧುರೀ ಮತ್ತು ಮಗುವು ಪರಸ್ಪರ ಏನೇನೋ ಹೇಳಿಕೊಳ್ಳುತ್ತ ಗದ್ದಲ ಮಾಡುತಲಿದ್ದರು. ಸುರಬಾಲೆಯು ನಗುಮುಖಿಳಾಗಿ ರಮಾಪತಿಯನ್ನು ಕುರಿತು ಎಷ್ಟೋಸಂಗತಿಗಳನ್ನು ಕೇಳುವಳು. ಸುರಬಾಲೆಯು ಬಹಳ ಆನಂದಿತಳಾಗಿದ್ದಾಳೆಂದು ತಿಳಿದು ತನ್ನ ಪಯಣದ ಸನ್ನಾಹಗಳೆಲ್ಲಾ ಸಾರ್ಥಕವಾಯಿತೆಂದಂದುಕೊಂಡನು.

ಗಾಡಿಯು ವರ್ಧಮಾನವನ್ನು ಬಿಟ್ಟು ಕ್ರಮಶಃ ಕೊರ್ಡೊಮಾರ್ಗವಾಗಿ ತಿರುಗಿ ಉಪನ್ಯಾಸಗಳಲ್ಲಿ ವರ್ಣಿಸಲ್ಪಟ್ಟ ದೈತ್ಯರಹಾಗೆ ಹುಂಕಾರವನ್ನು ಬಿಟ್ಟು ತರಂಗಾಯಿತವಾದ ಬಂಧುರವಾದ (*undulating*) ಪ್ರದೇಶವನ್ನು ಪ್ರವೇಶಿಸಿ ಪರಮ ರಮಣೀಯವಾದ ದೃಶ್ಯಾವಳಿಗಳ ಮಧ್ಯದಲ್ಲಿ ಓಡಲಾರಂಭಿಸಿತು. ಮೇಘಮಾಲೆಯ ಹಾಗೆ ಪರ್ವತಶ್ರೇಣಿಗಳ ದುರಾಗತವಾದ ಅಪೂರ್ವವಾದ ಶೋಭಾರಾಶಿಯೂ ಶಾಲಪಲಾಶವನಗಳ ಅಪರೂಪವಾದ ದೃಶ್ಯವೂ ರಮಾಪತಿ ಮತ್ತು ಸುರಬಾಲೆಗಿಬ್ಬರಿಗೂ ವಿನೋದವನ್ನುಂಟುಮಾಡುತಲಿದ್ದುವು ಅನೇಕ ಅಲ್ಪಜಲವಿಶಿಷ್ಟವಾದ ಸ್ರೋತಸ್ವತಿಯಾದ ನದಿಗಳು ಅವರ ಪ್ರೀತಿಯನ್ನುಂಟು ಮಾಡಲಾರಂಭಿಸಿದವು. ಕಲ್ಯಾಣೇಶ್ವರಿಯನ್ನು ನೋಡುವುದಕ್ಕೋಸ್ಕರ ಅವರು ಬರಾಕರ ಊರಿನಲ್ಲಿ ಮೊದಲು ಇಳಿದರು. ಬರಾಕರ ಪಟ್ಟಣವು ಕಲ್ಲಿದ್ದಲಿನ ಹೊಗೆಯಿಂದ ತುಂಬಿದ್ದುದರಿಂದ ಊರಿನಿಂದ ಸ್ವಲ್ಪದೂರದಲ್ಲಿ ಅವರು ಇಳಿಯುವ ಬಿಡದಿಯು ಗೊತ್ತಾಯಿತು. ಅಲ್ಲಿ ಇಳಿದು ರಾತ್ರಿಎಲ್ಲರೂ ಸುಖವಾಗಿ ಕಾಲವನ್ನು ಕಳೆದರು.

ಮರುದಿನ ಪ್ರಾತಃಕಾಲದಲ್ಲಿ ಎಲ್ಲರೂಸೇರಿ ಕಲ್ಯಾಣೇಶ್ವರಿಯನ್ನು ನೋಡುವುದಕ್ಕೆ ಹೊರಟರು. ಆ ಅರಣ್ಯ ಮತ್ತು ಪರ್ವತದ ಮಧ್ಯದಲ್ಲಿದ್ದ

ದೇವಸ್ಥಾನದ ಗಂಭೀರವಾದ ದೃಶ್ಯವನ್ನು ಕಾಣುತಲೇ ಅವರೆಲ್ಲರ ಹೃದಯವು ಪುಳಕಿತವಾಯಿತು. ಅವರು ಭಕ್ತಿಭಾವದಿಂದ ದೇವರ ದರ್ಶನವನ್ನು ಮಾಡಿಕೊಂಡು ಸಾಯಂಕಾಲಕ್ಕೆ ಸ್ವಲ್ಪವೊದಲೇ ಬಿಡಿದಿಗೆ ಹಿಂದಿರಿಗಿ ಬಂದರು. ಹಿಂದಿರುಗಿ ಬರುವಾಗ ಪಂಚಕೋಟಿಯ ಸುವಿಸ್ತೃತವಾದ ಶೈಲಮಾಲೆಗಳು ಅವರ ಮನಸ್ಸನ್ನೂ ನಯನಗಳನ್ನೂ ಮೋಹಗೊಳಿಸಿದ್ದುವು.

ಕಲ್ಯಾಣೇಶ್ವರಗೆ ಸಮೀಪದಲ್ಲಿದ್ದ ಎಲ್ಲಾ ಸ್ಥಳಗಳೂ ರಮಾಪತಿಗೆ ಬಹಳ ಮೋಹಗೊಳಿಸಿದುದರಿಂದ ಅವನು ಪುನಃ ಮಾರನಯದಿನ ಅವುಗಳನ್ನು ನೋಡುವುದಕ್ಕೆ ಹೋಗದಿರಲಾರದವನಾಗಿದ್ದನು. ಈ ದಿನ ಸುರಬಾಲೆ ಮಾಧುರಿ ಮತ್ತು ಮಗುವನ್ನು ಅಲ್ಲಿಗೆಲ್ಲಾ ಕರೆದುಕೊಂಡು ಹೋಗುವುದಕ್ಕ ಕ್ಲಾಂತರಾಗಿದ್ದರು. ಆದುಕಾರಣ ಅವರು ಹೋಗುವುದಕ್ಕೆ ಇಷ್ಟಪಡಲಿಲ್ಲ.

ಮರುದಿನ ವಿಹಾರಿಬಾಬುವೂ ಶಾರೀರಕವಾದ ಆಲಸ್ಯದಿಂದ ರಮಾಪತಿಯ ಸಂಗಡ ಹೋಗುವುದಕ್ಕೆ ಸಿದ್ಧನಾಗಲಿಲ್ಲ. ಅದಲ್ಲದೆ ಸುರಬಾಲೆಯು ಮನೆಯಲ್ಲಿಯೇ ಉಳಿದುಕೊಳ್ಳುವಳಾಗಿದ್ದ ಕಾರಣ ಅವಳ ರಕ್ಷಕಸ್ವರೂಪನಾಗಿ ವಿಹಾರಿಯೂ ಮನೆಯಲ್ಲಿಯೇ ಇರಬೇಕೆಂದು ಸ್ಥಿರವಾಯಿತು. ಕೇವಲ ಒಬ್ಬ ಅಡಿಗೆ ಮಾಡುವವನು, ಇಬ್ಬರು ದಾಸಿಯರು, ವಿಹಾರಿಬಾಬು ಸುರಬಾಲೆ ಮತ್ತು ಅವರಿಬ್ಬರು ಮಕ್ಕಳು ಇಷ್ಟುಮಂದಿ ಮನೆಯಲ್ಲಿರಬೇಕೆಂದು ನಿಷ್ಕರ್ಷೆಯಾಯಿತು ಉಳಿದಿದ್ದ ದ್ವಾರಪಾಲಕರೂ ಭೃತ್ಯರೂ ರಮಾಪತಿಯೊಂದಿಗೆ ಹೋದರು ಮನೆಯಲ್ಲಿ ವಿಹಾರಿಬಾಬುವು ಇರುವದರಿಂದ ಮತ್ತಾರೂ ಇರಬೇಕಾದ ಆವಶ್ಯಕವನ್ನು ಯಾರೂ ಅನುಭವ ಮಾಡಲಿಲ್ಲ.

—••❀••—

## ಹನ್ನೆರಡನೆಯ ಪರಿಚ್ಛೇದ.

ಇಬ್ಬರು ದಾಸಿಯರು ಮಾಧುರಿಯನ್ನೂ ಮಗುವನ್ನು ಕರೆದುಕೊಂಡು ಹೋಗಿ ಆ ದೊಡ್ಡಮನೆಯ ಪುಷ್ಪೋದ್ಯಾನದಲ್ಲಿ ತಿರುಗಾಡುತಲಿದ್ದರು ವಿಹಾರಿಬಾಬುವು ಅವರ ಹತ್ತಿರ ಹೋಗಿ ಮಾಧುರಿ ಮತ್ತು ಮಗುವಿನ ಸಂಗಡ ನಾನಾಪ್ರಕಾರವಾಗಿ ಹುಡುಗಾಟ ಮಾಡುತ ಆಡಿಸುತಲಿದ್ದನು. ಹುಡುಗರೂ ಮಾವನ

ಸಂಗಡ ಓಡಾಡಿಕೊಂಡು ನೆಲದಮೇಲೆ ಹೊರಳಾಡುತ್ತ ಬಹಳ ಆಟವಾಡಿದವು. ಆಗ ಸುರಬಾಲೆಯು ಕೋಟಡಿಯಲ್ಲಿ ಕೈಯಲ್ಲೊಂದು ಪುಸ್ತಕವನ್ನು ಹಿಡಿದುಕೊಂಡು ಕುಳಿತಿದ್ದಳು. ಪುಸ್ತಕದಲ್ಲಿ ಅವಳಿಗೆ ಮನಸ್ಸಿಲ್ಲ; ಸಾಧ್ವಿಯೂ ಮಗುವೂ ವಿಹಾರಿಯೊಂದಿಗೆ ಆಡುವುದನ್ನು ನೋಡುವುದರಲ್ಲಿ ವಿನಿವಿಷ್ಟಚಿತ್ತಳಾಗಿದ್ದಳು. ವಿಹಾರಿಬಾಬುವು ಹುಡುಗರ ಮೈಮೇಲಿದ್ದ ಮಣ್ಣು ಒದರಿ ದಾಸಿಗಳನ್ನು ಕುರಿತು, ನೀವು ಈದಿನ ಸಾಧ್ವಿ ಮತ್ತು ಮಗುವನ್ನು ಕರೆದುಕೊಂಡು ಹೋಗಿ ಬರಾಕರ ನದಿಯಲ್ಲಿ ಸ್ನಾನಮಾಡಿಸಿ ಚೆನ್ನಾಗಿ ಮೈಯನ್ನು ತೊಳೆದುಕೊಂಡು ಬನ್ನಿ. ನದಿಯ ನೀರು ಬಹಳ ಆರೋಗ್ಯಕರವಾದುದು. ಹುಡುಗರ ಮೈಯಲ್ಲಿ ಬಹಳ ಕೊಳೆ; ಚೆನ್ನಾಗಿ ಸ್ನಾನಮಾಡಿಸಿಕೊಂಡು ಬನ್ನಿ. ನದಿಯು ಬಹಳ ದೂರವಿಲ್ಲ; ಯಜಮಾನಿಗೂ ತಿಳಿಸಿ ಹೋಗಿರೆಂದು ಹೇಳಿದನು.

ದಾದಿಯರು ಮಕ್ಕಳನ್ನು ಕರೆದುಕೊಂಡು ಸುರಬಾಲೆಯ ಬಳಿಗೆ ಬಂದರು; ಸುರಬಾಲೆಯು ವಿಹಾರಿಬಾಬುವು ಹೇಳಿದ್ದುದನ್ನು ತಾನೇ ಕೇಳಿದ್ದಳು. ಆದು ಕಾರಣ ದಾಸಿಯರು ಬಂದು ಕೇಳುತಲೇ, ಸುರಬಾಲೆಯು, ಅವರೇನು ಹೇಳಿರುವಾಗ ನಾನು ಬೇರೆ ಏನು ಹೇಳಲಿ? ಹಾಗೆಯೇ ಮಾಡಿರೆಂದು ಹೇಳಿದಳು.

ಕೂಡಲೆ, ಪುಷ್ಪತೈಲ, ಸ್ವಲ್ಪ ಸೀಗೆಪುಡಿ, ಸುಗಂಧವಾದ ಸಾಬೂನು, ಮತ್ತು ಒರಸುವಬಟ್ಟೆ ಉಡುವಬಟ್ಟೆ ಇವುಗಳೆಲ್ಲಾ ತೆಗೆದುಕೊಂಡು ದಾಸಿಯರು ಮಕ್ಕಳನ್ನು ಸ್ನಾನಮಾಡಿಸುವುದಕ್ಕೆ ಕರೆದುಕೊಂಡು ಹೋದರು. ಅಡುಗೆ ಮಾಡುವವನು ದೂರದಲ್ಲಿ ಪಾಕಶಾಲೆಯಲ್ಲಿ ತನ್ನ ಕೆಲಸದಲ್ಲಿದ್ದನು. ಮನೆಯಲ್ಲಿ ವಿಹಾರಿಬಾಬು ಮತ್ತು ಸುರಬಾಲೆಯನ್ನು ಬಿಟ್ಟು ಮತ್ತಾರೂ ಇರಲಿಲ್ಲ.

ಆಗ ವಿಹಾರಿಯು ಮನಸ್ಸಿನಲ್ಲಿ, ಇಂತಹ ಸಮಯವು ಮತ್ತಾವಾಗಲೂ ಸಿಕ್ಕದು. ಹನ್ನೆರಡು ವರುಷದಿಂದ ನನ್ನನ್ನು ಸುಡುತಲಿರುವ ಆಶೆಯನ್ನು ಶಾಂತಿ ಮಾಡಿಕೊಳ್ಳುವುದಕ್ಕೆ ಈಗ ತಕ್ಕ ಸಮಯವು ಒದಗಿದೆ. ಇಂತಹ ಸಮಯವು ನನ್ನ ಪ್ರಾಣವಿರುವವರೆಗೆ ಎಂದಿಗೂ ಸಿಕ್ಕಲಾರದು. ನಾನೂ ಬಹಳ ಪ್ರಯತ್ನಪಟ್ಟು ನೋಡಿದೆನು. ಆದರೂ ಪಾಪಪುಂಜವಾದ ದುರಾಶೆಯನ್ನು ನಿವಾರಣೆ ಮಾಡಲಾರದವನಾಗಿದ್ದೇನೆ. ಇಲ್ಲ—ಅಂತಹ ಪ್ರಯತ್ನದಿಂದ ಪ್ರಯೋಜನವಿಲ್ಲ. ಹಾಗೆ ಇದು ಪಾಪಕಾರ್ಯವಾಗಿದ್ದರೆ ನಾನು ಪಾಪಿಯಾಗಿಯೇ ತೀರಬೇಕು. ಪಾಪವಾಗಲಿ, ದುಷ್ಕರ್ಮವಾಗಲಿ, ನರಕವಾಗಲಿ, ಈಯಾಶೆಯನ್ನಡಗಿಸಲಸಾಧ್ಯ.

ಅದೃಷ್ಟದಲ್ಲಿ ಸ್ವಪ್ನವು ಆಗಿಹೋಗುತ್ತದೆ. ನಾನು ಈ ದಿನ ಮನಸ್ಸಿನ ಆಶೆಯನ್ನು ಪೂರ್ತಿಮಾಡಿಕೊಳ್ಳುತ್ತೇನೆಂದಂದುಕೊಂಡನು.

ಆಗ ವಿಹಾರಿಬಾಲನ ಮೂರ್ತಿಯು ಅತಿಭಯಾನಕವಾಗುತ್ತ ಬಂದಿತು. ಅವನ ಕಣ್ಣುಗಳು ಕೆಂಪೇರಿ ಕಿಡಿಯನ್ನುಗುಳುತಲಿದ್ದವು. ಮುಖದಭಾವವು ಕರುಣಾಶೂನ್ಯವಾಗಿದ್ದಿತು. ಆಗವನು ಮೆಲ್ಲಮೆಲ್ಲನೆ ಸುರಬಾಲೆಯು ಇದ್ದ ಕೊಟಡಿಗೆ ಪ್ರವೇಶಮಾಡಿದನು. ಅವನನ್ನು ಕಾಣುತ್ತಲೇ ಸುರಬಾಲೆಯು ಭಯಚಕಿತಳಾಗಿ, ಅಣ್ಣಾ! ಇದೇನಿದು! ನಿನ್ನ ಸ್ವರೂಪವು ಹೀಗೇಕೆ ಆಗಿದೆ? ನಿನಗೇನಾದರೂ ಆಲಸ್ಯವೆ? ಎಂದು ಕೇಳಿದಳು.

ವಿಹಾರಿ - ಆಲಸ್ಯ - ಓಃ! ಅದರ ಸಮಾಚಾರವನ್ನು ಮತ್ತೇನೆಂದು ಹೇಳಲಿ? ಅತ್ಯಂತ ಭಯಾನಕವಾದ ಆಲಸ್ಯವು ನನ್ನ ಮನಸ್ಸು ಪ್ರಾಣಗಳನ್ನು ಸುಡುತಲಿದೆ. ನಿನ್ನ ಕರುಣೆಯನ್ನು ಹೊರತು ಆ ಆಲಸ್ಯವು ನಿವಾರಣೆಯಾಗುವುದಕ್ಕೆ ಬೇರೆ ಔಷಧವಿಲ್ಲ. ಈ ದಿನ ನೀನು ನನ್ನನ್ನು ರಕ್ಷಿಸು—ನನ್ನ ಪ್ರಾಣವೇ ಹೋಗುತಲಿದೆ.

ಆಗ ಆ ಸುರಸುಂದರಿಯಾದ ಯುವತಿಯು ಅತ್ಯಂತ ಉತ್ಕಂಠಿತವಾದ ಭಾವದಿಂದ, ಅಣ್ಣಾ! ನಾನೇನು ಮಾಡಬೇಕೋ ಅದನ್ನು ಹೇಳು. ನಿನ್ನ ಆಲಸ್ಯ ನಿವಾರಣೆಗೆ ಏನು ಮಾಡಬೇಕೋ ಅದನ್ನು ಮಾಡುತ್ತೇನೆಂದು ಹೇಳಿದಳು.

ವಿಹಾರಿ—ಕೇಳು, ಸುರಬಾಲೆ! ಬಾಲ್ಯಕಾಲದ ಮಾತುಗಳು ನಿನಗೆ ಜ್ಞಾಪಕವಿದೆಯೋ? ಬಾಲ್ಯಕಾಲದಲ್ಲಿ ನೀನೂ ನಾನೂ ಒಂದೇಸ್ಥಳದಲ್ಲಿ ಆಡುತಲಿದ್ದೆವು. ಆಗಿನಿಂದಲೂ ಈ ನಿರ್ಭಾಗ್ಯನು ನಿನ್ನ ಸಂಗಡಲೇ ಇರುತಲಿದ್ದಾನೆ. ಆಗಿನಿಂದಲೂ ಈ ನಿನ್ನ ದಾಸನು ನಿನ್ನ ಪೂಜೆಯನ್ನೇ ಮಾಡುತಲಿದ್ದಾನೆ. ನಾನು ಬ್ರಾಹ್ಮಣನಾಗಿದ್ದರೆ ನಿಮ್ಮ ತಂದೆಯು ನಿನ್ನನ್ನು ನನಗೇನೇ ಕೊಟ್ಟು ವಿವಾಹವನ್ನು ಮಾಡುತಲಿದ್ದರು. ಆದರೆ ನನ್ನ ದುರದೃಷ್ಟ. ಆದುದರಿಂದಲೇ ನನಗೆ ಸೇರತಕ್ಕ ವಸ್ತುವು ಇತರನಿಗೆ ಸೇರಿಹೋಯಿತು. ಆದರೆ ಸುರಬಾಲೆ! ನೀನು ಇತರನ ಅಂಕಶಾಯಿನಿಯಾಗಿದ್ದರೂ ಇರು, ಮತ್ತು ನಿನ್ನ ಮನೋಭಾವವು ಹೇಗಾದರೂ ಇರಲಿ, ನಿನ್ನನ್ನು ಹೊಂದಬೇಕೆಂಬ ಆಶೆಯನ್ನು ನಾನು ಸಂವರಣಮಾಡುವುದೆಂಬುವದು ಶುದ್ಧವಾಗಿ ಅಸಂಭವವಾದದು. ನಾನು ತಿಳಿದು

ಕೊಂಡಿದ್ದುದರಲ್ಲಿ, ನಾನು ನಿನ್ನನ್ನು ಹೇಗೆ ಪ್ರೀತಿಸುತ್ತೇನೋ, ಹಾಗೆಯೇ ನೀನು ನನ್ನನ್ನು ಪ್ರೀತಿಸುತ್ತಿಯೆಂದು ತಿಳಿದಿದ್ದೆನು. ಅತಿಂಥ ನೀನ ಯಾರವಳೇ ಆದರೂ ನಿನ್ನ ಪ್ರೇಮವನ್ನು ನಾನೇ ಹೊಂದುವೆನು. ಪ್ರಕಾಶ್ಯವಾಗಿ ಅಲ್ಲದಿದ್ದರೂ ಗೋಪ್ಯವಾಗಿ ನಿನ್ನ ಪ್ರೇಮವನ್ನು ನಾನೇ ಭೋಗಿಸುವೆನೆಂದು ಮುಂತಾಗಿ ತಿಳಿದಿದ್ದೆನು. ಆದರೆ ಅದೆಲ್ಲವೂ ಹಾಳಾಗಿಹೋಯಿತು. ಆದುದರಿಂದ, ಈಗ ನಾನು ಪಾಪಾತ್ಮನಾದ ಅಸಮಸಾಯಕನಿಂದ ನಿನ್ನನ್ನು ಹೊಂದಲು ವ್ಯಾಕುಲವುಳ್ಳವನಾಗಿದ್ದೇನೆ. ಸುಂದರಿ! ಈ ಶೋಕವನ್ನು ಸಹಿಸಲು ನನಗೆ ಅಸಾಧ್ಯ. ಅದುಕಾರಣ ನಾನು ಜ್ಞಾನಶೂನ್ಯನಾಗಿದ್ದೇನೆ. ನಾನು ಸಾಯುತ್ತೇನೆ. ಸುರಬಾಲೆ! ಈದಿನ ನೀನು ನನ್ನನ್ನು ರಕ್ಷಿಸು.

ಸುರಬಾಲೆಯು ತಲೆಮೇಲೆ ಸಿಡಿಲುಬಿದ್ದಂತೆ ಅವಳು ಅತ್ಯಂತ ಭೀತಳಾಗಿ, ಅಣ್ಣಾ! ಅಣ್ಣಾ! ನಿನಗೆ ಇದ್ದಕ್ಕಿದ್ದ ಹಾಗೆ ಹೀಗೇಕೆ ಮತಿಗೆಟ್ಟಿತು? ನೀನು ನನ್ನನ್ನು ಒಂದು ಸ್ವಪ್ನದಲ್ಲಾದರೂ ಪ್ರೀತಿಸಿದ್ದರೆ ಇಂತಹ ದುರಾಲೋಚನೆಯು ನಿನ್ನ ಮನಸ್ಸಿನಲ್ಲಿ ಎಂದಿಗೂ ಹುಟ್ಟದು. ನಾನು ನಿನ್ನನ್ನು ಸಹೋದರನೆಂದು ತಿಳಿದಿದ್ದೇನೆ. ನಿನ್ನ ಈ ಮತಿಗೇಡಿನ ಮಾತನ್ನು ಕೇಳಿ ನಾನು ಮರಣಾಂತಿಕವಾಗಿ ದುಃಖಿತಳಾಗಿದ್ದೇನೆ. ನೀನು ಈಗ ಏಕಾಂತವಾದ ಸ್ಥಳದಲ್ಲಿ ಕುಳಿತುಕೊಂಡು ಭಗವಂತನ ಧ್ಯಾನವನ್ನು ಮಾಡು. ಹೀಗೆ ಧ್ಯಾನಮಾಡಿದರೆ ಈ ದುಶ್ಚಿಂತೆಯು ದೂರವಾಗುವುದೆಂದಳು.

ಆಗ ಆ ನರಪ್ರೇತವು ನಕ್ಕು, ಭಗವಂತನು ನನ್ನಮೇಲೆ ಸದಯನಾದರೆ ನಿನ್ನ ಮನಸ್ಸೂ ನನ್ನ ಮನಸ್ಸೂ ತಗುಲಿಬಿದ್ದಿತು. ಸುರಬಾಲೆ! ನೀನು ಸುಲಭವಾಗಿ ನನ್ನ ಆಸೆಯನ್ನು ನಿವಾರಣೆ ಮಾಡದೆಹೋದರೆ ನಾನು ಬಲಪೂರ್ವಕವಾಗಿ ನನ್ನ ಆಸೆಯನ್ನು ತೃಪ್ತಿಗೊಳಿಸುವೆನು. ಈಗ ಭಗವಂತನೇ ಸ್ವರ್ಗದಿಂದ ಇಳಿದುಬಂದು ನನ್ನನ್ನು ಈ ಕಾರ್ಯದಿಂದ ನಿರಸ್ತನಾಗೆಂದು ಹೇಳಿದರೂ ನಾನು ಕೇಳುವ ಹಾಗಿಲ್ಲ. ಈ ಪುಷ್ಕರಮಣಿಯರ ಪ್ರಯತ್ನದಿಂದ ಈಗ ಒದಗುವ ಸಮಯವನ್ನು ಎಂದಿಗೂ ಬಿಡಲಾರೆನೆಂದನು.

ಹೀಗೆಂದು ಹೇಳಿ ಆ ನರಪಶುವು ಸುರಬಾಲೆಯ ಹತ್ತಿರಕ್ಕೆ ಬಂದಿತು. ಸುರಬಾಲೆಯು ಭಯದಿಂದ ಬಾಗಿಲಿನ ಕಡೆ ಹೋಗುವುದನ್ನು ಕಂಡು ಅವನು ಓಡಿಬಂದು ಬಾಗಿಲನ್ನು ಹಾಕಿಕೊಂಡನು. ಅನಂತರ ಸುರಬಾಲೆ! ಪುನಃ

ಹೇಳುತ್ತೇನೇನೆಂದರೆ—ನೀನು ಮನಃಪೂರ್ವಕವಾಗಿ ಈ ನನ್ನ ಕಾಮಲೋಲುಪ ವಾದ ಹೃದಯವನ್ನು ಶೀತಲಮಾಡುವುದಕ್ಕೆ ಸಮ್ಮತಿಸದಿದ್ದರೆ, ಈ ನನ್ನ ಮತ್ತತೆ ಯನ್ನು ನೋಡಿ ನೀನು ದಯಾರ್ದ್ರಳಾಗದೆ ಹೋದರೆ, ನಾನು ಬಲಪೂರ್ವಕ ವಾಗಿ ನಿನ್ನನ್ನು ನನ್ನ ಆಯಕ್ತಾಧೀಳನ್ನಾಗಿ ಮಾಡಿಕೊಳ್ಳುವೆನು. ನನ್ನ ಮೈಯಲ್ಲಿ ಈಗ ಒಬ್ಬ ರಾಕ್ಷಸನ ಬಲವಿದೆ! ನನ್ನನ್ನು ನಿರಸ್ತನನ್ನಾಗಿ ಮಾಡುವುದಕ್ಕೆ ಯಾರಿಗೂ ಸಾಧ್ಯವಿಲ್ಲವೆಂದನು.

ಆಗ ಸುರಬಾಲೆಯು ರೋಷಕಷಾಯಿತ ಲೋಚನಳಾಗಿ, ಪಾಷಂಡ! ನರಾಧಮ! ನೀನು ತಿನ್ನುವುದಕ್ಕೆ ಗತಿಯಿಲ್ಲದವನಾಗಿದ್ದು ನಮ್ಮ ತಂದೆಯ ಅನ್ನ ದಿಂದ ಪಾಲಿತನಾಗಿ ನನ್ನ ಸ್ವಾಮಿಯ ಅಕೃತ್ರಿಮನಾದ ಸ್ನೇಹಿತನಹಾಗೆ ಪರಿಗಣಿ ತನಾಗಿ ಈ ದಿನ ಈ ಪರಿಯಾಗಿ ಆ ವಿಶ್ವಾಸವನ್ನು ದುರ್ವ್ಯವಹಾರ ಮಾಡು ತ್ತಿಯಾ? ಧರ್ಮ, ಲಜ್ಜೆ, ಕೃತಜ್ಞತೆ ಮುಂತಾದುದನ್ನೆಲ್ಲಾ ಈ ದಿನ ತ್ಯಜಿಸಿ ಕುಳಿ ತಿರುತ್ತಿ. ನನ್ನ ಸ್ವಾಮಿಯನ್ನು ಹೊರತು ನನಗೆ ಬೇರೆ ದೇವರಿಲ್ಲ. ನಾನು ನನ್ನ ಸ್ವಾಮಿಯನ್ನು ಬಿಟ್ಟು ಬೇರೆ ದೇವರನ್ನು ಪೂಜಿಸುವುದಿಲ್ಲ. ಆ ಸಾಕ್ಷಾತ್ ಸಜೀವ ವಾದ ದೇವರ ಚರಣಗಳಲ್ಲಿ ನನ್ನ ಮನಸ್ಸು ಅವಿಚಲಿತವಾಗಿದ್ದರೆ ನಿನ್ನಂತಹ ನೂರುನೂರು ನರಪ್ರೇತಗಳು ಒಟ್ಟಾಗಿ ಬಂದರೂ ನನ್ನನ್ನು ಕಲುಷಿತಳನ್ನಾಗಿ ಮಾಡಲಾರಿರಿ ಎಂದಳು.

ಆ ಪತಿಪ್ರೇಮಪರಾಯಣಳಾದ ಸುಂದರೀ ಶಿರೋಮಣಿಯು ಗೋಡೆಗೆ ಒರಗಿಕೊಂಡಿದ್ದಳು ಆಗನವಳ ಸೌಂದರ್ಯವನ್ನು ಕಂಡು ಆ ಪಾಷಂಡನು ಹೆಚ್ಚು ಮೋಹಿತನಾಗಿ, ಯಾರು ನಿನ್ನನ್ನು ಈಗ ರಕ್ಷಿಸುವರು? ನೋಡುತ್ತೇನೆಂದು ಹೇಳಿ, ಬಾಹುಗಳಿಂದ ಸುರಬಾಲೆಯನ್ನು ಹಿಡಿದುಕೊಳ್ಳುವುದಕ್ಕೆ ಬರುವುದನ್ನು ಕಂಡು, ಆ ಸತಿಯು ಪ್ರಾಯಃ ಸಂಜ್ಞಾಹೀನಳಹಾಗಾಗಿ ಕುಳಿತುಬಿಟ್ಟು, ಯಾರು ಎಲ್ಲಿದ್ದಾರೆ! ನನ್ನನ್ನು ರಕ್ಷಿಸುವರೆಂದು ಕೂಗಿದಳು

ಆಗ ಇದ್ದಕ್ಕಿದ್ದಹಾಗೆ ಒಂದದ್ಭುತವಾದ ಝಳತ್ಕಾರದಿಂದ ಕೊಟಡಿ ಯೆಲ್ಲಾ ಝಳಪಿಸಿದ ಹಾಗಾಯಿತು. ವಿಹಾರಿಯು ಚಮಕಿತನಾಗಿ ಅವನ ಹೃದಯವು ಝುಂಮನ ನಡುಗಿತು. ನೋಡುವಾಗ ಅವನಿದುರಿಗೆ ಆಗುಲ್ಫ ಲಂಬಿತಳಾದ ಪಾರ್ಥಿವರೂಪಸಂಪನ್ನಳಾದ ತ್ರಿಶೂಲಧಾರಿಣಿಯಾದ ಒಬ್ಬ ಸನ್ಯಾಸಿನಿಯು ಆರಕ್ತನಯನಳಾಗಿ ನಿಂತಿದ್ದಾಳೆ! ಈ ಅಭ್ಯಾಗತವಾದ

ಅಭ್ಯಂತರವನ್ನು ಕಂಡು ವಿಹಾರಿಯು ಅತ್ಯಂತವಿರಕ್ತನಾಗಿ, ಯಾರು ನೀನು ? ಏತಕ್ಕೆ ಇಲ್ಲಿಗೆ ಬಂದೆ ? ನಿನ್ನ ಮರಣವು ನನ್ನ ಕೈಯಲ್ಲಿರುವುದು. ನೋಡುವೆ ಎಂದನು.

ಇದುವರೆಗೂ ಸುರಬಾಲೆಯು ಬಿರುಗಣ್ಣು ಬಿಟ್ಟು ನೋಡುತ್ತಿದ್ದವಳು ಈ ಸ್ವರ್ಗಲೋಕದ ಸುಂದರಿಯನ್ನು ಕಂಡು, ನೀನು ನನ್ನ ಅಕ್ಕನಲ್ಲವೆ ! ಅಕ್ಕ ! ನನ್ನ ದೇಹವನ್ನು ಈ ನರಕದ ಕೀಟವು ಮುಟ್ಟದಹಾಗೆ ಮಾಡೆಂದು ಹೇಳಿದಳು.

ಆ ಸನ್ಯಾಸಿನಿಯು ಭಯವೇನು, ತಂಗಿ ! ಎಂದಳು.

ಈ ಮಧ್ಯದಲ್ಲಿ ವಿಹಾರಿಯು ಕೊಟಡಿಯಲ್ಲಿದ್ದ ಒಂದು ದೊಣ್ಣೆಯನ್ನು ತೆಗೆದುಕೊಂಡು ಒಂದು ಆ ಸನ್ಯಾಸಿನಿಯನ್ನು ಬಲವಾಗಿ ಹೊಡೆದನು. ಸನ್ಯಾಸಿನಿಯು ನಕ್ಕು ಎಲವೊ, ಭ್ರಾಂತ ! ನೀನು ಇನ್ನೂ ನಿನಗೆ ಬಲವಿದೆಯೆಂದು ತಿಳಿಸುವಹಾಗಿದೆಯಲ್ಲವೆ ? ನಿನ್ನ ದೇಹದಲ್ಲಿ ಎಷ್ಟು ಬಲವಿರುವುದೋ ನೋಡುತ್ತೇನೆಂದು ಹೇಳಿ, ಆ ಕುಸುಮ ಸುಕುಮಾರಿಯು ಎಡಗೈಯಿಂದ ವಿಹಾರಿಯ ಬಲಗೈಯನ್ನು ಬಲವಾಗಿ ಹಿಡಿದುಕೊಂಡಳು. ವಿಹಾರಿಯು ಕೈಯನ್ನು ಬಿಡಿಸಿಕೊಳ್ಳುವುದಕ್ಕೆ ಬಹಳ ಪ್ರಯತ್ನಪಟ್ಟನು ಆದರೆ ಕೃತಕಾರ್ಯನಾಗಲಿಲ್ಲ. ಆ ಕೃಶಾಂಗಿಯಾದ ಸುಂದರಿಯ ಶಕ್ತಿಯನ್ನು ಅನುಭವಮಾಡಿ ವಿಸ್ಮಿತನಾಗಿ ಅವಳನ್ನು ಏನಾದರೂ ಉಪಾಯಮಾಡಿ ಹೊಡೆದುಹಾಕಬೇಕೆಂದು ಯೋಚನೆಗೆ ಪ್ರಾರಂಭಿಸಿದನು.

ಸನ್ಯಾಸಿನಿ — ನಿನ್ನ ಪ್ರಯತ್ನಯಾವುದೂ ಜರಗದು. ನಿನ್ನನ್ನು ಜೀವಂತವಾಗಿ ನರಕಕ್ಕೆ ಹಾಕುವ ದಂಡನೆಯು ವಿಧಿಸಲ್ಪಡುವುದು.

ಅನಂತರ ಸುರಬಾಲೆಯ ಕಡೆಗೆ ತಿರುಗಿಕೊಂಡು, ಏಳು, ತಂಗಿ ! ಇನ್ನೇನೂ ಭಯವಿಲ್ಲವೆಂದಳು.

## ಎಂಟನೆಯ ಪರಿಚ್ಛೇದ.

ಆ ಪವಿತ್ರಪೂರ್ಣವಾದ ಶಾಂತಿನಿಕೇತನದ ಒಂದು ರಮ್ಯವಾದ ಕೊಟಡಿಯಲ್ಲಿ ಸುರಬಾಲೆಯೂ ಅವಳಿಬ್ಬರ ಮಕ್ಕಳೂ ಕುಳಿತಿದ್ದಾರೆ. ಆ ಕೊಟಡಿಯು ಕುಸುಮ ಮಾಲೆಯಿಂದ ಅಲಂಕರಿಸಲ್ಪಟ್ಟು ಗಂಧದ್ರವ್ಯಗಳ ಸುರಭಿ ರಾಶಿಯಿಂದ ಆಮೋದಿತವಾಗಿ ದೀಪಮಾಲೆಗಳಿಂದ ಉಜ್ವಲವಾಗಿದೆ. ಶಾಂತಿನಿಕೇತನದವಾಸಿಗಳಾದ ಪುಣ್ಯಶೀಲರಾದ ನಾರಿಯರು ಸುರಬಾಲೆಯ ಸುತ್ತಲೂ ಕುಳಿತುಕೊಂಡು ಬಹುವಿಧವಾದ ವಿಶ್ರಾಂತಾಲಾಪದಿಂದ ಅವಳನ್ನು ಸಂತೋಷಪಡಿಸುತಲಿದ್ದಾರೆ ಅಲ್ಲಿ ಅವಳಿಗೆ ಏನೂ ಅಭಾವವಾಗಿರಲಿಲ್ಲ. ಯಾವಕಾರಣದಿಂದಲೂ ಅಣುಮಾತ್ರವೂ ಅಸುಖಕ್ಕೆ ಮಾರ್ಗವಿಲ್ಲ. ಆ ಶಾಂತಿನಿಕೇತನದ ನಾರಿಯರು ಮಧುರಭಾವದಿಂದ ಅಪಾರ್ಥಿವವಾದ ಕೋಮಲತೆಯಿಂದ ಆಡುತಲಿದ್ದ ಮಾತುಕಥೆಗಳು ಸುರಬಾಲೆಯ ಹೃದಯವನ್ನು ಆರ್ದ್ರೀಭೂತವಾಗಿಯೂ ಪ್ರಶಾಂತವಾಗಿಯೂ ಮಾಡುತಲಿದ್ದುವು. ತಾನು ಎಲ್ಲಿಗೆ ಬಂದಿದ್ದೇನೆ! ಯಾರು ಏತಕ್ಕೋಸ್ಕರ ತನ್ನನ್ನು ಇಲ್ಲಿಗೆ ಕರೆತಂದಿದ್ದಾರೆ? ಎಂಬೀ ಚಿಂತೆಯಾಗಲಿ ಯೋಚನೆಯಾಗಲಿ ಅವಳ ಮನಸ್ಸಿಗೆ ಹೊಳೆಯಲಿಲ್ಲ. ಅವಳು ಮನಸ್ಸಿನಲ್ಲಿ, ಆವುದೋ ಪೂರ್ವಜನ್ಮಾರ್ಜಿತವಾದ ಪುಣ್ಯಬಲದಿಂದ ನಾರಿಯ ದೇಹವನ್ನು ಧಾರಣೆಮಾಡಿದ್ದಾಗ್ಗ್ಯೂ ಈ ದಿವ್ಯಲೋಕಕ್ಕೆ ಬಂದಿದ್ದೇನೆಂದೂ ತಾನು ಅಪಾರವಾದ ಸುಖದಲ್ಲಿ ಮುಳುಗಿದ್ದರೂ ಒಂದು ಅಭಾವವು ಮಾತ್ರ ಮಧ್ಯೆ ಮಧ್ಯೆ ತನ್ನ ಪ್ರಾಣವನ್ನು ವ್ಯಾಕುಲವಾಗಿ ಮಾಡುತಲಿತ್ತೆಂದೂ ತಿಳಿದುಕೊಂಡಿದ್ದಳು. ಆ ರಮಾಪತಿಯು ಎಲ್ಲಿ? ಸುರಬಾಲೆಯ ದೇವಸ್ವರೂಪನಾದ ಅನನ್ಯಉಪಾಸ್ಯನಾದ ಸರ್ವಗುಣಮಯನಾದ ಆ ಸ್ವಾಮಿಯು ಈಗ ಎಲ್ಲಿದ್ದಾನೆ? ಸುರಬಾಲೆಯು ಆ ಸುರಲೋಕದ ದೇವಿಗಳಹಾಗಿರುವ ಹೆಂಗಸರ ಸಂಸರ್ಗದಲ್ಲಿದ್ದುಕೊಂಡು ಅಲೌಕಿಕವಾದ ಸುಖವನ್ನು ಅನುಭವಿಸುತಲಿದ್ದರೂ ಆ ಗುಣಮಯನಾದ ಸ್ವಾಮಿಯ ಅಭಾವದಿಂದುಂಟಾದ ವ್ಯಾಕುಲದ ದಶೆಯಿಂದ ಮಧ್ಯೆ ಮಧ್ಯೆ ಆ ಹೆಂಗಸರನ್ನು ಅವನ ವಿಷಯವಾಗಿ ಪ್ರಶ್ನೆಯನ್ನು ಮಾಡುವಳು. ಅವರು ಅದಕ್ಕೆ ಪ್ರೀತಿಪ್ರದವಾದ ಸಮಾಧಾನ ವಾಕ್ಯಗಳನ್ನು ಹೇಳಿ ಸಂತೋಷಪಡಿಸುತಲಿದ್ದರು.

ರಾತ್ರಿ ಎರಡು ಪ್ರಹರವು ವಿಾರಿಹೋಗಿತ್ತು. ಆಗ ಆ ಶಾಂತಿನಿಕೇತನದ ಹೆಂಗಸೊಬ್ಬಳು ಸುರಬಾಲೆಯನ್ನು ಕುರಿತು, ನೀನು ಶ್ರಾಂತಳಾಗಿರುತ್ತಿ. ರಾತ್ರಿಯೂ ಬಹಳ ಹೋತ್ತಾಗಿದೆ. ಈಗ ವಿಶ್ರಮವನ್ನು ತೆಗದುಕೊ. ಇನ್ನೇನಾದರೂ ಬೇಕಾದರೆ ಹೇಳು, ಎಂದಳು.

ಸುರಬಾಲೆ—ಬಹಳ ಶ್ರಾಂತಳಾಗಿದ್ದೇನೆಂಬೋ ನಿಜ. ಆದರೆ ಈ ಸ್ವರ್ಗಧಾಮಕ್ಕೆ ಬಂದು ನನ್ನ ಕಷ್ಟವೆಲ್ಲಾ ನೀಗಿತು. ಆದರೂ ನನ್ನ ಚಿತ್ತವು ಅಸ್ಥಿರವಾಗಿದೆ, ನನ್ನ ಆ ಸರ್ವಗುಣಾಧಾರನಾದ ದೇವಸದೃಶನಾದ ಸ್ವಾಮಿಯು ಹತ್ತಿರ ಇಲ್ಲದಿದ್ದರೆ ಸ್ವರ್ಗವೂ ಕೂಡ ನನ್ನ ಕಣ್ಣಿಗೆ ಅಸಂಪೂರ್ಣವಾಗಿ ಕಾಣುತ್ತದೆ.

ಹೆಂಗಸು—ನಿನ್ನ ಸ್ವಾಮಿಯನ್ನು ನೋಡಿದರೆ ನಿನ್ನ ಮನಸ್ಸಿನ ಯಾತನೆಯು ಹೋಗುವುದೇನು ?

ಸುರಬಾಲೆಯು ವಿಷಾದದಿಂದ ಮಿಶ್ರಿತವಾದ ನಗುವುಳ್ಳವಳಾಗಿ, ದೇವಿ! ನೀವೆಲ್ಲಾ ನಿಜವಾಗಿಯೂ ಅಂತರ್ಯಾಮಿಗಳು. ನನ್ನ ಮನಸ್ಸಿನಲ್ಲಿರುವುದು ನಿಮಗೆಲ್ಲಾ ಅಗೋಚರವಾಗಿಲ್ಲ. ಇಹಸಂಸಾರದಲ್ಲಿ ಆ ಸ್ವಾಮಿಸ್ವರೂಪನಾದ ದೇವರ ಚರಣವೇ ನನಗೆ ಎಲ್ಲಾ ಸಾರವಾದ ಸಂಪತ್ತೆಂದು ನೀವು ತಿಳಿಯದಿರುವಿರಾ ? ಆ ದೇವರ ಸೇವೆ, ಆ ದೇವರ ವಿನೋದವೇ ನನ್ನ ಜೀವನದ ಏಕಮಾತ್ರ ವ್ರತವಾಗಿದೆ. ಆ ಗುಣಮಯನೇ ನನ್ನ ಏಕಮಾತ್ರ ಅಭೀಷ್ಟ ದೇವತೆ. ಆತನನ್ನು ನೋಡದಿದ್ದರೆ, ನನಗೆ ಮೃತ್ಯುವೇ ಅವಲಂಬನೀಯವಾದುದು. ನೀವೆಲ್ಲರೂ ಸಮಾಧಾನೋಕ್ತಿ ಹೇಳಿ ನಂಬುಗೆಯನ್ನು ಹುಟ್ಟಿಸದಿದ್ದರೆ, ಆತನನ್ನು ಕಾಣದೆ ಎಂದಿಗೂ ಇಷ್ಟು ದಿನ ಉಳಿದಿರುತ್ತಿರಲಿಲ್ಲ. ನೀವೆಲ್ಲರೂ ಸರ್ವಶಕ್ತಿಸಂಪನ್ನರು. ನೀವೆಲ್ಲರೂ ಕೃಪೆಗೈದು ನನ್ನ ಈ ಯಾತನೆಯನ್ನು ದೂರಮಾಡಲಾರಿರಾ ? ಎಂದಳು.

ಹೆಂಗಸು —ತಾಯಿ! ಬೇಕಾದರೆ ಈಗಲೇ ನಿನ್ನ ಸ್ವಾಮಿಯನ್ನು ನೋಡಬಹುದು.

ಹೀಗೆಂದು ಹೇಳಿ ಆ ಹೆಂಗಸು ಮತ್ತೊಬ್ಬ ಹೆಂಗಸನ್ನು ಕುರಿತು ಪಾರ್ಶ್ವದ ಬಾಗಿಲನ್ನು ತೆರೆಯುವಹಾಗೆ ಹೇಳಿದಳು. ಬಾಗಿಲು ತೆರೆಯಲ್ಪಟ್ಟಿತು ಸುರಬಾಲೆಯ ಇದುರಿಗೆ ಆ ದೇವಕಾಂತಿವಿಶಿಷ್ಟನಾದ ರಮಾಪತಿಯು ನಿಂತಿದ್ದಾನೆ! ಆಗ

ಸುರಬಾಲೆಯು ಓಡಿಹೋಗಿ ಆ ವಿಶಾಲೋರಸ್ಕನಾದ ಪುರುಷನ ವಕ್ಷದಲ್ಲಿ ಮಸ್ತಕವನ್ನಿಟ್ಟಳು. ಆಗ ಆ ಪುರುಷವರನು ಮುಂದಾಗಿ ಬಂದು ಎರಡು ಕೈಗಳಿಂದಲೂ ಆ ಸುರಸುಂದರಿಯನ್ನು ಆಲಿಂಗನಮಾಡಿಕೊಂಡನು. ಹೆಂಗಸರು ಈ ಅವಕಾಶದಲ್ಲಿ ಹೊರಟುಹೋದರು.

ಆಗ ಆ ಪ್ರೇಮಾಬದ್ಧರಾದ ದಂಪತಿಗಳಿಬ್ಬರೂ ಅಲ್ಲಿದ್ದ ಆಸನಗಳ ಮೇಲೆ ಕುಳಿತುಕೊಂಡರು. ರಮಾಪತಿಯು ಪ್ರೇಮದಿಂದ ಪುಳಕಿತವಾದ ಅಂತಃಕರಣದಿಂದ ಮಲಗಿದ್ದ ಮಕ್ಕಳಮೈಯನ್ನು ಕೈಯಿಂದ ಸವರಿ, ಸುರಬಾಲೆಯನ್ನು ಕುರಿತು ಎಷ್ಟೋ ಪ್ರಶ್ನೆಗಳನ್ನು ಮಾಡಿದನು. ಸುರಬಾಲೆಯೂ ಒಂದೊಂದು ಮಾತಿಗೆ ಪ್ರತ್ಯುತ್ತರವನ್ನು ಕೊಡುತ್ತ ಅದರೊಂದಿಗೆ ಅನೇಕಪ್ರಶ್ನೆಗಳನ್ನು ಕೇಳುವಳು. ತಳಂಪು ಇಲ್ಲದ ತಲೆಸಿಗುವ ಅಭ್ಯಾಸವುಳ್ಳ ನಮ್ಮ ಪಾಠಕಮಹಾಶಯರಲ್ಲಿ ಅನೇಕರಿಗೆ ಆ ತನ್ಮಜವಾದ ಪ್ರಶ್ನೋತ್ತರ ಪರಂಪರೆಯನ್ನು ತಿಳಿಯುವುದಕ್ಕೆ ಬಹಳ ಕುತೂಹಲವಿರುವಹಾಗಿದೆ. ಆದರೆ ಆ ದಂಪತಿಗಳ ಆ ಪ್ರಕಾರವಾದ ಪ್ರಶ್ನೋತ್ತರಗಳ ಪರಂಪರೆಯನ್ನು ಅನುಸರಿಸಬೇಕೆಂದರೆ, ಇಲ್ಲಿ ಸ್ಥಳವನ್ನು ಒದಗಿಸುವುದಕ್ಕೆ ನಮಗೆ ಬಹಳ ಕಷ್ಟವಾಗುತ್ತದೆ. ಆದುದರಿಂದ ಸಂಕ್ಷೇಪವಾಗಿ ಆ ಪ್ರಶ್ನೋತ್ತರಗಳ ಮರ್ಮವನ್ನು ಮಾತ್ರ ತಿಳಿಸುವೆವು.

ಮೊದಲು ನಾವು ಸುರಬಾಲೆಯ ಮಾತುಗಳನ್ನು ಹೇಳುವೆವು. ಅವಳೊಬ್ಬಳೇ ಕುಳಿತುಕೊಂಡು ಮಕ್ಕಳ ಆಟವನ್ನು ಹೇಗೆ ನೋಡುತಲಿದ್ದಳೋ, ವಿಹಾರಿಲಾಲನು ಅವರೊಂದಿಗೆ ಹೇಗ ಆಟವಾಡುತಲಿದ್ದನೋ, ಅನಂತರ ಅವನು ಹೇಗೆ ಉಪಾಯ ಮಾಡಿ ದಾಸಿಗಳನ್ನು ಮನೆಯಿಂದ ಕಳುಹಿಸಿಬಿಟ್ಟನೋ, ಅನಂತರ ಅವನು ಹೇಗೆ ಉಗ್ರವಾದ ಮೂರ್ತಿಯನ್ನು ಧಾರಣೆ ಮಾಡಿಕೊಂಡು ಅವಳ ಬಳಿಗೆ ಬಂದನೋ, ಅನಂತರ ಅವನು ಎಂತಹ ಕೆಟ್ಟಮಾತುಗಳನ್ನಾಡಿದನೋ, ಅನಂತರ ಹೇಗೆ ಅವನ ದಮೆಯನ್ನು ಬೇಡಿಕೊಂಡಳೋ, ಅನಂತರ ಅವನು ಹೇಗೆ ಭಯವನ್ನು ತೋರಿಸಿದನೋ ಅನಂತರ ಅವನು ಹೇಗೆ ಬಲಾತ್ಕಾರ ಮಾಡುವುದಕ್ಕೆ ಪ್ರಯತ್ನಪಟ್ಟನೋ, ಆಗ ಅವಳ ಅವಸ್ಥೆಯು ಹೇಗೆ ಇತ್ತೋ, ರಕ್ಷಣೆಗೋಸ್ಕರ ಉಪಾಯಾಂತರ ತೋರದೆ ಅವಳು ಹೇಗೆ ವ್ಯಾಕುಲವುಳ್ಳವಳಾದಳೋ, ಅವನು ಅವಳ ಅಂಗಸ್ಪರ್ಶ ಮಾಡಲುಪಕ್ರಮಿಸುತ್ತಲೇ ಅವಳು ಹೇಗೆ ಸಂಜ್ಞಾಹೀನಳಾಗಿ ಕುಳಿತುಕೊಂಡುಬಿಟ್ಟಳೋ, ಆಗ ಇದ್ದಕ್ಕಿದ್ದಹಾಗೆ

ಆ ಬಾಗಿಲು ಮುಚ್ಚಿದ್ದ ಕೊಟಡಿಯೊಳಗೆ ಸ್ವರ್ಗದಿಂದಲೇ ಇಳಿದುಬಂದಳೋ ಎಂಬಹಾಗೆ ಸನ್ಯಾಸಿನಿಯ ವೇಷದಲ್ಲಿ ಅವಳ ಸವತಿಯಾದ ಅಕ್ಕನು ಹೇಗೆ ಕಾಣಿಸಿಕೊಂಡಳೋ, ಆ ದಯಾಮಯಿಯಾದವಳಿಗೆ ವಿಹಾರಿಯು ದೊಣ್ಣೆಯಿಂದ ಹೇಗೆ ಹೊಡೆದನೋ, ಅವಳು ಅವನ ಕೈಯನ್ನು ಹೇಗೆ ಎಷ್ಟು ಬಲವಾಗಿ ಹಿಡಿದಳೋ, ಇವೇ ಮುಂತಾದ ವೃತ್ತಾಂತವನ್ನು ವರ್ಣನೆ ಮಾಡಿದಳು.

ಈ ವ್ಯಾಪಾರವೆಲ್ಲಾ ಆದಮೇಲೆ ವಿಹಾರಿಯ ಈ ಪರಿಯಾದ ದುರ್ವ್ಯವಹಾರದಿಂದುಂಟಾದ ದಾರುಣವಾದ ಮನಸ್ಸಿನ ತಾಪದಿಂದಲೂ ವಿಜಾತಿಯಾದ ಉತ್ಕಂಠವಾದ ಭಾವದಿಂದಲೂ ಅವಳಿಗೆ ಎಚ್ಚರಹೋಯಿತು. ಅವಳು ಮೂರ್ಛಿತಳಾದಮೇಲೆ, ತನಗೆ ಏನಾಯಿತೋ ಅದು ಅವಳಿಗೆ ತಿಳಿಯದು. ಆ ಎಚ್ಚರ ತಪ್ಪಿ ಹೋಗಿ ಬಿದ್ದಿದ್ದುದು, ಎಷ್ಟುಹೊತ್ತೋ, ಅದೂ ತಿಳಿಯದು ಮಧ್ಯೆ ಒಂದು ದಿನವೋ, ಎರಡು ದಿನವೋ, ಐದುದಿನವೋ ಎಷ್ಟು ದಿನಗಳಾಗಿತ್ತೋ ಅದವಳು ಅರಿಯಳು. ಪುನಃ ಚೆನ್ನಾಗಿ ಜ್ಞಾನಬಂದಾಗ ತಾನೂ ತನ್ನ ಮಕ್ಕಳೂ ಈ ಸ್ವರ್ಗಧಾಮದಲ್ಲಿರುವುದು ಗೊತ್ತಾಯಿತು. ತಾನು ಹೇಗೆ ಇಲ್ಲಿಗೆ ಬಂದಳೋ, ತನ್ನ ಮಕ್ಕಳನ್ನು ಸಂಗಡ ಯಾರು ಕರೆತಂದರೋ, ವಿಹಾರಿಯು ಏನಾದನೋ ಅದಾವುದೂ ಅವಳರಿಯಳು. ಅದನ್ನು ಕುರಿತು ಏನೂ ಹೇಳಲಾರದವಳಾದಳು.

ಈ ಸ್ಥಳವು ಎಲ್ಲಿದೆ?—ಇದು ಭೂಮಿಯ ಮೇಲೆ ಇರತಕ್ಕಸ್ಥಳವೋ, ಅಥವಾ ಸ್ವರ್ಗರಾಜ್ಯವೋ, ಅದು ಅವಳಿಗೆ ಇನ್ನೂ ಸ್ಥಿರವಾಗಲಿಲ್ಲ ಇಲ್ಲಿ ವಾಸವಾಗಿರುವ ದೇವಿಯರ ಆಕೃತಿ, ಉಡುಪು, ವ್ಯವಹಾರಾದಿಗಳನ್ನು ಆಲೋಚಿಸಿ ನೋಡಿದರೆ ಇದು ಸ್ವರ್ಗ ಹೊರತು ಬೇರೆ ಸ್ಥಳವೆಂದು ಬೋಧೆಯಾಗುತ್ತಿರಲಿಲ್ಲ.

ಅನಂತರ, ರಮಾಪತಿಯ ಮಾತು—ರಮಾಪತಿಯು ಸಾಯಂಕಾಲ ಮನೆಗೆ ಹಿಂದಿರುಗಿ ಬಂದುನೋಡಲಾಗಿ ಮನೆಯು ಬರಿದಾಗಿದ್ದಿತು, ಸುರಬಾಲೆಯಿಲ್ಲ. ಮಗುವಿಲ್ಲ. ಮಾಧುರಿಯೂ ಇಲ್ಲ ವಿಹಾರಿಯೂ ಇಲ್ಲ. ಅಡಿಗೆಯವನು ದಾಸಿಯರಿಬ್ಬರು ತಲೆಬಗ್ಗಿದವರಾಗಿ ತಲೆಯಮೇಲೆ ಕೈಯಿಟ್ಟುಕೊಂಡು ಕುಳಿತಿದ್ದರು. ಅವರು ಬೇರೆ ಮತ್ತಾವ ಸಮಾಚಾರವನ್ನೂ ಹೇಳಬಲ್ಲವರಾಗಿರಲಿಲ್ಲ. ಅವರು ಕಂಡುದುದಾಗಿ ಹೇಳಿದರೇನೆಂದರೆ—ಯಜಮಾನಿಯು ಆಲಸ್ಯವಾಗಿದ್ದಳು,

ಒಬ್ಬ ಸನ್ಯಾಸಿನಿಯು ಅವಳ ಪಾರ್ಶ್ವದಲ್ಲಿದ್ದಳು. ವಿಹಾರಿಬಾಬು ಕಾಲಿಗೆ ಕೈಗೆ ಕೋಳಹಾಕಿಕೊಂಡು ಏಳಲಾರದೆ ಬಿದ್ದಿದ್ದನು. ಅನಂತರ, ಅವರಲ್ಲಿ ಒಬ್ಬಳು, ಆ ಸನ್ಯಾಸಿನಿಯ ಅಪ್ಪಣೆಯಪ್ರಕಾರ ನೀರು ಕಾಯಿಸುವುದಕ್ಕೆ ಹೋದಳು. ಮತ್ತೊಬ್ಬಳ ನದಿಯಿಂದ ನೀರುತರುವುದಕ್ಕೆ ಹೋದಳು. ಪರಿಚಾರಕನು ಅಂಗಡಿಯಿಂದ ಸಾಂಬ್ರಾಣಿಯನ್ನು ತರುವುದಕ್ಕೆ ಹೋದನು. ಅವರು ಮೂವ್ವರೂ ಹಿಂದಿರುಗಿ ಒಂದು ನೋಡಲಾಗಿ ಮನೆಯಲ್ಲಿ ಯಾರೂ ಇರಲಿಲ್ಲ ಯಜಮಾನಿಯಾಗಲಿ ಮಕ್ಕಳಾಗಲಿ ವಿಹಾರಿಯಾಗಲಿ ಯಾರೂ ಇರಲಿಲ್ಲ. ಸನ್ಯಾಸಿನಿಯೂ ಇರಲಿಲ್ಲ. ಅವರು ದಾರುಣವಾದ ಉದ್ವೇಗದಿಂದ ಹಗಲೆಲ್ಲಾ ಆ ಅಪರಿಚಿತವಾದ ಸ್ಥಳದಲ್ಲಿ ಸುತ್ತುಮುತ್ತಲೂ ಹುಡುಕಿ ನೋಡಿದರು, ಆದರೆ ಪ್ರಯೋಜನವಿಲ್ಲ. ಕಡೆಗೆ ಬಂದು ಅನ್ನವಿಲ್ಲದೆ ಕಾತರರಾಗಿ ಮೃತಕಲ್ಪರಾದ ಅವಸ್ಥೆಯಲ್ಲಿ ಬಿದ್ದಿದ್ದರು. ಅವರಿಂದ ಇಷ್ಟು ಗೊತ್ತಾಗಿ ರಮಾಪತಿಯು ವ್ಯಾಕುಲನಾಗಿ ಒಬ್ಬನೇ ಮನೆಬಿಟ್ಟು ಹೊರಟನು. ಎಲ್ಲಿಗೆ ಹೋಗಬೇಕೋ ಏನುಮಾಡಬೇಕೋ ಏನೂ ಯೋಚಿಸದೆ ಹುಚ್ಚನಹಾಗೆ ಒಂದು ದಿಕ್ಕಿನಲ್ಲಿ ಓಡಿಹೋದನು. ಹಿಂದೆ ದ್ವಾರಪಾಲಕರು ಬೆನ್ನಟ್ಟಿದರು. ವಿರಕ್ತನಾಗಿ ಅವರನ್ನು ಹಿಂದಕ್ಕೆ ಅಟ್ಟಿಬಿಟ್ಟನು, ಅವರು ಹೊರಟು ಹೋದರು. ಅವನು ಮೊದಲು ದಾಮೋದರಕ್ಕೆ ಹೋಗಿ ಕ್ರಮವಾಗಿ ಅಡವಿಯ ಮಾರ್ಗವನ್ನು ಹಿಡಿದು ಹೋಗುತ್ತ ತಡಬಡವೆಂಬ ಒಂದು ಚಿಕ್ಕಹಳ್ಳಿಯ ಬಳಿಗೆ ಬಂದನು. ಅಲ್ಲಿ ಅತಿಶಯವಾದ ಆಯಾಸದಿಂದಲೂ ಮನಸ್ಸಿನ ವ್ಯಥೆಯಿಂದಲೂ ಶಕ್ತಿ ಉಡುಗಿಹೋಗಿ ಕ್ರಮವಾಗಿ ಚೇತನಹೋದವನಾದನು ಅನಂತರ ಏನಾಯಿತೋ ಅದು ಅವನಿಗೆ ತಿಳಿಯದು, ಅವನಿಗೆ ಚೈತನ್ಯ ಉಂಟಾದಾಗ ಈ ಅಪರಿಚಿತವಾದ ಸ್ಥಳದಲ್ಲಿ ಭೂಲೋಕದಲ್ಲಿ ದುರ್ಲಭವಾದ ಬಹುತರ ಜ್ಯೋತಿರ್ಮಯವಾದ ಮೂರ್ತಿಗಳು ಅವನನ್ನು ಸುತ್ತಿಕೊಂಡಿದ್ದರು ಚೇತನ ಬರುತಲೇ ಸುರಬಾಲೆ! ಸುರಬಾಲೆ! ಎಂದು ಕೂಗಿಕೊಂಡಿದ್ದರಮೇಲೆ ಅವರು ಅವನನ್ನು ಈ ಕೊಟಡಿಗೆ ಕರೆತಂದು ಬಿಟ್ಟರು ಎಂದು ಹೇಳಿದನು.

ಈ ಸಮಯದಲ್ಲಿ ಕೊಟಡಿಯಲ್ಲಿ ನೋಡಲಾಗಿ ಯಾರೂ ಇರಲಿಲ್ಲ. ಸುರಬಾಲೆಯು, ಆಹಾ! ಆ ದೇವಿಯರು ಎಲ್ಲಿಹೋದರು ? ನೀನು ಅವರನ್ನು

ನೋಡಿಲ್ಲ! ಪ್ರಾಣೇಶ್ವರ! ನಾವು ನಿಜವಾಗಿಯೂ ಸ್ವರ್ಗದಲ್ಲಿಯೇ ಇದ್ದೇವೆಯೆ? ಎಂದಳು.

ರಮಾಪತಿ—ನಾನು ಇಲ್ಲಿಗೆ ಬಂದಮೇಲೆ ಅನೇಕ ದೇವದೇವಿಯರನ್ನು ನೋಡಿದೆನು. ಇದು ಸ್ವರ್ಗವೆಂತಲೇ ನನ್ನ ಬುದ್ಧಿಗೂ ತೋರುತ್ತದೆ. ಇದೇನಾದರೂ ಆ ಸುಕುಮಾರಿಯ ಲೀಲಾಸ್ಥಳವಾಗಿರುವುದೇನು!

ಅವರಿಬ್ಬರೂ ಅಚ್ಚರಿಯಿಂದ ಈ ಪರಿಯಾಗಿ ಆಲೋಚಿಸುತ್ತ ಅಪಾರವಾದ ಆನಂದದಲ್ಲಿ ಮುಣುಗಿದ್ದಾಗ ಒಬ್ಬ ಕೃಷ್ಣಾಂಗಿಯಾದ ಜ್ಯೋತಿರ್ಮಯಿಾಮೂರ್ತಿ ವಿವಿಧವಾದ ಆಹಾರ್ಯ ಪದಾರ್ಥಗಳನ್ನು ಒಂದು ಬಂಗಾರದ ತಟ್ಟೆಯತುಂಬ ಇಟ್ಟುಕೊಂಡು ಬಂದಳು. ಅವಳು ನೆಲದಮೇಲೆ ಹಜ್ಜೆಯನ್ನಿಡುವಾಗ ಭೂದೇವಿಯು ಎಲ್ಲಿ ಪೀಡಿತಳಾಗುವುಳೋ ಎಂಬ ಭಯದಿಂದ ಬಹಳ ಹಗುರವಾಗಿ ಪಾದವಿಕ್ಷೇಪಮಾಡುತ್ತ ಬಂದಳು. ಅವಳನ್ನು ನೋಡುತ್ತಲೇ ದಂಪತಿಗಳಿಬ್ಬರೂ ಸಂಭ್ರಮದಿಂದೆದ್ದು ನಿಂತುಕೊಂಡರು. ಅವಳು, ನೀವು ಬಹಳ ಶ್ರಮಪಟ್ಟು ಇರುತ್ತೀರಿ. ಈಗ ಸ್ವಲ್ಪ ಆಹಾರಮಾಡಿ ವಿಶ್ರಾಮವನ್ನು ತೆಗೆದುಕೊಳ್ಳಿರಿ ಎಂದಳು.

ರಮಾಪತಿಯು ವಿನಯದಿಂದ, ನಾವು ನಮ್ಮ ಪುಣ್ಯವಿಶೇಷದಿಂದ ಅಮರಲೋಕಕ್ಕೆ ಬಂದಿದ್ದೇವೆ. ಇಲ್ಲಿ ನಮಗೆ ಇನ್ನು ಕ್ಷುಧೆತೃಷ್ಣಾದಿಗಳಿಲ್ಲ. ಇಲ್ಲಿನ ಅಧಿಷ್ಠಾತ್ರಿಗಳು ನೀವೆ? ಎಂದು ಕೇಳಿದನು.

ಆ ದೇವಿಯು ಮಧುರವಾದ ಹಾಸ್ಯದಿಂದ, ಇಲ್ಲ, ಇಲ್ಲ, ಶಾಂತಿದೇವಿಯು ಈ ಪುಣ್ಯನಿಕೇತನಕ್ಕೆ ಅಧಿಷ್ಠಾತ್ರಿ—ಈ ಪಾಪೀಯಸಿಯಾದ ನಾನು ಆಕೆಯ ದಾಸಿಯೆಂದಳು. ಎಂತಹ ಕಂಠ! ಎಂತಹ ಮಧುರವಾದ ಮಾತು!

ರಮಾಪತಿ—ಆದರೆ ತಾವು ಯಾರು?

ದೇವಿ—ಸುರಮಾ.

# ಒಂಭತ್ತನೆಯ ಪರಿಚ್ಛೇದ.

ನಾವು ಇದುವರೆಗೂ ಒಂದೊಂದಾಗಿ ಶಾಂತಿನಿಕೇತನದ ದೇವಮಂದಿರ, ಯೋಗಮಠ, ಪುಷ್ಪವಾಟಿಕಾ, ಕಾರಾಗಾರ ಮುಂತಾದ ಅನೇಕ ಸ್ಥಳಗಳನ್ನು ನೋಡಿದೆವು. ಆದರೆ ಅಲ್ಲಿನ ಎಲ್ಲಾ ಪ್ರದೇಶಗಳೂ ನಮ್ಮ ದೃಷ್ಟಿಗೆ ವಿಷಯವಾಗಿಲ್ಲ. ಈ ವಿಶಾಲವಾದ ಪುರಿಯ ಒಂದು ಸ್ವತಂತ್ರವಾದ ಭಾಗಕ್ಕೆ ಶಾಸನಪುರಿಯೆಂದು ಹೆಸರು. ಅಲ್ಲಿ ನಡೆಯುವ ವ್ಯಾಪಾರಗಳನ್ನು ಆಲೋಚಿಸಿ ನೋಡಿದರೆ ಆಸ್ಥಳಕ್ಕೆ ನರಕವೆಂದು ಹೇಳಿದರೂ ಅತ್ಯುಕ್ತಿಯಾಗಲಾರದು. ಈ ಶಾಸನಪುರಿಗೂ ಶಾಂತಿನಿಕೇತನಕ್ಕೂ ನಾನಾವಿಧವಾದ ಉಪಾಯಗಳ ದ್ವಾರಾ ಸಂಬಂಧಾತ್ ಸಂಬಂಧವುಂಟು. ಆ ಸಂಬಂಧವು ಬಹಳ ಕೌಶಲದಿಂದ ಏರ್ಪಟ್ಟಿದ್ದುದರಿಂದ ಸಾಧಾರಣವಾಗಿ ಅದನ್ನು ನಿರ್ಣಯ ಮಾಡುವುದು ಕಷ್ಟ. ಆ ಶಾಸನಪುರಿಯು ಶಾಂತಿನಿಕೇತನದಿಂದ ಬಹಳ ದೂರವಿದ್ದರೂ ಅಲ್ಲಲ್ಲಿಗೆ ಯಾರೂ ಕಾಣದೆ ತಿರುಗಾಡುವುದಕ್ಕೆ ನಾನಾ ಮಾರ್ಗಗಳಿರುವುದಲ್ಲದೆ ಅಲ್ಲಿ ಕಾರ್ಯಗಳನ್ನೆಲ್ಲಾ ಮೇಲುವಿಚಾರಣೆ ಮಾಡುವುದಕ್ಕೆ ಅನೇಕ ವ್ಯವಸ್ಥೆಗಳು ಏರ್ಪಟ್ಟಿದ್ದುವು.

ಈ ಶಾಸನಪುರಿಯು ಕಪ್ಪುಶಿಲೆಯಿಂದ ಕಟ್ಟಲ್ಪಟ್ಟು ಭೂಗರ್ಭಾಂತರಗತವಾಗಿ ಬಹಳ ದೊಡ್ಡದಾದ ಭವನವಾಗಿದ್ದಿತು ಅದು ಯಾವಾಗಲೂ ಘನಾಂಧಕಾರಮಯವಾಗಿದ್ದರೂ ಆವಶ್ಯಕಬಿದ್ದಾಗ ಅದರೊಳಕ್ಕೆ ಬೆಳಕನ್ನು ಬಿಡುವುದಕ್ಕೆ ಉಪಾಯವು ಏರ್ಪಾಡಾಗಿದ್ದಿತು. ಆ ಪುರಿಯು ಬಹುದೂರ ವ್ಯಾಪಿಸಿಕೊಂಡಿದ್ದಿತು. ಒಂದು ಭಾಗದಲ್ಲಿ ನಡೆಯುವುದು ಮತ್ತೊಂದು ಭಾಗದಲ್ಲಿ ಪ್ರಚಾರವಾಗದು. ಆ ಪುರಿಯಲ್ಲಿ ನಾನಾ ಸ್ಥಳಗಳಲ್ಲಿ ನಾನಾವಿಧವಾದ ದಂಡಪ್ರಯೋಗೋಪಯೋಗಿಯಾದ ಸಾಮಗ್ರಿ ಸನ್ನಾಹಗಳು ಸಿದ್ಧಪಡಿಸಲ್ಪಟ್ಟಿದ್ದುವು

ಆ ನಿಬಿಡವಾದ ಅಂಧಕಾರಮಯವಾದ ಪುರಿಯ ಒಂದು ಕೊಟಡಿಯಲ್ಲಿ ಶೃಂಖಲಾಬದ್ಧನಾದ ಒಬ್ಬ ಪುರುಷನು ಅಧೋವದನನಾಗಿ ನೆಲದಮೇಲೆ ಮಲಗಿದ್ದನು. ಅವನ ಕುತ್ತಿಗೆಗೂ ರಟ್ಟೆಗಳಿಗೂ ಕಾಲುಗಳಿಗೂ ಸೊಂಟಕ್ಕೂ ಕಬ್ಬಿಣದ ಸಂಕೋಲೆಗಳನ್ನು ಹಾಕಿ ಬಿಗಿದಿದ್ದಿತು. ಅವನು ಸಂಕೋಲೆಗಳನ್ನು ಮುರಿದು

ಅದರಿಂದ ಬಿಡುಗಡೆಯಾಗುವುದಕ್ಕೆ ವಿಫಲವಾದ ಪ್ರಯತ್ನಗಳನ್ನು ಜರುಗಿಸುತಲಿದ್ದನು. ಕಡೆಗೆ ಹತಾಶನಾಗಿ ದಣಿದು ಸೋತುಹೋಗಿ ಬಿದ್ದಿದ್ದನು. ಬಹಳ ಹೊತ್ತು ಹೀಗೆ ಮೃತಪ್ರಾಯನಾಗಿ ಬಿದ್ದಿದ್ದು ಅನಂತರ ಒಂದು ಕಡೆ ಮಗ್ಗುಲಾಗುವುದಕ್ಕೆ ಪ್ರಯಾಸಪಟ್ಟನು. ಆದರೆ ದೇಹವನ್ನು ಸ್ವಲ್ಪವಾದರೂ ಅಲುಗಾಡಿಸಿ ಸ್ಥಾನಾಂತರ ಮಾಡುವುದಕ್ಕೆ ಸಾಧ್ಯವಾಗಲಿಲ್ಲ ಆಗವನು ಅತ್ಯಂತ ಕಾತರವಾದ ಸ್ವರದಿಂದ ಅಮ್ಮ ! ಈ ಯಾತನೆಯನ್ನು ಸಹಿಸಲಾರೆನು. ಇದಕ್ಕಿಂತಲೂ ಮರಣವೇ ಮೇಲೆಂದಂದು ಕೊಂಡನು

ಆಗ ಇದ್ದಕ್ಕಿದ್ದಹಾಗೆ ಆ ವಿಶಾಲವಾದ ಪುರಿಯನ್ನು ಕಂಪಿತಮಾಡುವ ಹಾಗೆ ಒಂದು ವಜ್ರಗಂಭೀರವಾದ ಸ್ವರದಿಂದ ಎಲೆ ನರಾಧಮ ! ಈಗ ನಿನ್ನ ದುಷ್ಕೃತಿಯನ್ನು ಕುರಿತು ಅನುತಾಪ ಪಡುವುದಕ್ಕೆ ಸಿದ್ಧವಾಗಿರುತ್ತೀಯಾ ? ಅನಂತರ ನಿನ್ನ ಮನಸ್ಸನ್ನು ಧರ್ಮಮಾರ್ಗದಲ್ಲಿಟ್ಟುಕೊಂಡಿರುವುದಕ್ಕೆ ಸಮ್ಮತನಾಗಿರುವಿಯಾ ? ಎಂದು ಪ್ರಶ್ನೆಯು ಕೇಳಿಸಿತು.

ಈ ಅತ್ಯುತ್ಕಟವಾದ ಭೈರವಧ್ವನಿಯು ಯಾರದು ? ಮನುಷ್ಯಕಂಠದಿಂದ ಇಂತಹ ಶಬ್ದವು ಹೊರಡುವ ಸಂಭವವಿಲ್ಲ ಆಗ ಆ ಮಲಗಿದ್ದವನು, ಈ ದೇಹ ವಿರುವವರೆಗೂ ನಾನು ಸುರಬಾಲೆಯನ್ನು ಹೊಂದುವ ಆಶೆಯನ್ನು ಬಿಡಲಾರೆನು. ನೀನು ನನಗೆ ಯಾತನೆಯನ್ನು ಕೊಡುವವನಾಗಿರುತ್ತಿ. ನೀನು ಆ ಅಕ್ಕೆಯಳ ದೇವರೇ ಆಗಲಿ, ಮಾನವನೇ ಆಗಲಿ, ಪ್ರೇತವೇ ಆಗಲಿ ಏತಕ್ಕೆ ನೀನು ಇಂತಹ ಪ್ರಶ್ನೆಯನ್ನು ಪದೇಪದೆ ಕೇಳುತ್ತ ನನ್ನನ್ನು ಬೇಸರಗೊಳಿಸುತ್ತಿ ? ನಾನು ಮಿಕ್ಕ ಎಲ್ಲಾ ವಿಷಯಗಳಲ್ಲಿಯೂ ಧರ್ಮಮಾರ್ಗದಲ್ಲಿರುವುದಕ್ಕೊಪ್ಪುವೆನು. ಆದರೆ ಆ ಅಮರ್ದುಣಿವೆಣ್ಣಿನ ಮೇಲಿನ ಆಶೆಯನ್ನು ತೊಲಗಿಸಲು ನನಗೆ ಸಾಧ್ಯವಿಲ್ಲ. ನಾನು ಆಜೀವನವೂ ಜ್ಞಾನದಿಂದಾಗಲಿ ಅಜ್ಞಾನದಿಂದಾಗಲಿ ಮಾಡಿರುವ ದುಷ್ಕರ್ಮಗಳಿಗೋಸ್ಕರ ಚಿರಕಾಲ ಅನುತಾಪ ಪಡುವುದಕ್ಕೋಸ್ಕರ ಸಮ್ಮತನಾಗಿದ್ದೇನೆ. ಆದರೆ ಸುರಬಾಲೆಯ ಮೇಲಿನ ಲೋಭಕ್ಕೋಸ್ಕರ ನಾನು ಮಾಡಿರುವ ಕಾರ್ಯವು ಎಂದಿಗೂ ದುಷ್ಕರ್ಮವೆಂದು ತಿಳಿಯಲಾರೆನು. ಅವಳ ಲಾಭಕ್ಕೋಸ್ಕರ ಇದಕ್ಕಿಂತಲೂ ಗುರುತರವಾದ ದುಷ್ಕರ್ಮಗಳನ್ನು ಮಹಾನಂದದಿಂದ ಮಾಡಲು ಸಿದ್ಧವಾಗಿದ್ದೇನೆಂದು ಹೇಳಿದನು.

ಅದೇ ಮೊದಲಿನ ಗಂಭೀರವಾದ ಶಬ್ದವು ಪುನಃ ಹೇಳಿತು :—ಎಲೊ ! ಕೃತಘ್ನನಾದ ದುರ್ವೃತ್ತ ವಿಹಾರಿ ! ಈಗಲೂ ನೀನು ಜಾಗರೂಕನಾಗದಿದ್ದರೆ ನಿನಗೆ ಪ್ರಾಣದಂಡನೆಯಾಗುವುದೆಂದು ಹೇಳಿದಹಾಗಾಯಿತು.

ವಿಹಾರಿ—ಪ್ರಾಣದಂಡನೆಯೆ ! ನೀನು ಯಾರೇ ಆಗಲಿ ನನಗೆ ಪರಮ ಮಿತ್ರನೇ ಹೌದು. ನಾನು ಸುರಬಾಲೆಯನ್ನು ಹೊಂದದೆ ಹೋಗುವೆನಾದರೆ, ಪ್ರಾಣದಂಡನೆಯೇ ನನಗೆ ಪ್ರಾರ್ಥನೀಯವಾದುದು. ಮತ್ತು ತಕ್ಕ ದಂಡನೆಯಾಗಿರುವುದು. ಮತ್ತು ಒಂದು ದಿನವಾದರೂ ಸುರಬಾಲೆಯನ್ನು ಹೊಂದುವೆನಾದರೆ ಯಾವಜ್ಜೀವವೂ ಈ ಯಾತನೆಯನ್ನನುಭವಿಸುವುದಕ್ಕೂ ಇಷ್ಟವುಳ್ಳವನಾಗಿದ್ದೇನೆ.

ಪುನಃ ಆ ಅತ್ಯುತ್ಕಟವಾದ ಸ್ವರದಲ್ಲಿ ಉತ್ತರವು ಹೊರಟಿತು:—

" ಈಗಲೂ ನಿನ್ನಂತಹ ನರಾಧಮನಿಗೆ ಪ್ರಾಣದಂಡನೆಯನ್ನು ವಿಧಿಸಿದರೆ ನಿನ್ನ ಮೇಲೆ ಕರುಣೆಯನ್ನೇ ತೋರಿಸಿದಹಾಗಾಗುವುದು. ಈತಡವೆ ನಿನಗೋಸ್ಕರ ವ್ಯವಸ್ಥೆಯಾಗುವ ದಂಡನೆಯನ್ನು ಯಾರೂ ಸಹಿಸಲಾರರು " ಎಂದು.

ವಿಹಾರಿ—ಕೊಡು—ಯಾವದಂಡನೆಯು ಇಷ್ಟವೋ ಅದನ್ನು ವಿಧಿಸು. ಪ್ರಾಣವುಳಿದರೆ ಈಗ ಇಲ್ಲದಿದ್ದರೂ ಯಾವಾಗಲಾದರೂ ಒಂದುಕಾಲದಲ್ಲಿ ಸುರಬಾಲೆಯನ್ನು ಹೊಂದುವೆನೆಂಬ ಆಶೆಯಿಂದ ಯಾವದಂಡನೆಯನ್ನಾದರೂ ಸಹಿಸಲಾಪೆನು.

ಆಗ ಒಂದು ವಿಕಟವಾದ ಶಬ್ದದಿಂದ ಅಪ್ಪಣೆ ಆಯಿತೇನೆಂದರೆ:—

" ದೂತರುಗಳಿರಾ ! ಈ ನರಾಧಮನನ್ನು ಅಗ್ನಿ ಕುಂಡದಲ್ಲಿ ಹಾಕಿರಿ " ಎಂದು.

ತತ್‌ಕ್ಷಣದಲ್ಲಿ ಕೃಷ್ಣಕಾಯರಾದ ವಿಕಟಮೂರ್ತಿಯುಳ್ಳ ಆರುಮಂದಿ ಗಂಡಸರು ಬಂದು ನಿಂತರು. ಅವರು ಬಾದುದು ನೋಡಿದರೆ ಭೂಮಿಯನ್ನು ಭೇದಿಸಿಕೊಂಡು ಬಂದರೋ ಅಥವಾ ಗೋಡೆಯನ್ನು ಸೀಳಿಕೊಂಡು ಬಂದರೋ ಎಂಬಹಾಗೆ ಕಂಡಿತು. ಹೇಗೆಯೇ ಆಗಲಿ, ಅವರು ಬಂದು ವಿಹಾರಿಗೆ ತೊಡಿಸಿದ್ದ ಸಂಕೋಲೆಗಳ ಒಂದು ತುದಿಯನ್ನು ಬಿಚ್ಚಿದರು. ವಿಹಾರಿಯು ತಪ್ಪಿಸಿಕೊಂಡು ಹೋಗಲು ಪ್ರಯತ್ನಪಟ್ಟನು. ಆಗವರಲ್ಲೊಬ್ಬನು ಅವನನ್ನು ವಜ್ರಮುಷ್ಟಿಯಿಂದ ಹಿಡಿಯಲಾಗಿ ವಿಹಾರಿಯು ಇಂತಹ ದೈತ್ಯರಕೈಯಿಂದ ನಿಷ್ಕೃತಿಯಿಲ್ಲವೆಂದು ನಿಶ್ಚಿತವಾಗಿ ತಿಳಿದುಕೊಂಡನು.

ಅನಂತರದಲ್ಲಿ ದೂತರು ಶೃಂಖಲಾಬದ್ಧನಾದ ವಿಹಾರಿಯನ್ನು ಹಿಡಿದು ಕೊಂಡು ಹೋದರು. ಬಹುದೂರ ಹೋಗೋಗುತ್ತ ಕ್ರಮವಾಗಿ ಉತ್ತಪ್ತವಾದ ವಾಯುವು ವಿಹಾರಿಯ ಅಂಗಸ್ಪರ್ಶಮಾಡಲಾರಂಭವಾಯಿತು. ಕ್ರಮವಾಗಿ ಆ ಉತ್ತಾಪವು ಉಗ್ರತರವಾಗುತ ಬಂದಿತು. ಆಗ ದೂತರು ಪಾರ್ಶ್ವದಲ್ಲಿದ್ದ ಒಂದು ಕೊಟಡಿಯ ಬಾಗಿಲನ್ನು ತೆರೆದರು. ಅಲ್ಲಿನ ಗಾಳಿಯು ಅತಿಶಯವಾಗಿ ಉತ್ತಪ್ತವಾಗಿದ್ದಿತು. ದೂತರು ವಿಹಾರಿಯನ್ನು ಆ ಕೊಟಡಿಯೊಳಗೆ ದೂಡಿ ಬಾಗಿಲನ್ನು ಹಾಕಿಕೊಂಡರು.

ದಾರುಣವಾದ ಉತ್ತಾಪದಿಂದ ವಿಹಾರಿಯು ತಲ್ಲಣಿಸುತ್ತ ತಳವಳಪಡುತಲಿದ್ದನು. ಆ ತಾಪದಿಂದ ಅವನ ದೇಹವು ಅವಸನ್ನವಾಗುತ ಬಂದಿತು. ಅವನು ಸ್ವಲ್ಪಹೊತ್ತಿನೊಳಗೆ ವ್ಯಾಕುಲದಿಂದ ಆರ್ತನಾದ ಮಾಡುತ್ತ ಕಡೆಗೆ ನಿಶ್ಚೇಷ್ಟನಾಗಿ ಸುಮ್ಮನಾದನು.

ಆಗ ಆ ವಜ್ರಗಂಭೀರವುಳ್ಳ ಘೋಷದಿಂದ, ಹೆ ನಿರ್ಭಾಗ್ಯ! ಈಗಲಾದರೂ ಪಾಪಪ್ರವೃತ್ತಿಯನ್ನು ಪರಿತ್ಯಾಗಮಾಡಲು ಇಷ್ಟವೆ? ಎಂದು ಪ್ರಶ್ನೆಯು ಹೊರಟಿತು.

ಆ ತಲ್ಲಣಿಸುತ್ತ ತಳವಳಪಡುತಲಿದ್ದ ವಿಹಾರಿಯು ಅತ್ಯಂತ ವಿರಕ್ತನಾಗಿ, ನೀನು ಯಾರೇ ಆದರೂ ಅತ್ಯಂತ ಮುರ್ಖಾಳನಾಗಿರಬೇಕು. ನೀನು ಏತಕ್ಕೆ ಪದೇಪದೆ ನನ್ನೊಡನೆ ಪರಿಹಾಸ ಮಾಡುತ್ತಿ? ಪ್ರಾಣವಿರುವರೆಗೂ ಈ ಯಾಶೆಯನ್ನು ಬಿಡಲು ನನ್ನಿಂದಾಗಲಾರದು ಎಂದನು

ಅದೇ ವಿಕಟವಾದ ಧ್ವನಿಯು, ಇನ್ನು ಮುಂದೆ ಆಗುವ ಶಿಕ್ಷೆಯನ್ನು ಸ್ಮರಿಸಿಕೊಂಡರೂ ನಡುಗುವೆ. ಪಾಪಾತ್ಮನೆ! ನೋಡಿಕೊ—ಈಗಲಾದರೂ ಅನುತಾಪಪಡಲು ಪ್ರವೃತ್ತನಾಗೆಂದು ಹೇಳಿತು.

ವಿಹಾರಿ—ಕರ್ತವ್ಯವಾದ ಕೆಲಸವನ್ನು ಮಾಡಿ ಯಾರೂ ಎಂದಿಗೂ ಅನುತಾಪಪಡುವುದಿಲ್ಲ. ನಾನು ಮಾಡಿರುವ ಪಾಪಕ್ಕೆ ನೀವು ಕೊಡುವ ಶಿಕ್ಷೆಯು ತಕ್ಕದ್ದಾಗಿಯೇ ಇರಬಹುದು. ಒಂದು ತಡವೆ ಏತಕ್ಕೆ ? ಅನುಕೂಲಿಸಿದರೆ, ಆ ಆಶೆಯು ನಿವೃತ್ತಿಯಾಗದವರೆಗೂ ನಾನು ಪದೇಪದೇ ಹಾಗೆಯೇ ಅಥವಾ ಅದಕ್ಕಿಂತಲೂ ಗುರುತರವಾದ ಕೆಲಸವನ್ನು ಮಾಡುತಲಿರುವೆನು. ಅನುತಾಪ! ಅನುತಾಪ! ಎಂದು ಹೇಳುತ್ತಿ, ಎಲೊ, ಮೂಢ! ಏತಕ್ಕೆ ಅನುತಾಪ!

ಆ ಅತ್ಯುತ್ಕಟವಾದ ಧ್ವನಿಯು, ದೂತರುಗಳಿರಾ! ಇವನನ್ನು ತೆಗೆದು ಕೊಂಡು ಹೋಗಿ ಕಂಟಕಾರಣ್ಯದಲ್ಲಿ ಹಾಕಿರೆಂದು ಅಪ್ಪಣೆಮಾಡಿತು.

ಕೂಡಲೆ ಆ ವಿಕಟಾಕಾರವುಳ್ಳ ಇರುವರುಂದಿಯೂ ಬಂದು ವಿಹಾರಿಯನ್ನು ಆ ಕೊಟಡಿಯಿಂದ ತೆಗೆದು ಮೊದಲಿನ ಹಾಗೆ ಮತ್ತಷ್ಟುದೂರ ಕರೆದುಕೊಂಡು ಹೋಗಿ ಅಲ್ಲಿದ್ದ ಒಂದು ಕೊಟಡಿಯ ಬಾಗಿಲನ್ನು ತೆರೆದು ಅದರಲ್ಲಿ ವಿಹಾರಿ ಯನ್ನು ಹಾಕಿದರು. ಆ ಕೊಟಡಿಯಲ್ಲಿ ಸರ್ವತ್ರ ಸೂಜಿಯ ಹಾಗೆ ಸೂಕ್ಷ್ಮಾ ಗ್ರವುಳ್ಳ ಕಬ್ಬಿಣದ ಮೊಳೆಗಳು ನಾಟಲ್ಪಟ್ಟಿದ್ದವು. ಕಾತರನಾಗಿ ದುರ್ಬಲನಾ ಗಿದ್ದ ವಿಹಾರಿಯನ್ನು ಆ ಕೊಟಡಿಯೊಳಗೆ ಹಾಕುತ್ತಲೇ ಅವನ ಕಾಲುಗಳೆರಡೂ ಸಂಪೂರ್ಣವಾಗಿ ಮುಳ್ಳು ಚುಚ್ಚಿಕೊಂಡು ನಿಲ್ಲಲಾರದವನಾಗಿ ಅತ್ಯಂತ ವ್ಯಥಿತ ನಾದನು. ಬೇಗಬೇಗನೆ ಕೈಮೇಲೆ ಭಾರವನ್ನು ಬಿಟ್ಟು ಕಾಲೆತ್ತಿದನು. ಕೈ ತುಂಬ ಮುಳ್ಳುಗಳು ದಳಿದುಕೊಂಡಿತು. ಕೂಡಲೆ ನೆಲಕ್ಕೆ ಬಿದ್ದನು. ದೇಹದ ಒಂದು ಕಡೆ ಅಸಹನೀಯವಾದ ಯಾತನೆಯಿಂದ ಉರಿಯಲಾರಂಭವಾಗಿ ಮತ್ತೊಂದು ಕಡೆ ತಿರುಗಿಕೊಂಡನು. ಅಯ್ಯೋ! ನಿರ್ಭಾಗ್ಯನಾದ ಪಾಪಿಗೆ ಯಾವ ಕಡೆಯೂ ನಿಸ್ತಾರವಿಲ್ಲ. ವಿಹಾರಿಯ ಸರ್ವಾಂಗದಿಂದಲೂ ರಕ್ತ ಸುರಿಯ ಲಾರಂಭವಾಯಿತು. ಅವನು ಮರಣಾಪನ್ನನಾಗಿ ಬಿದ್ದುಕೊಂಡನು. ಸ್ವಲ್ಪ ಹೊತ್ತಿನ ಮೇಲೆ ಅಸಹ್ಯವಾದ ಜ್ವಾಲೆಯಿಂದ ಅಭಿಭೂತನಾಗಿ, ಎಲ್ಲಿರುತ್ತೀ, ನೀನು? ಕಣ್ಣಿಗೆ ಬೀಳದಿರುವ ಪುರುಷನೆ! ನನ್ನ ಪ್ರಾಣವು ಹೋಗುತಲಿದೆ, ನನ್ನನ್ನು ರಕ್ಷಿಸು, ಎಂದು ಕೂಗಿದನು

ಆ ಕೂಡಲೆ, ಆ ವಿಕಟವಾದ ಸ್ವರವು, ಇಷ್ಟು ಹೊತ್ತಿನ ಮೇಲೆ, ಎಲೈ ನರಾಧಮ! ನಿನಗೆ ಹಿತಾಹಿತ ಬೋಧೆಯುಂಟಾಯಿತೆ? ನೀನು ಅನುತಾಪ ಪಡುವುದಕ್ಕೆ ಸಿದ್ಧವಾಗಿರುತ್ತೀಯಾ? ಎಂದು ಕೇಳಿತು.

ವಿಹಾರಿ — ಅನುತಾಪ ಪಡಲಾಪೆನು. ಆದರೆ ಸುರಬಾಲೆಯ ಆಶೆಯನ್ನು ಬಿಡಲಾರೆನು. ಇಲ್ಲ, ಇಲ್ಲ, ನನಗೆ ಅದು ಅಸಾಧ್ಯ. ಪ್ರಾಣ ಹೋಗುತ್ತದೆ. ನೀನು ನನ್ನನ್ನು ರಕ್ಷಿಸು.

ಅದೇ ಸ್ವರದಲ್ಲಿ, ಎಲೊ, ಪಿಶಾಚವೆ! ಇನ್ನೂ ನೀನು ಕಠಿಣವಾದ ಶಿಕ್ಷೆಯನ್ನು ಅನುಭವಿಸಬೇಕೆಂದು ತೋರುತ್ತದೆ. ಇನ್ನು ನಿನ್ನ ಅಪರಾಧವನ್ನು ಒಪ್ಪಿಕೊಂಡು ಅನುತಾಪ ಪಡುವದಿಲ್ಲವಷ್ಟೆ? ನೋಡೋಣ, ಎಷ್ಟು ಕಾಲ ಹೀಗೆ ನಡೆಯುವುದು? ಎಂದುತ್ತರ ಹೊರಟಿತು.

ವಿಹಾರಿ—(ಅಳುತ್ತ)—ಬೇಡ, ಬೇಡ,—ನೀನು ಯಾರೇ ಆಗಲಿ—ನಿನ್ನ ಪಾದಕ್ಕೆರಗುವೆನು. ಇನ್ನು ನನಗೆ ದಂಡನೆಮಾಡಬೇಡ. ನಿನಗೆ ವಿಧೇಯನಾಗಲು ನನಗೆ ಇಷ್ಟವಿಲ್ಲದೆ ಇಲ್ಲ ಆದರೆ ಅಸಾಧ್ಯವಾದುದನ್ನು ಹೇಳಿದರೆ ನಾನು ಹೇಗೆ ಮಾಡಲಿ ?

ಅದೇ ಸ್ವರವು, ದೂತರನ್ನು ಕುರಿತು, ದೂತರುಗಳಿರಾ ! ಎಂದು ಕೂಗುವುದರೊಳಗಾಗಿ, ವಿಹಾರಿಯು, ಬೇಡ, ಬೇಡ, ದೂತರನ್ನು ಕರೆಯಬೇಡ—ನಾನೇನು ಮಾಡಬೇಕೋ ಅದನ್ನು ಹೇಳು—ನನ್ನ ಪ್ರಾಣಹೋಗುತ್ತದೆ ನೀನು ಸರ್ವಶಕ್ತಿವಂತನೆಂದು ತೋರುತ್ತದೆ—ನಿನಗೆ ವಿರೋಧವಾಗಿ ನಡೆಯುವುದು ನನಗೆ ಸಾಧ್ಯವಿಲ್ಲ. ಸುರಬಾಲೆಯನ್ನು ಹೊಂದುವ ಆಶೆಯನ್ನು ಬಿಡಬೇಕೆಂದು ಹೇಳಬೇಡ. ನೀನು ಮತ್ತೇನನ್ನು ಮಾಡಬೇಕೆಂದು ಹೇಳಿದರೂ ಮಾಡುತ್ತೇನೆಂದನು.

ಪುನಃ ಅದೇ ಸ್ವರವು, ಎಲೋ ! ನರಾಧಮ ! ನಿನ್ನ ದುರದೃಷ್ಟವು ಇನ್ನೂ ಕೊನೆಗಾಣುವಹಾಗಿಲ್ಲ. ನಿನಗೆ ಇನ್ನೂ ಕಠಿಣವಾದ ಶಾಸ್ತಿಯಾಗಬೇಕಾಗಿದೆ. ದೂತರುಗಳಿರಾ ! ಈ ಹತಭಾಗ್ಯನನ್ನು ಆ ಲೋಕಾಲಯಕ್ಕೆ ತೆಗೆದುಕೊಂಡುಹೋಗಿರಿಯೆಂದು ಅಪ್ಪಣೆಮಾಡಿತು.

ಆ ಕೂಡಲೆ ವಿಕಟಾಕಾರವುಳ್ಳ ದೂತರು ವಿಹಾರಿಯ ರುಧಿರಾಕ್ತವಾದ ಕಳೇಬರವನ್ನು ಆ ಕೊಟಡಿಯಿಂದ ಹೊರಕ್ಕೆ ಎಳೆದುಕೊಂಡು ಬಂದರು.

## ಹತ್ತನೆಯ ಪರಿಚ್ಛೇದ.

ಆ ಶಾಸನಪುರಿಯ ಒಂದು ಬೆಳಕಾದ ಭಾಗದಲ್ಲಿ ವಿಹಾರಿಯು ಮೃತಪ್ರಾಯನಾಗಿ ಮಲಗಿದ್ದಾನೆ. ಒಬ್ಬ ಸುಘಟಿತನಾದ ಸುಂದರಪುರುಷನು ಪಾರ್ಶ್ವದಲ್ಲಿ ಕುಳಿತುಕೊಂಡು ಅವನ ಶುಶ್ರೂಷೆಯನ್ನು ಮಾಡುತ್ತಾನೆ ಆ ಪುರುಷನು ರಮಾಪತಿ. ವಿಹಾರಿಯು ಅಚೇತನನಾಗಿದ್ದನು. ಅದುಕಾರಣ ತನಗೆ ಯಾರು ಉಪಚರಿಸುತ್ತಾರೆಂದು ತಿಳಿಯನು.

ರಮಾಪತಿಯು ಬಹಳ ಹೊತ್ತು ನಾನಾ ಪ್ರಕಾರವಾಗಿ ಉಪಚರಿಸಿದ ಮೇಲೆ, ವಿಹಾರಿಗೆ ಸ್ವಲ್ಪ ಚೇತನವು ಬಂದು ನೋಡಿ ರಮಾಪತಿಯನ್ನು ಗುರುತಿಸಿದನು.

ರಮಾಪತಿ—ಅಣ್ಣಾ ನಿನ್ನ ಈ ಅವಸ್ಥೆಯನ್ನು ನೋಡಿ ನಾನು ಬಹಳ ವ್ಯಥೆಪಡುತ್ತೇನೆ. ಏನು ಮಾಡಿದರೆ ಯಾತನೆಯು ಶಾಂತವಾಗುವುದೋ ಅದನ್ನು ತಿಳಿಯಲಾರದವನಾಗಿದ್ದೇನೆ ? ನಿನಗೆ ಈಗ ಬಹಳ ಕಷ್ಟಬೋಧೆಯಾಗುತ್ತದೊ ?

ವಿಹಾರಿ—ಯಾರು ನೀನು ? ನೀನು ರಮಾಪತಿಯೆ ? ಈ ನನ್ನ ದುರವಸ್ಥೆಯಲ್ಲಿ ನನ್ನನ್ನು ಪರಿಹಾಸ ಮಾಡುವುದಕ್ಕೆ ಬಂದಿಯಾ? ನೀನು ಹೋಗು ! ನೀನು ನನಗೆ ಪರಮ ಶತ್ರು. ನಿನ್ನಿಂದ ನನ್ನ ಚಿರಾಭಿಲಾಷೆಯು ಸಫಲವಾಗದೆ ಹೋಯಿತು. ನೀನು ಬಂದು ಒದಗದಿದ್ದರೂ, ನೀನು ಮುಣುಗಿದ್ದವನು ಬದುಕದೆ ಹೋಗಿದ್ದರೂ ಸುರಬಾಲೆಯು ಬೇರೆ ವರನಿಗೆ ವಿವಾಹಿತಳಾಗುತ್ತಿದ್ದಳು. ಹಾಗಾಗಿದ್ದರೆ, ಪ್ರಕಾಶ್ಯವಾಗಿಲ್ಲದೆ ಹೋದರೂ ಅಪ್ರಕಾಶ್ಯವಾಗಿ ಆ ಸುಂದರಿಯ ಪ್ರೇಮವನ್ನು ಉಪಭೋಗಿಸುತಲಿದ್ದೆನು. ನೀನು ನನಗೆ ಪರಮ ಶತ್ರು ನೀನು ಸಾಯುವುದಕ್ಕೆ ಬಿದ್ದಿದ್ದೆ. ಆಗ ನಾನು ಮನಸ್ಸಿನಲ್ಲಿ, ಇಷ್ಟು ದಿನಗಳ ಮೇಲೆ ಭಗವಂತನು ಕೃಪೆಗೈದು ನನ್ನ ಮಾರ್ಗದಲ್ಲಿ ಕಂಟಕನಾಗಿದ್ದುದನ್ನು ದೂರಮಾಡಿದನೆಂದು ತಿಳಿದಿದ್ದೆನು. ಆದರೆ ಏನು ಅನ್ಯಾಯವಾಯಿತು ! ನನ್ನನ್ನು ಚಿರಕಾಲ ಯಾತನೆಗೊಳಪಡಿಸಲು ನೀನು ಅಂತಹ ಅವಸ್ಥೆಯಿಂದಲೂ ಬದುಕಿ ಉಳಿದುಕೊಂಡೆ. ನಿನಗೆ ಮರಣವೇ ಇಲ್ಲವೆ ? ನೀನು ನನಗೆ ಪ್ರಭು, ನೀನು ನನ್ನ ಪಾಲಕನು. ಆದರೂ ನಾನು ನಿನಗೆ ಪ್ರಬಲವಾದ ಶತ್ರು. ನೀನು ಹೋಗು. ನೀನು ಇಲ್ಲಿ ವಿನೋದವನ್ನು ನೋಡುವುದಕ್ಕೆ ಬಂದಿರುತ್ತಿ. ನೀನು ಸುಖಿ. ನೀನು ಭಾಗ್ಯವಂತ. ಸುರಬಾಲೆಯು ನಿನ್ನವಳು. ಇಷ್ಟು ಸುಖಿಯಾದವನು ದುಃಖಿಯಾದವನ ವೇದನೆಯನ್ನು ತಿಳಿಯಬಲ್ಲನೆ ! ಭಾಗ್ಯವಂತನೆ ! ನೀನು ಹೋಗು. ಈ ನಿರ್ಭಾಗ್ಯನು ಎಷ್ಟುಕಾಲ ಜೀವದಿಂದಿರುವನೋ ಅದುವರೆಗೂ ನಿನಗೆ ಭಯಂಕರವಾದ ಶತ್ರುವಾಗಿರುವನು. ಈ ಶತ್ರುವನ್ನು ಬಿಟ್ಟು ನಿನ್ನ ಸುರಬಾಲೆಯ ಹತ್ತಿರ ಹೋಗು. ಯಾವ ದಿನ ನಿನ್ನನ್ನು ನಿಪಾತಮಾಡಿ ಸುರ

ಬಾಲೆಯ ಮೇಲೆ ಅಧಿಕಾರವನ್ನು ಮಾಡುವೆನೋ ಆ ದಿನ ನನ್ನ ಯಾತನೆಯು ಕೊನೆಗಾಣುವುದು. ನೀನು ಹೋಗು—ನನ್ನ ಸಮ್ಮುಖದಿಂದ ಓಡಿಹೋಗು.

ರಮಾಪತಿ—ಅಣ್ಣಾ, ವಿಹಾರಿ! ನಿನ್ನ ಯಾತನೆಯ ವೃತ್ತಾಂತವನ್ನು ಕೇಳಿ ನಾನು ಆಂತರಿಕನಾಗಿ ದುಃಖಿಯಾಗಿದ್ದೇನೆ ಬುದ್ಧಿಯ ದೋಷದಿಂದ ನಿನಗೆ ಹೀಗೆ ಕ್ಷಣಿಕ ಮತಿಭ್ರಮೆಯುಂಟಾಗಿದೆಯೆಂದು ತಿಳಿದು ನಾನು ನಿನ್ನ ಮೇಲೆ ವಿರಕ್ತನಾಗದೆ ಕ್ಷುಣ್ಣನಾಗಿ ಮನಕುಂದಿದವನಾಗಿದ್ದೇನೆ ಈ ಪ್ರಕಾರ ಸ್ವಲ್ಪ ಮತಿಭ್ರಮೆಯುಂಟಾಗುವುದು ಅಸ್ವಾಭಾವಿಕವಾದುದಲ್ಲ ಎಲ್ಲರಿಗೂ ಹೀಗೆ ಪದಸ್ಖಲನವಾಗುವುದು ಸಂಭವ. ಹಾಗಿಲ್ಲದಿದ್ದರೆ ನಿನ್ನ ಹಾಗಿರುವ ಸರ್ವಗುಣಗುಣಾನ್ವಿತವಾದವನಿಗೆ ಮನಸ್ಸು ಹೀಗಾಗುವುದುಂಟೆ! ನೀನು ನನ್ನನ್ನು ಶತ್ರುವೆಂದು ತಿಳಿದುಕೊಂಡರೂ ನಾನು ನಿನ್ನನ್ನು ನನ್ನ ಅಕೃತ್ರಿಮವಾದ ಸ್ನೇಹಿತನೆಂದು ತಿಳಿದು ನಿನ್ನನು ನನ್ನ ಸಹೋದರನಿಗಿಂತಲೂ ಹೆಚ್ಚೆಂದು ತಿಳಿದು ಕೊಂಡಿದ್ದೇನೆ. ನೀನು ಈಗ ನಡೆಸಿರುವ ವ್ಯವಹಾರವನ್ನು ಜನರು ಅತಿಶಯ ವಾದ ದುಷ್ಕರ್ಮವೆಂದು ತಿಳಿದಿದ್ದರೂ ನಾನದನ್ನು ಸಾಮಾನ್ಯವಾದ ಮತಿ ಭ್ರಮೆಯೆಂತಲೂ ಕ್ಷಣಿಕವಾದ ಮೋಹವೆಂತಲೂ ಮತ್ತು ಗಣನೆಗೆ ಯೋಗ್ಯ ವಲ್ಲದ ಮನಶ್ಚಾಂಚಲ್ಯವೆಂದು ತಿಳಿದುಕೊಂಡಿದ್ದೇನೆ. ಅಣ್ಣಾ! ಆ ವ್ಯವಹಾರ ವನ್ನು ನಾನು ಮನಸ್ಸಿಗೆ ತಂದುಕೊಳ್ಳುವುದಿಲ್ಲ ಪುನಃ ಅದನ್ನು ಕುರಿತು ಎಂದಿಗೂ ಯೋಚನೆಮಾಡುವುದಿಲ್ಲ ಈಗ ಏನು ಮಾಡಿದರೆ ನಿನಗೆ ಜಾಗ್ರತೆ ಯಾಗಿ ಸ್ವಾಸ್ಥ್ಯವುಂಟಾಗಿ ಮೊದಲಿನ ಹಾಗೆ ಬಲವುಂಟಾಗುವುದೋ ಅದನ್ನು ಮಾತ್ರ ಯೋಚಿಸುತಲಿದ್ದೇನೆ.

ವಿಹಾರಿಯು ಬಹಳ ಹೊತ್ತು ಸುಮ್ಮನಿದ್ದು, ಅನಂತರ, ರಮಾಪತಿ! ಜನರು ನಿನ್ನನ್ನು ಅನೇಕ ತಡವೆ ದೇವತೆಯೆಂದು ಹೇಳುತ್ತಾರೆ ನಿನ್ನ ಪ್ರಕೃತಿ ಯನ್ನು ನೋಡಿ ನಿನ್ನನ್ನು ದೇವತೆಯೆಂತಲೇ ಹೇಳಲು ಇಷ್ಟವುಳ್ಳವರಾಗಿದ್ದಾರೆ ಆದರೆ ನೀನು ಸುರಬಾಲೆಯ ಸ್ವಾಮಿ ಅದುಕಾರಣ ನಿನ್ನ ಅಪರಾಧವು ನನ್ನ ಕಣ್ಣಿಗೆ ಅಮಾರ್ಜನೀಯವಾಗಿ ನೀನು ನನ್ನ ಸಂಗತ ಮಿತ್ರಭಾವದಲ್ಲಿರುವುದು ಅಸಂಭವ. ನೀನು ದೇವತೆ, ಅದುಕಾರಣ ದೇವಿಯನ್ನು ಹೊಂದಿ ಸುಖಿಯಾ ಗಿರುತ್ತೀ. ನಾನು ನಾರಕೀ—ಒಂದು ನಿಮಿಷ ಮಾತ್ರ ಆ ದೇವಿಯ ಲಾಭದಲ್ಲಿ ಆಶೆಯುಳ್ಳವನಾಗಿ ಈ ನರಕ ಯಾತನೆಯನ್ನನುಭವಿಸುತ್ತೇನೆ. ನೀನು ಹೋಗು,

ನಿನ್ನ ಹಾಗಿರುವ ದೇವತೆಯು ಈ ನಾರಕಿಯೊಡನೆ ಇರುವುದು ಅನ್ಯಾಯ ಎಂದು ಹೇಳಿದನು.

ರಮಾಪತಿ—ಅಣ್ಣಾ ! ಏತಕ್ಕೆ ಹಾಗೆ ಯೋಚಿಸುತ್ತಿ ? ಏತಕ್ಕೆ ನೀನು ನಾರಕೀ, ನಾನೇಕೆ ದೇವತೆ ? ನಿನ್ನ ಶರೀರದಲ್ಲಿ ಗುಣಗಳಿಲ್ಲವೆ? ನೀನು ಏತಕ್ಕೆ ಅಕಾರಣವಾಗಿ ಕಾತರನಾಗುತ್ತಿ ? ನಾನು ಯಾವುದೋ ಅಪಾರವಾದ ಭಾಗ್ಯ ಬಲದಿಂದ ಸುರಬಾಲೆಗೆ ಸ್ವಾಮಿಯಾದೆನು. ಆದರೆ ನೀನೂ ಯಾವುದೋ ಒಂದು ಅಪಾರವಾದ ಸುಕೃತಬಲದಿಂದ ಆ ದೇವಿಗೆ ಅಣ್ಣನಾಗಿರುತ್ತಿ. ಇಬ್ಬರ ಸಂಬಂಧವೂ ಅತಿ ಪವಿತ್ರವಾದುದು. ಅತಿ ಸಮೀಪವಾದುದು. ನೀನು ನಿಜವಾಗಿಯೂ ಸುರಬಾಲೆಯನ್ನು ಪ್ರೀತಿಸುವವನಾದರೆ ಭ್ರಾತೃಭಾವದಲ್ಲಿ ಅವಳನ್ನು ಆದರಿಸಿ ಪ್ರೀತಿಸಿದರೆ ನಿನ್ನ ಪ್ರಾಣವು ತೃಪ್ತಿಯನ್ನು ಹೊಂದಲಾರದೆ ? ನೀನು ಏತಕ್ಕೆ ಸುಖಿಯಾಗಬಾರದು ? ಸುರಬಾಲೆಯು ಯಾರಿಗೆ ತಂಗಿಯೊ, ಅವಳು ಯಾರನ್ನು ತನ್ನ ಸಹೋದರನ ಹಾಗೆ ಪ್ರೀತಿಸುವಳೋ ಆ ಮನುಷ್ಯನು ನಿಶ್ಚಯವಾಗಿಯೂ ಭಾಗ್ಯವಂತನು. ನೀನು ಆಲೋಚಿಸಿ ನೋಡು ಸುರಬಾಲೆಯು ಸುಖವಾಗಿದ್ದರೆ, ಅದು ನಿನಗೆ ಹೇಗೆ ಆನಂದದಾಯಕವೋ ಹಾಗೆಯೇ ನನಗೂ ಆನಂದದಾಯಕವಾದುದು. ಸುರಬಾಲೆಯ ಸ್ವಾಮಿಯು ದೇವತೆಯಾದರೆ, ಸುರಬಾಲೆಯ ಅಣ್ಣನೂ ದೇವತೆಯೇ ಸರಿ, ಅದಕ್ಕೆ ಸಂದೇಹವಿಲ್ಲ. ಅಣ್ಣಾ ! ನೀನು ಕಾತರನಾಗಲೇಕೆ ?

ವಿಹಾರಿಯು ಬಹಳ ಹೊತ್ತು ಉಸಿರು ಇಲ್ಲದವನಹಾಗಿದ್ದು ಅನಂತರ, ಅಣ್ಣಾ, ರಮಾಪತಿ ! ನಾನೇನೋ ಸಾಯುವುದರಲ್ಲಿದ್ದೇನೆ. ನನ್ನ ಈಗಿನ ಸ್ಥಿತಿಯಿಂದ ನೋಡಿದರೆ ಇನ್ನು ನಾನು ಬಹಳ ಹೊತ್ತು ಬದುಕುವ ಹಾಗಿಲ್ಲ. ನೀನು ದಯಮಾಡಿ ಈ ಕಾಲದಲ್ಲಿ ಒಂದು ತಡವೆ ಸುರಬಾಲೆಯನ್ನು ತೋರಿಸಲಾರೆಯಾ ? ನನಗೆ ಇನ್ನು ಸಾಮರ್ಥ್ಯವು ಉಡುಗಿತು. ಇನ್ನು ಯಾವ ಅತ್ಯಾಚಾರವನ್ನೂ ನಡೆಸಲು ಅಸಮರ್ಥನಾಗಿದ್ದೇನೆ. ಈಯವಸ್ಥೆಯಲ್ಲಿ ನನ್ನನ್ನು ಪ್ರೀತಿಸಲಾರೆಯಾ ? ಎಂದನು.

ರಮಾಪತಿ—(ಸ್ವಲ್ಪ ನಕ್ಕು)—ಅಗತ್ಯವಾಗಿ ಆಗಲಿ. ಸುರಬಾಲೆಯು ಈಗಲೇ ಇಲ್ಲಿಗೆ ಬರುವಳು. ನೀನು ಸುಸ್ಥನಾಗಿ ಬಲವುಳ್ಳವನಾಗಿದ್ದರೂ ನೀನು ಹೇಳಿದ ಮಾತಿಗೆ ನನ್ನ ಆಕ್ಷೇಪವಿರದು. ನೀನು ಸುರಬಾಲೆಯ ಅಣ್ಣ.

ನೀನು ನನಗೆ ಅಭಿನ್ನವಾದ ಹೃದಯವುಳ್ಳ ಬಂಧು. ನಿನ್ನಲ್ಲಿ ನಮಗೆ ಎಷ್ಟರ ಮಟ್ಟಿಗೆ ನಂಬುಗೆ ಇದೆಯೆಂದರೆ, ಸುರಬಾಲೆಯೊಬ್ಬಳೇ ಬಂದು ನಿಂತು ನಿನ್ನ ಸಂಗಡ ಮಾತನಾಡಿದರೂ ನಮಗೆ ಅಪನಂಬುಕೆಯಿಲ್ಲ ನಿನ್ನ ತಂಗಿಯೊಬ್ಬಳೇ ನಿನ್ನ ಬಳಿ ಇದ್ದು ಕೊಂಡು ನಿನಗೆ ಶುಶ್ರೂಷೆಯನ್ನು ಮಾಡುವಳು.

ಇಷ್ಟು ಹೊತ್ತಿನ ಮೇಲೆ ವಿಹಾರಿಯ ಕಣ್ಣುಗಳಲ್ಲಿ ನೀರು ತುಂಬಿ ಹರಿಯಿತು. ಅವನು ಯಥಾರ್ಥವಾಗಿಯೂ ರಮಾಪತಿಯು ಸ್ವರ್ಗಲೋಕದ ದೇವತೆ. ನನ್ನನ್ನು ಧಿಕ್ ! ನಾನು ಇಂತಹ ದೇವತೆಗೆ ವಿರುದ್ಧವಾಗಿ ಅತ್ಯಾಚಾರವನ್ನು ನಡೆಸಿದೆನು ! ಎಂದು ತನ್ನನ್ನೇ ತಾನು ಅತಿಯಾಗಿ ತಿರಸ್ಕಾರ ಮಾಡಿಕೊಂಡನು.

ಆಗ ಇದ್ದಕ್ಕಿದ್ದ ಹಾಗೆ ಶಾಸನಪುರಿಯ ಆ ಭಾಗವು ಅದ್ಭುತವಾದ ಒಂದು ಬೆಳಕಿನಿಂದ ಉಜ್ವಲವಾಯಿತು. ಸುರಬಾಲೆಯನ್ನು ಸಂಗಡ ಕರೆದು ಕೊಂಡು ಶಾಂತಿನಿಕೇತನದ ದೇವಿಯರು ಅಲ್ಲಿಗೆ ಬಂದರು. ವಿಹಾರಿಯು ಆ ದೇವಿಮೂರ್ತಿಗಳನ್ನು ನೋಡಿ, ನಾನು ಮಹಾ ಪಾಪಿಯಾಗದಿದ್ದರೆ ನನ್ನ ಮರಣ ಕಾಲದಲ್ಲಿ ಸ್ವರ್ಗಲೋಕದ ದೇವತೆಯರು ಬಂದು ದರ್ಶನವನ್ನು ಕೊಟ್ಟು ನನ್ನನ್ನು ಧನ್ಯನನ್ನಾಗಿ ಮಾಡುವರೆಂದು ತಿಳಿದಿದ್ದೆನು. ಆದರೆ ಆ ದೇವಿಯು ಎಲ್ಲಿ ? ಕೃಪಾಮಯಳಾದ ನನ್ನ ತಂಗಿಯಾದ ಸುರಬಾಲೆಯು ಎಲ್ಲಿ ? ಎಂದನು.

ಸುರಬಾಲೆಯು ಮುಂದಾಗಿ ಬಂದು, ಅಣ್ಣಾ ! ಇದೊ ಇಲ್ಲಿದ್ದೇನೆ. ನಿನಗೆ ಇಷ್ಟು ಕಷ್ಟವಾಯಿತೆ ? ಎಂದಳು

ವಿಹಾರಿಲಾಲನು ನೋಡಲಾಗಿ, ಅವನೆದುರಿಗೆ ಆ ಅಪಾಪವಿದ್ಧಳಾದ ಪವಿತ್ರಮಯಿಯಾದ ಸುಂದರಿಯು ಅಶ್ರುನಯನಳಾಗಿ ನಿಂತಿದ್ದಳು.

ರಮಾಪತಿ—ಸುರಬಾಲೆ ! ನೀನು ನಿಮ್ಮ ಅಣ್ಣನಿಗೆ ಶುಶ್ರೂಷೆ ಮಾಡುತ್ತ ಇಲ್ಲಿಯೇ ಇರು. ನಾವು ಈಗ ಹೋಗಿ ಬರುತ್ತೇವೆ.

ಸುರಬಾಲೆಯ ಸಂಗಾತಿಯರೂ ರಮಾಪತಿಯೂ ಹೊರಟು ಹೋಗುತ ಲಿದ್ದರು. ಅದನ್ನು ಕಂಡು, ವಿಹಾರಿಯು, ಬೇಡ, ಬೇಡ, ನೀವುಗಳು ಹೋಗ ಕೂಡದು. ದಯಮಾಡಿ ಈ ಅಪವಿತ್ರನಾದ ಅಧಮನ ಹತ್ತಿರ ಇನ್ನು ಸ್ವಲ್ಪ ಇರಬೇಕು ಎಂದು ಹೇಳಿ, ಅನಂತರ ಸುರಬಾಲೆಯನ್ನು ನೋಡಿ, ಸುರಬಾಲೆ ! ನೀನು ನನಗೆ ಆಶ್ರಯವನ್ನು ಕೊಟ್ಟ ಮಹಾದಯಾಪರವಶನಾದವನ ಮಗಳು.

ನನ್ನ ಪ್ರಭುವಿನ ಪತ್ನಿ. ನೀನು ಈ ನಿನ್ನ ಅನ್ನಭೋಜಿಯಾದ ದಾಸನನ್ನು ಚಿರ ಕಾಲದಿಂದಲೂ ನಿನ್ನ ಸಹೋದರನ ಹಾಗೆ ಸ್ನೇಹದಿಂದ ನೋಡುತಲಿದ್ದೆ. ನಾನಾದರೋ, ದಾರುಣವಾದ ದುಷ್ಪ್ರವೃತ್ತಿಗೆ ವಶನಾಗಿ ನಿನ್ನ ಮೇಲೆ ನಡೆಸಿದ ಅತ್ಯಾಚಾರವು ಪ್ರಾಯಶ್ಚಿತ್ತಕ್ಕೆ ವಿಷಯವಿದ್ದು ಮತ್ತು ಕ್ಷಮಾರ್ಹವಾದುದಲ್ಲ. ಅನಂತವಾದ ಕಾಲದವರೆಗೂ ನರಕದಲ್ಲಿ ನಿವಾಸದಿಂದಾಗಲಿ ಚಿರಕಾಲ ಅನು ತಾಪದಿಂದಾಗಲಿ ಆ ನನ್ನ ಕಳಂಕವು ಹೋಗತಕ್ಕದ್ದಾಗಿಲ್ಲ. ಈಗ ನನಗೆ ಮೃತ್ಯುಕಾಲವು ಒದಗಿದೆ. ದೇವಿ! ಭಗಿನಿ! ಜನನಿ! ನನಗೆ ನೀನು ಇಂತಹ ಸಮಯದಲ್ಲಿ ಕ್ಷಮೆಯನ್ನು ದಯಪಾಲಿಸಿದರೆ ನಾನು ಸ್ವಲ್ಪ ಮಟ್ಟಿಗೆ ಪ್ರಬೋಧೆಯುಂಟಾದವನಾಗಿ ಸಾಯುವೆನು. ನನ್ನಂತಹ ಈ ಅಧಮನ ದುರಂತವಾದ ಅಪರಾಧವನ್ನು ಮನ್ನಿಸುವುದಕ್ಕೆ ನಿನಗೆ ಪ್ರವೃತ್ತಿಯುಂಟಾದೀತೆ? ಎಂದನು.

ಆಗ ಗಳದಶ್ರುನಯನಳಾದ ಸುರಬಾಲೆಯು, ಅಣ್ಣಾ! ನನ್ನನ್ನು ಬಿಟ್ಟು ನೀನೆಲ್ಲಿಗೆ ಹೋಗುವೆ? ನಾನು ಹೇಗಾದರೂ ಮಾಡಿ ನಿನಗೆ ಶುಶ್ರೂಷೆಯನ್ನು ಮಾಡಿ ನಿನ್ನನ್ನು ಉಳಿಸುವೆನು ಅಣ್ಣಾ! ನೀನು ಇಂತಹ ಮಾತನ್ನು ಇನ್ನು ಮೇಲೆ ಬಾಯಿಂದ ಹೇಳಬೇಡ ನಿನ್ನನ್ನು ಕ್ಷಮಿಸುವುದಕ್ಕೆ ನೀನು ಮಾಡಿರು ವುದೇನು? ನಿನ್ನ ದೋಷವೇನೂ ನನಗೆ ನೆನಪಿನಲ್ಲಿಲ್ಲವೆಂದು ಹೇಳಿದಳು.

ಆಗ ಆ ಶಯ್ಯಾಶಾಯಿಯಾದ ವಿಹಾರಿಯು, ಅಳುತಳುತ, ಎಲೋ, ನರಾ ಧಮ! ನೀನು ದೇವಿಯನ್ನು ಕಲುಷಿತಳನ್ನಾಗಿ ಮಾಡಲು ಪ್ರಯತ್ನಿಸಿದ್ದೆ! ಚಿರನರಕವೊಂದೇ ನಿನಗೆ ಉಪಯುಕ್ತವಾದ ಶಾಸ್ತಿ! ಸುರಬಾಲೆ! ತಂಗಿ! ನಿನ್ನ ಪಾದಧೂಳಿಯನ್ನು ನನ್ನ ಶಿರದಲ್ಲಿ ಇಡು. ನನ್ನ ಪಾಪದಿಂದ ಕಲುಷಿತ ವಾದ ದೇಹವೂ, ಮನಸ್ಸೂ ಪವಿತ್ರವಾಗಲಿ! ನೀನು ಬ್ರಾಹ್ಮಣ ಕನ್ಯೆ. ನಾನು ಕಾಯಸ್ಥ. ನಾನೆದ್ದು ಬಂದು ನಿನ್ನ ಪಾದಧೂಳಿಯನ್ನು ಗ್ರಹಣಮಾಡುವುದಕ್ಕೆ ನನಗೆ ಸಾಮರ್ಥ್ಯವಿಲ್ಲವೆಂದನು

ಆಗ ವಜ್ರಗಂಭೀರವಾದ ನಾದದಿಂದ ಆ ಸಮಸ್ತ ಪುರಿಯು ವಿಕಂಪಿತ ವಾಗುವ ಹಾಗೆ “ ಸಾಮರ್ಥ್ಯವಿದೆ. ನೀನು ಯಾತನೆಯಿಂದ ಮುಕ್ತನಾದೆ. ಇನ್ನು ಈ ಪುರಿಯು ನಿನಗೆ ಯೋಗ್ಯವಾದ ಸ್ಥಾನವಲ್ಲ. ಈಗ ನೀನು ಶಾಂತಿ ನಿಕೇತನಕ್ಕೆ ಹೋಗು ” ಎಂದು ಶಬ್ದವಾಯಿತು.

ವಿಹಾರಿಯು ಅನಾಯಾಸದಿಂದ ಎದ್ದು ಅತ್ಯಂತ ಭಕ್ತಿಪುರಸ್ಸರವಾಗಿ ಸುರಬಾಲೆಯ ಹತ್ತಿರ ಹೋಗಿ ಅವಳ ಪಾದ ಧೂಳಿಯನ್ನು ಗ್ರಹಣ ಮಾಡಿದನು. ತದನಂತರ ನಿರತಿಶಯವಾದ ಪ್ರೀತಿಯಿಂದ ಆ ಪಾದ ಧೂಳಿಯನ್ನು ತನ್ನ ಮಸ್ತಕದಲ್ಲಿಯೂ, ದೇಹದಲ್ಲಿಯೂ ಲೇಪನ ಮಾಡಿಕೊಂಡನು.

ಆಗ ಅಲ್ಲಿ ಸೇರಿದ್ದವರೆಲ್ಲರೂ ಉಚ್ಚಸ್ವರದಿಂದ ಘೋಷಣೆ ಮಾಡಿದರು. “ ಜಯ ! ಶ್ಯಾಮಸುಂದರನಿಗೆ ಜಯವಾಗಲಿ ” ಎಂದು.

## ಹನ್ನೊಂದನೆಯ ಪರಿಚ್ಛೇದ

ರಮಾಪತಿಯೂ ಸುರಬಾಲೆಯೂ ಶಾಂತಿನಿಕೇತನದ ಆ ನಿರ್ದಿಷ್ಟವಾದ ಕೊಟಡಿಯಲ್ಲಿ ಕುಳಿತಿದ್ದಾರೆ. ಅವರು ಶಾಂತಿನಿಕೇತನದ ಮತ್ತಾವ ಭಾಗವನ್ನೂ ನೋಡಿಲ್ಲ. ಅವರು ಈ ಕೊಟಡಿ ಮತ್ತು ಶಾಸನಪುರಿಯ ಒಂದು ಭಾಗ ಇಷ್ಟು ಮಾತ್ರ ನೋಡಿದ್ದಾರೆ. ಆದರೆ ಎಂತಹ ಭಯಾನಕವಾದ ವ್ಯಾಪಾರ ! ಎಂತಹ ಅಲೌಕಿಕವಾದ ಕಾಂಡ ! ಎಂತಹ ಸ್ವರ್ಗೀಯವಾದ ಭಾವ ! ವಿಹಾರಿಯ ಹತ್ತಿರ ಅವರು ಹೋಗಿ ನೋಡಿದ ವ್ಯಾಪಾರಗಳಿಂದ ಈ ನರಲೋಕದಲ್ಲಿ ಇಂತಹ ವಿಸದೃಶವಾದ ವ್ಯಾಪಾರವು ಅಭಿನಯವಾಗಿರುವುದು ಅತ್ಯಂತ ವಿಚಿತ್ರವಾದ ಸಮಾಚಾರವೆಂದು ತಿಳಿದುಕೊಂಡರು. ವಿಹಾರಿಗೆ ವಿಧಿಸಲ್ಪಟ್ಟ ಆ ಭಯಂಕರವಾದ ದಂಡನೆ, ಅವನು ಸುರಬಾಲೆಯನ್ನು ನೋಡಬೇಕೆಂದು ಎಳಸಿದ ಕ್ಷಣದಲ್ಲಿ ಸುರಬಾಲೆಯು ಅಲ್ಲಿಗೆ ಬಂದು ನಿಂತದುದು, ಸುರಬಾಲೆಯ ಸಂಗಡ ಬಂದವರ ಅಪೂರ್ವವಾದ ಕಾಂತಿ, ಅಶ್ರುತಪೂರ್ವವಾದ ಭಯಂಕರವಾದ ಧ್ವನಿಯಿಂದ ವಿಹಾರಿಯ ವಿಷಯಕವಾದ ಅಪ್ಪಣೆ, ವಿಹಾರಿಯ ಮರಣಾಪನ್ನವಾಗಿದ್ದ ದೇಹದಲ್ಲಿ ಇದ್ದಕ್ಕಿದ್ದ ಹಾಗೆ ಉಂಟಾದ ಶಕ್ತಿಯ ಸಂಚಾರ. ಇವೇ ಮುಂತಾದ ವ್ಯಾಪಾರಗಳೆಲ್ಲಾ ಅವರಿಗೆ ಅತ್ಯಂತ ಆಶ್ಚರ್ಯವನ್ನುಂಟು ಮಾಡಿದುವು. ಈ ಸ್ಥಳವು ಸ್ವರ್ಗ ಅಥವಾ ಸ್ವರ್ಗದ ಅಂಶ ವಿಶೇಷವಾಗದಿದ್ದರೂ ಅಲ್ಲಿನ ಅಧಿವಾಸಿಗಳೆಲ್ಲರೂ ದೇವಶಕ್ತಿಯುಳ್ಳವರೆಂಬುವುದರಲ್ಲಿ ಅವರಿಗೆ ಯಾವ ಸಂದೇಹವೂ ಉಳಿದಿರಲಿಲ್ಲ. ದಿವ್ಯ ಕಾಂತಿವಿಶಿಷ್ಟರಾದ

ಅನೇಕ ಮೂರ್ತಿಗಳನ್ನು ಅಲ್ಲಿ ನೋಡಿದ್ದಾರೆ ಆದರೆ ಅವರು ಒಬ್ಬಿಬ್ಬರ ಸಂಗಡ ಮಾತ್ರ ಮಾತನಾಡಿದ್ದಾರೆ. ಎಲ್ಲರ ಸಂಗಡಲೂ ಮಾತನಾಡಿಲ್ಲ. ಈ ಸ್ಥಳದ ರಹಸ್ಯ ಜಾಲವನ್ನು ತಿಳಿಯಲು ಅವರಿಗೆ ಅಸಾಧ್ಯವಾಗಿದ್ದಿತು. ಈ ಸ್ಥಳಕ್ಕೆ ರಾಜನು ಯಾರು ? ಯಾರು ಪಾಲಕ ? ಯಾರು ನಿಯಂತಾ ? ಯಾವದೂ ಗೊತ್ತಾಗದು. ಶಾಂತಿದೇವಿ ಎಂಬಾಕೆಯು ಈ ಸ್ವರ್ಗಧಾಮಕ್ಕೆ ಅಧಿಷ್ಠಾತ್ರಿಯೆಂದು ಕೇಳಿದ್ದರು. ಆದರೆ ಅವಳು ಯಾರು ?

ಅವರಿಗೆ ಯಾವ ವಿಷಯವನ್ನು ತಿಳಿದುಕೊಳ್ಳುವುದಕ್ಕೂ ಅನುಕೂಲವಿಲ್ಲ ನಿಯಮಿತವಾದ ಕಾಲದಲ್ಲಿ ಸ್ನಾನ, ಆಹಾರಾದಿಗಳ ವ್ಯವಸ್ಥೆಯು ಏರ್ಪಟ್ಟಿದ್ದಿತು. ಮಾಧುರಿಗೂ ಮಗುವಿಗೂ ಆಡುವುದಕ್ಕೆ ಯಥೇಷ್ಟ ಸಾಮಗ್ರಿಗಳು ಸಿದ್ಧವಾಗಿದ್ದುವು, ಅವರ ಭೋಗವಿಲಾಸಸಾಧನೋಪಯೋಗಿಯಾದ ಸಾಮಗ್ರಿಗಳಿಗೆ ಅಭಾವವಿಲ್ಲ ಇದನ್ನೆಲ್ಲಾ ಕೊಡುವವರು ಯಾರು? ಏತಕ್ಕೆ ಕೊಡುತ್ತಾರೆ? ಎಲ್ಲಿಂದ ಇಷ್ಟನ್ನೆಲ್ಲಾ ಒದಗಿಸುತ್ತಾರೆ ? ಇವಾವುದೂ ಗೊತ್ತಾಗದೆ ದಂಪತಿಗಳಿಬ್ಬರೂ ಕೌತೂಹಲಾವಿಷ್ಟರಾಗಿ ವಿಸ್ಮಯಾಕುಲರಾಗಿದ್ದರು.

ಅನಂತರ ಅವರ ಆಶ್ಚರ್ಯಕ್ಕೆ ಪ್ರಧಾನವಾದ ಕಾರಣ, ಸುರಮಾದೇವಿಯ ನಡತೆ, ರಮಾಪತಿಯು ಅವಳನ್ನು ಕುರಿತು ಬಹಳ ಆಲೋಚಿಸಿ, ಈ ದೇವಿಯ ಮೂರ್ತಿಯನ್ನು ಎಲ್ಲಾದರೂ ಪೂರ್ವದಲ್ಲಿ ನೋಡಿರಬೇಕೆಂದು ಬೋಧೆಯಾಗುತ್ತದೆಂದು ಹೇಳಿದನು.

ಸುರಬಾಲೆ – ನನಗೂ ಇವಳನ್ನು ಎಲ್ಲಿಯೋ ನೋಡಿರಬೇಕೆಂದು ಮನಸ್ಸಿಗೆ ಹೊಳೆಯುತ್ತದೆ. ಆದರೆ ಎಷ್ಟು ಯೋಚಿಸಿನೋಡಿದರೂ ಯಾವುದೂ ಗೊತ್ತಾಗುವುದಿಲ್ಲ: ಸಂಸಾರ ಪ್ರಪಂಚದಲ್ಲಿ ಇಂತಹ ಅಪಾರ್ಥವವಾದ ರೂಪ ಗುಣಸಂಪನ್ನಳಾದ ದೇವಿಯ ದರ್ಶನವಾಗುವುದು ಶುದ್ಧವಾಗಿ ಅಸಂಭವ. ಅದುಕಾರಣ ನಮಗೇನೋ ಭ್ರಮೆಯುಂಟಾಗಿರಬೇಕೇ ಹೊರತು ಮತ್ತೆ ಬೇರೆ ಇಲ್ಲ.

ಈ ಸಮಯದಲ್ಲಿ ಆ ಕೃಷ್ಣಾಂಗಿಯಾದ ದೇವಿಯಾದ ಸುರಮೆಯು ದಶದಿಕ್ಕನ್ನು ಬೆಳಕು ಮಾಡುತ್ತ ಅಲ್ಲಿಗೆ ಬಂದಳು. ಅವಳ ದರ್ಶನಮಾತ್ರದಿಂದ ರಮಾಪತಿಯೂ ಸುರಬಾಲೆಯೂ ಸಹ ಭಕ್ತಿಸಹಕಾರದಿಂದ ಅವಳ ಪಾದಗಳಿಗೆ ಎರಗಿದರು. ಆಗ ಆ ದೇವಿಯು ನಯನಸಮುದಿತಳಾಗಿ ಶ್ಯಾಮಸುಂದರನನ್ನು

ಧ್ಯಾನಮಾಡುತ್ತ, ಶ್ಯಾಮಸುಂದರನು ನಿಮ್ಮಿಬ್ಬರನ್ನೂ ಅವನ ಕಡೆಗೆ ಆಕೃಷ್ಟ ಮಾಡಲೆಂದು ಹೇಳಿದಳು.

ರಮಾಪತಿ—ದೇವಿ! ನಿನ್ನ ಕೃಪೆಯಿಂದ ನಾವು ಇಲ್ಲಿ ಸಕಲವಾದ ಸುಖ ಭೋಗಗಳನ್ನು ಅನುಭವಿಸುತ್ತೇವೆ. ಆದರೆ ನಮ್ಮ ಮನಸ್ಸು ಈ ಭೂಲೋಕ ದುರ್ಲಭವಾದ ಸ್ಥಳದ ಅಶೇಷ ರಹಸ್ಯ ಪರಂಪರೆಯನ್ನು ತಿಳಿದುಕೊಳ್ಳಲು ಅಸಮರ್ಥವಾಗಿ ಉತ್ತರೋತ್ತರ ಬಹಳ ಅಸ್ಥಿರವಾಗುತಲಿದೆ. ನೀನು ಕೃಪೆಗೈದು ಈ ಅಸ್ಥಿರತೆಯನ್ನು ದೂರಮಾಡಬೇಕೆಂದು ಬೇಡುತ್ತೇವೆ.

ಅಮರ್ದಗ್ಯೆಯುಳ್ಳ ಕೋಮಲವಾದ ಸ್ವರದಿಂದ ಸುರಮೆಯು, ಇಲ್ಲಿ ರಹಸ್ಯವೇನೂ ಇಲ್ಲ. ಇದು ಶಾಂತಿದೇವಿಯ ನಿವೇಶನ. ಆ ದೇವಿಯು ಸರಳತೆಯ ಏಕಶೇಷವಾಗಿದ್ದಾಳೆ. ಆ ಶಾಂತಿದೇವಿಯು ಅಲೌಕಿಕವಾದ ಶಕ್ತಿಯಿಂದ ಈ ಸ್ಥಳದ ಕಾರ್ಯಗಳೆಲ್ಲಾ ನಿರ್ವಹಿಸಲ್ಪಡುತಲಿದೆಯೆಂದು ನಿಮಗೆ ಕ್ರಮವಾಗಿ ಗೊತ್ತಾಗುವುದೆಂದು ಹೇಳಿದಳು.

ಸುರಬಾಲೆ—ಆದರೆ ದೇವಿ! ಬೇರೆ ಮಾತು ಹಾಗಿರಲಿ. ನಮಗೆ ನೀನೇ ಈ ರಹಸ್ಯಗಳಿಗೆಲ್ಲಾ ಮೂಲಕಾರಣಳೆಂದು ತೋರುತ್ತದೆ, ನಿನ್ನನ್ನು ನಾವು ಎಲ್ಲಿಯೋ ನೋಡಿರಬೇಕೆಂದು ಮನಸ್ಸಿಗೆ ಹೊಳೆಯುತ್ತದೆ. ಆದರೆ ಯಾವುದೂ ಗೋಚರವಾಗುವುದಿಲ್ಲ

ಸುರಮಾ—ಒಂದಾನೊಂದುಕಾಲದಲ್ಲಿ ನಾನು ನಿಮಗೆಲ್ಲಾ ವಿಶೇಷವಾಗಿ ಪರಿಚಿತಳಾಗಿದ್ದವಳು. ನನ್ನ ಜ್ಞಾಪಕ ಒರುವುದು ವಿಚಿತ್ರವಲ್ಲ. ಶಾಂತಿ ದೇವಿಯ ಚರಣರೇಣುಗಳ ಶಕ್ತಿಯಿಂದ ನನಗೆ ಪುನರ್ಜನ್ಮವುಂಟಾಗಿದೆ ಆದರೆ ನನ್ನ ಪೂರ್ವದ ಆಕೃತಿ ಮತ್ತು ಛಾಯೆಯು ಹೋಗಿಲ್ಲ ಇಲ್ಲಿರುವರೆಲ್ಲರಿಗೂ ಪುನರ್ಜನ್ಮವುಂಟಾಗಿದೆ.

ರಮಾಪತಿ—ನೀವು ನಮಗೆ ವಿಶೇಷ ಪರಿಚಿತರೆ! ಆದರೆ ದೇವಿ! ನಮಗೇನೋ ಏನೇನೂ ಜ್ಞಾಪಕವಿಲ್ಲ. ಇಂತಹ ದಿವ್ಯವಾದ ಜ್ಯೋತಿಯು ಮಾನುಷ ಶರೀರದಲ್ಲಿ ಎಂದಿಗೂ ಇರಲಾರದು. ಇಲ್ಲ, ದೇವಿ! ನಿಮ್ಮ ಸಂಗಡ ಪೂರ್ವ ಪರಿಚಯವೆಂಬುವುದು ಶುದ್ಧವಾಗಿ ಅಸಂಭವ.

ಸುರಮಾ—ನಿಮ್ಮ ದೇಶದಲ್ಲಿ ಶಶೀಭಟ್ಟಾಚಾರ್ಯನೆಂಬ ಒಬ್ಬ ನಿರೀಹ ಸತ್ಪುರುಷನಾದ ಬ್ರಾಹ್ಮಣನಿದ್ದುದು ಜ್ಞಾಪಕವಿದೆಯೆ? ಅವನ ವ್ಯಭಿಚಾರಿಣಿ

ಯಾದ ಪತ್ನಿಯು ಅವನನ್ನು ಕೊಂದುಹಾಕಿದುದು ಜ್ಞಾಪಕವಿದೆಯೆ ? ನಾನೇ ಪೂರ್ವಜನ್ಮದಲ್ಲಿ ಆ ವ್ಯಭಿಚಾರಿಣಿಯಾದ ಪತಿಹಂತ್ರಿಯಾಗಿದ್ದವಳು.

ಸುರಬಾಲೆಯು ಆಶ್ಚರ್ಯದಿಂದ ಹಾಗಾದರೆ ನೀವೇನೆ ಆ ಕಾಳಿ? ಎಂದಳು.

ಸುರಮಾ—ಕಾಳಿಯು ಸತ್ತುಹೋದಳು. ನಾನು ಸುರಮಾ.

ಸುರಬಾಲೆ—ಆದರೆ ಇಂತಹ ಜ್ಯೋತಿರ್ಮಯವಾದ ಪುಣ್ಯಪ್ರದೀಪ್ತವಾದ ಕಳೇಬರವು ಹೇಗೆ ಉಂಟಾಯಿತು ನಿಮ್ಮ ಪೂರ್ವಾಕೃತಿಯ ಛಾಯೆಯೂ ನಿಮ್ಮ ಈಗಿನ ದೇಹದಲ್ಲಿ ಇದೆಯೋ ಇಲ್ಲವೋ ಸಂದೇಹವಾಗಿದೆ.

ಸುರಮಾ—ಅದು ಶ್ಯಾಮಸುಂದರ ಮತ್ತು ಶಾಂತಿದೇವಿಗೆ ಗೊತ್ತು.

ರಮಾಪತಿ—ಆದರೆ ನೀವು ಆ ಪ್ರಹರಿಗಳಿಂದ ಪರಿವೇಷ್ಟಿತವಾಗಿದ್ದ ಕಾರಾಗಾರದಿಂದ ಮುಕ್ತರಾಗಿ ಬಂದ ಬಗಹೇಗೆ ?

ಸುರಮಾ—ಶಾಂತಿದೇವಿಗೆ ಯಾವುದೂ ಅಸಾಧ್ಯವಲ್ಲ. ಅವಳ ಕೃಪೆಯುಂಟಾದರೆ ಎಲ್ಲವೂ ಸಂಭವ.

ಸುರಬಾಲೆ—ವಸ್ತುತಃ ತಾವು ದೇವತ್ವವನ್ನು ಹೊಂದಿರೋಣಾಗಿದೆ. ತಮ್ಮ ದರ್ಶನವಾಗಿ ನಮಗೆ ದೇವರ ದರ್ಶನದ ಫಲವಾಯಿತು. ಆದರೆ, ದೇವಿ ತಮಗೆ ಹೇಗೆ ಇಂತಹ ಪರಿವರ್ತನೆಯುಂಟಾಯಿತು ?

ಸುರಮಾ—ಇದು ಶಾಂತಿದೇವಿಯು ರಾಜ್ಯದ ವಿಚಿತ್ರವಾದ ವ್ಯವಸ್ಥೆ ಇಲ್ಲಿಗೆ ಯಾರುಬಂದರೂ ಅವರಿಗೆ ಪುನರ್ಜನ್ಮವುಂಟಾಗುತ್ತದೆ ಕೆಲವರಿಗೆ ಆಕೆಯ ದರ್ಶನ ಮಾತ್ರದಿಂದ ಪುನರ್ಜನ್ಮವುಂಟಾಗುತ್ತದೆ ಕೆಲವರಿಗೆ ವಿಹಾರಿಯ ಹಾಗೆ ಶಾಸನಪುರಿಯಲ್ಲಿ ಶಾಸ್ತಿಭೋಗಮಾಡಿದ ಮೇಲೆ ಪುನರ್ಜನ್ಮ ಬರುತ್ತದೆ. ಪುನರ್ಜನ್ಮ ಬರುವುದಕ್ಕೆ ಮೊದಲು ಕಾಳಿಯೂ ಶಾಸನಪುರಿಯಲ್ಲಿ ಬಹಳ ಕಾಲ ವಾಸವಾಗಿದ್ದಳು. ಶಾಂತಿದೇವಿಯು ಕೃಪೆಗೈದು ಕಾಳಿಯನ್ನು ನಷ್ಟಮಾಡಿಬಿಟ್ಟಳು. ಅವಳ ಅಂತರಾತ್ಮವು ತೊಳೆದುಹೋಯಿತು.

ರಮಾಪತಿ—ನಾವು ಶಾಸನಪುರಿಯಲ್ಲಿ ವಜ್ರಗಂಭೀರ ಸದೃಶವಾದ ಶಬ್ದವನ್ನು ಕೇಳಿದೆವಷ್ಟೆ ? ಅದು ಯಾರಧ್ವನಿ ?

ಸುರಮೆಯು ಭಕ್ತಿಭಾವದಿಂದ ಪ್ರಣಾಮವನ್ನುಮಾಡಿ ಅದು ಭಗವಂತನ ಧ್ವನಿ. ಶಾಂತಿದೇವಿಯು ಕಾರ್ಯಗಳಲ್ಲಿ ಭಗವಂತನು ಸಹಾಯ.

ಸುರಬಾಲೆ—ಆದರೆ ದೇವಿ! ನಮ್ಮ ಅದೃಷ್ಟದಲ್ಲಿ ಆ ಶಾಂತಿದೇವಿಯ ಸಂದರ್ಶನವಾಗುವ ಲಕ್ಷ್ಯವಿಲ್ಲವೆ? ಯಾವ ಪುಣ್ಯಫಲದಿಂದ ಆ ಭಗವತಿಯ ಸಂದರ್ಶನ ವಾಗುವುದು?

ಸುರಮಾ—ಅವಶ್ಯಕವಾಗಿ ದರ್ಶನವಾಗುವುದು. ಯಾವಪುಣ್ಯಫಲದಿಂದ ಶಾಂತಿದೇವಿಯ ಸಂಗಡ ಸಮ್ಮಿಲನಸಾಗಬೇಕೋ ಅದಕ್ಕೆ ನಿಮಗೆ ಅನೇಕ ಪ್ರಮಾಣಗಳಿವೆ.

ಸುರಬಾಲೆ—ಹಾಗಾದರೆ ಆಕೆಯು ಎಲ್ಲಿ? ಎಲ್ಲಿಗೆ ಹೋದರೆ ಆಕೆ ಯನ್ನು ನೋಡಬಹುದು?

ಸುರಮಾ—ದಯಮಾಡಿದಳು!

ಆಗ ಆ ಕೊಟಡಿಯಲ್ಲಿ ಜ್ವಲಂತವಾದ ಆಲೋಕಪ್ರಭೆಯುಳ್ಳ ಹೈಮ ಮಯಿಯಾದ ಹಸನ್ಮುಖಿಯಾದ ಶಾಂತಿದೇವಿಯು ಆವಿರ್ಭಾವವಾಯಿತು. ಆಗ ಸುರಬಾಲೆಯು ಎದ್ದು ಕೈಮುಗಿದು ಸಾಷ್ಟಾಂಗ ಪ್ರಣಾಮವನ್ನು ಮಾಡಿ, ಯಾವುದೋ ಪುಣ್ಯಬಲದಿಂದ ನಾವು ಸಶರೀರದಿಂದ ಭಗವತಿಯ ಸಂದರ್ಶನ ವನ್ನು ಮಾಡಿದೆವು. ಯಾರ ಅಕ್ಕನು ಭಗವತಿಯೋ ಅವಳ ಸುಕೃತಿಗೆ ಪಾರ ವುಂಟೆ? ಎಂದಳು.

ರಮಾಪತಿಯು ಕೃತಾಂಜಲಿಪುಟನಾಗಿ, ಸುಕುಮಾರಿ! ನೀನು ದೇವ ತ್ವವನ್ನು ಹೊಂದಿರುತ್ತೀಯೆಂದು ನಾನು ಇದಕ್ಕೆ ಮುಂಚೆ ಅನೇಕದಿನಗಳಿಂದ ಬಲ್ಲೆನು. ಯಾವ ಅಧಮನು ಇಂತಹ ಭಗವತಿಯನ್ನು ಒಂದಾನೊಂದು ಕಾಲ ದಲ್ಲಿ ನನ್ನವಳೆಂದು ಹೇಳಬೇಕಾಗಿದ್ದರೆ ಅವನ ಪುಣ್ಯವು ಎಂಥಹದುದಾಗಿ ರಬೇಕು! ಸುಕುಮಾರಿ! ನಾವು ಈಗ ಸ್ವರ್ಗಕ್ಕೆ ಬಂದಿದ್ದೇನೆ. ನಾವು ಈ ಸ್ವರ್ಗದಿಂದ ಬಿಟ್ಟು ಪುನಃ ನರಕಕ್ಕೆ ಹೋಗದಿರಬೇಕು. ಮತ್ತು ನಿನ್ನ ಸಮುಖವನ್ನು ಬಿಟ್ಟು ಮತ್ತೆಲ್ಲಿಗೂ ಹೋಗದಿರುವಹಾಗೆ ಮಾಡು.

ಶಾಂತಿದೇವಿಯು ಬಹಳಹೊತ್ತು ಕಣ್ಣುಗಳನ್ನು ಮುಚ್ಚಿ ಗುರುಚರಣವನ್ನು ಧ್ಯಾನಮಾಡಿದಮೇಲೆ ಸುಕುಮಾರಿಯು ಹನ್ನೆರಡುವರುಷಗಳ ಕೆಳಗೆ ಜಲದಲ್ಲಿ ಮಗ್ನಳಾಗಿ ಸತ್ತುಹೋದಳು. ನಾನು ಶಾಂತಿ. ನಾನು ತಮ್ಮ ದಾಸಿ. ನನ್ನ ಸಾನ್ನಿಧ್ಯದಲ್ಲಿ ತಾವು ಸುಖಿಯಾದರೆ ಭಗವಂತನು ಅವಶ್ಯಕವಾಗಿ ತಮ್ಮ ವಿಚಾರ ದಲ್ಲಿ ಸುವಿಚಾರಮಾಡುವನು. ತಾವಿಬ್ಬರೂ ದೇವದೇವಿಯರು. ದೇವ ಸೇವೆಯೇ ಈ ಸ್ಥಳದ ವ್ಯವಸ್ಥೆಯಾಗಿದೆ. ಶಾಂತಿಯು ತಮ್ಮ ದಾಸಿ ಎಂದಳು.

ಆಗ ಮಾಧುರಿಯೂ ಮಗುವೂ ತಮ್ಮ ಆಟವನ್ನು ಬಿಟ್ಟು ಅಲ್ಲಿಗೆ ಬಂದು ಮತ್ತಾರನ್ನೂ ನೋಡದೆ ಶಾಂತಿದೇವಿಯ ಕೈಗಳನ್ನು ಇಬ್ಬರೂ ಹಿಡಿದು ಕೊಂಡರು. ಅವಳ ಕೈಯನ್ನು ಹಿಡಿದುಕೊಂಡು ಸತೃಷ್ಣನಯನಗಳಿಂದ ಅವಳ ಆ ಪವಿತ್ರತಾಪೂರ್ಣವಾದ ಸೌಂದರ್ಯ ಸಾರವುಳ್ಳ ವದನಮಂಡಲವನ್ನು ನೋಡ ಲಾರಂಭಿಸಿದರು. ಮಧುರವಾದ ನಗುವಿನಿಂದ ಆ ದೇವಿಯು ಅವರನ್ನು ಪ್ರೇಮ ಪೂರ್ಣವಾದ ದೃಷ್ಟಿಯಿಂದ ನೋಡಿದಳು. ಆಗ ಮಗುವು, ಧೂ—ಧೂ— ದೇವರು ಅಲ್ಲ. ಎಂದಿತು.

ಮಾಧುರಿ—ಅಲ್ಲವೊ! ಇವಳೊಬ್ಬ ದುರ್ಗಾ!

ಮಗುವು ಆಗ ಸುರಬಾಲೆಯ ಬಳಿಗೆ ಬಂದು ಅಮ್ಮಾ! ಅಮ್ಮಾ! ದುರ್ಗಾ! ದೇವರು ಅಲ್ಲ ಎಂದಿತು.

ಸುರಬಾಲಾ—ಪ್ರಣಾಮವನ್ನು ಮಾಡು, ಮಗು!

ಮಗುವು ಪ್ರಣಾಮವನ್ನು ಮಾಡದೆ ಪುನಃ ಆ ದೇವಿಯ ಬಳಿಗೆ ಹೋಗಿ ಅವಳ ಕೈಯನ್ನು ಹಿಡಿದುಕೊಂಡು ಅವಳನ್ನು ಕುರಿತು, ನೀನು ದುರ್ಗಾ ಠಾಕೂರ? ಎಂದು ಕೇಳಿತು

ಆಗ ಪ್ರೇಮಮಯಿಯಾದ ಶಾಂತಿದೇವಿಯು ನಗುಮುಖಳಾಗಿ ಮಾಧುರಿ ಮತ್ತು ಮಗುವನ್ನು ತೊಂಕುಳಲ್ಲೆತ್ತಿಕೊಂಡು, ಇಲ್ಲ, ನಾನು ನಿಮ್ಮಿಬ್ಬರ ಮತ್ತೊಬ್ಬ ತಾಯಿಯೆಂದಳು.

ಶಾಂತಿದೇವಿಯು ಎರಡುತೊಂಕುಳಲ್ಲಿಯೂ ಈ ಭುವನಮೋಹನವಾದ ಎರಡು ಮಕ್ಕಳನ್ನೆತ್ತಿಕೊಂಡು ನಿಂತಾಗ ಅವಳ ಸೌಂದರ್ಯಕ್ಕೆ ಪಾರವೇ ಇರಲಿಲ್ಲ. ಎಲ್ಲರ ದೇಹವೂ ಪ್ರೇಮದಿಂದ ಪೂರ್ಣವಾಗಿ ಪುಳಕಿತವಾಯಿತು. ಪ್ರೇಮಮ ಯಿಯಾದವಳ ಪ್ರೇಮ ಲೀಲೆಯೋ! ಎಂಬಹಾಗೆ ಕಣ್ಗೊಳಿಸಿತು.

ರಮಾ—ಭಗವತಿ! ಅಪ್ಪಣೆಯನ್ನು ಕೊಟ್ಟರೆ, ಹೋಗಿ ನನ್ನ ಹುಡು ಗರ[illegible]ಸಮಾಚಾರವನ್ನು ತಿಳಿಸುತ್ತೇನೆ.

ಶಾಂತಿ—ನಡೆ, ಸುರಮೆ! ನಾವೆಲ್ಲರೂ ಹೋಗಿ ಶ್ಯಾಮಸುಂದರನ ದರ್ಶನವನ್ನು ತೆಗೆದುಕೊಳ್ಳೋಣ

ಆಗ ಶಾಂತಿದೇವಿಯು ಮಾಧುರಿಯನ್ನು ಮಗುವನ್ನು ತೊಂಕುಳಲ್ಲೆತ್ತಿ ಕೊಂಡು ಮುಂದಾದಳು. ಅವಳ ಒಂದು ಪಾರ್ಶ್ವದಲ್ಲಿ ರಮಾಪತಿ, ಮತ್ತೊಂದು,

ಪಾರ್ಶ್ವದಲ್ಲಿ ಸುರಬಾಲೆ. ಕಡೆಗೆ ಸುರಮಾ. ಎಲ್ಲರ ದೇಹವೂ ಕಂಟಕಿತ— ನಯನಗಳಲ್ಲಿ ಪ್ರೇಮಾಶ್ರು.

ಹೀಗೆ ಅವರೆಲ್ಲರೂ ಆ ಅತಿವಿಸ್ತೃತವಾದ ಭವನದ ಸುವಿಸ್ತೃತವಾದ ಪ್ರಾಂಗಣ ಪ್ರದೇಶಕ್ಕೆ ಬರುತಲೇ, ಹರಿಮಂದಿರದಲ್ಲಿ ಡೋಳು ಹೊಡೆಯಲು ಪ್ರಾರಂಭವಾಗಿ ಮತ್ತು ಆನಂದ ಕೋಲಾಹಲದಿಂದ ದಿಙ್ಮಂಡಲವೆಲ್ಲಾ ಶಬ್ದಿತವಾಗಲಾರಂಭಿಸಿತು. ಆಗ ದಿವ್ಯ ಮೂರ್ತಿಧಾರಿಗಳಾದ ದೇವದೇವಿಯರು ಬೇರೆಬೇರೆ ಸ್ಥಳಗಳಿಂದ ಬಂದು ಶಾಂತಿದೇವಿಯು ಬರುತಲಿದ್ದ ಮಾರ್ಗಕ್ಕೆ ಅಡ್ಡವಾಗಿ ನಿಂತರು. ಆಗ ಶಾಂತಿದೇವಿಯು ಹುಡುಗರಿಬ್ಬರನ್ನೂ ಎತ್ತಿಕೊಂಡು ಮುದಿತನಯನಳಾಗಿ ಏಕಾಂತವಾದ ಮನಸ್ಸಿನಿಂದ ಗುರುಚರಣಾರವಿಂದವನ್ನು ಧ್ಯಾನಮಾಡುತಲಿದ್ದಳು. ಆಗ ಆ ಪುಣ್ಯಶ್ಲೋಕರಾದ ನರನಾರಿಯರು ಶಾಂತಿದೇವಿಯ ಇದುರಿಗೆ ನಿಂತುಕೊಂಡು ಅಪೂರ್ವವಾದ ಸ್ವರಸಂಯೋಗದಿಂದ ಭಗವತಿಯ ಸ್ತವವನ್ನು ಹೇಳಲಾರಂಭಿಸಿದರು ——

ಯಾದೇವೀಸರ್ವಭೂತೇಷು ಶಾಂತಿರೂಪೇಣಸಂಸ್ಥಿತಾ |
ನಮಸ್ತಸ್ಯೈನಮಸ್ತಸ್ಯೈ ನಮಸ್ತಸ್ಯೈನಮೋನಮಃ ||

ಯಾದೇವೀಸರ್ವಭೂತೇಷು ಶ್ರದ್ಧಾರೂಪೇಣಸಂಸ್ಥಿತಾ |
ನಮಸ್ತಸ್ಯೈನಮಸ್ತಸ್ಯೈ ನಮಸ್ತಸ್ಯೈನಮೋನಮಃ ||

ಯಾದೇವೀಸರ್ವಭೂತೇಷು ಕಾಂತಿರೂಪೇಣಸಂಸ್ಥಿತಾ |
ನಮಸ್ತಸ್ಯೈನಮಸ್ತಸ್ಯೈ ನಮಸ್ತಸ್ಯೈನಮೋನಮಃ ||

ಯಾದೇವೀಸರ್ವಭೂತೇಷು ಲಕ್ಷ್ಮೀರೂಪೇಣಸಂಸ್ಥಿತಾ |
ನಮಸ್ತಸ್ಯೈನಮಸ್ತಸ್ಯೈ ನಮಸ್ತಸ್ಯೈನಮೋನಮಃ ||

ಯಾದೇವೀಸರ್ವಭೂತೇಷು ವೃತ್ತಿರೂಪೇಣಸಂಸ್ಥಿತಾ |
ನಮಸ್ತಸ್ಯೈನಮಸ್ತಸ್ಯೈ ನಮಸ್ತಸ್ಯೈನಮೋನಮಃ ||

ಯಾದೇವೀಸರ್ವಭೂತೇಷು ಸ್ಮೃತಿರೂಪೇಣಸಂಸ್ಥಿತಾ |
ನಮಸ್ತಸ್ಯೈನಮಸ್ತಸ್ಯೈ ನಮಸ್ತಸ್ಯೈನಮೋನಮಃ ||

ಯಾದೇವೀಸರ್ವಭೂತೇಷು ದಯಾರೂಪೇಣಸಂಸ್ಥಿತಾ |
ನಮಸ್ತಸ್ಯೈನಮಸ್ತಸ್ಯೈ ನಮಸ್ತಸ್ಯೈನಮೋನಮಃ ||

ಯಾದೇವೀಸರ್ವಭೂತೇಷು ತುಷ್ಟಿರೂಪೇಣಸಂಸ್ಥಿತಾ |
ನಮಸ್ತಸ್ಯೈನಮಸ್ತಸ್ಯೈ ನಮಸ್ತಸ್ಯೈನಮೋನಮಃ ||
ಯಾದೇವೀಸರ್ವಭೂತೇಷು ಮಾತೃರೂಪೇಣಸಂಸ್ಥಿತಾ |
ನಮಸ್ತಸ್ಯೈನಮಸ್ತಸ್ಯೈ ನಮಸ್ತಸ್ಯೈನಮೋನಮಃ ||
ಯಾದೇವೀಸರ್ವಭೂತೇಷು ಭ್ರಾಂತಿರೂಪೇಣಸಂಸ್ಥಿತಾ |
ನಮಸ್ತಸ್ಯೈನಮಸ್ತಸ್ಯೈ ನಮಸ್ತಸ್ಯೈನಮೋನಮಃ ||

## ಹನ್ನೆರಡನೆಯ ಪರಿಚ್ಛೇದ.

ದೇವದೇವಿಯರು ಸ್ತೋತ್ರಪಾಠವನ್ನು ಸಮಾಪ್ತಮಾಡುತಲೇ ಜ್ಯೋತಿರ್ಮಯಮೂರ್ತಿಯಾದ ಜ್ಞಾನಾನಂದಯೋಗಿಯು ಅಲ್ಲಿಗೆ ಬಂದನು. ಅವನನ್ನು ನೋಡುತಲೇ ಎಲ್ಲರೂ ಆಂತರಿಕವಾದ ಭಕ್ತಿಸಹಕಾರದಿಂದ ನೆಲದಮೇಲೆ ಸಾಷ್ಟಾಂಗವಾಗಿ ಪ್ರಣಾಮವನ್ನು ಮಾಡಿದರು. ಶಾಂತಿದೇವಿಯು ಮಕ್ಕಳನ್ನು ಎತ್ತಿಕೊಂಡಿದ್ದ ಹಾಗೆ ಪ್ರಣತಳಾದಳು. ಮತ್ತು ರಮಾಪತಿ ಮತ್ತು ಸುರಬಾಲೆಯೂ ಸಹ ಭಗವಂತನ ಇದುರಿಗೆ ನಿಂತಿದ್ದೇವೆಂಬ ಭಾವನೆಯಿಂದ ಯೋಗಿಗೆ ಪ್ರಣಾಮವನ್ನು ಮಾಡಿದರು.

ಶ್ಯಾಮಸುಂದರನು ನಿಮ್ಮೆಲ್ಲರಿಗೂ ಮಂಗಳ ಮಾಡಲೆಂದು ಹರಿಸಿ ಜ್ಞಾನಾನಂದನು ಆಶೀರ್ವಾದವನ್ನು ಮಾಡಿದನು.

ಅನಂತರ ಕೈಬೆರಳಿನ ಸಂಕೇತದಿಂದ ರಮಾಪತಿಯನ್ನು ತೋರಿಸಿ ಶಾಂತಿದೇವಿಯನ್ನು ಕುರಿತು, ತಾಯಿ! ಈ ಪುರುಷನು ನಿನಗೇನಾಗಬೇಕು ? ಎಂದು ಕೇಳಿದನು.

ಶಾಂತಿ—ಪ್ರಭುವೆ ! ಈ ಪುರುಷನು ನನಗೇನೂ ಆಗತಕ್ಕದ್ದಿಲ್ಲ.

ಅನಂತರ ಸುರಬಾಲೆಯನ್ನು ತೋರಿಸಿ, ತಾಯಿ ! ಈ ನಾರಿಯು ನಿನಗೇನಾಗಬೇಕು ? ಎಂದು ಕೇಳಿದನು.

ಶಾಂತಿ—ಈ ನಾರಿಯು ನನಗೇನೂ ಆಗತಕ್ಕದ್ದಿಲ್ಲ.

ಅನಂತರ ಮಹಾಪುರುಷನು, ಪುನಃ ನಿನ್ನ ಕೊಂಕುಳಲ್ಲಿರುವ ಮಕ್ಕಳಿಬ್ಬರೂ ನಿನಗೇನಾಗಬೇಕು ? ಎಂದನು.

ಶಾಂತಿ—ಈ ಹುಡುಗರು ನನಗೇನೂ ಆಗತಕ್ಕದ್ದಿಲ್ಲ.

ಪುನಃ ಮಹಾಪುರುಷನು, ತಾಯಿ! ಈ ಪುರುಷನು ನಿನಗೇನು ಆಗಬೇಕೆಂದು ಕೇಳಿದನು.

ಶಾಂತಿ – ಈ ಪುರುಷನು ನನಗೆ ಸರ್ವಸ್ವ.

ಮಹಾಪುರುಷ—ಈ ನಾರಿಯು ನಿನಗೇನಾಗಬೇಕು ?

ಶಾಂತಿ—ಈ ನಾರಿಯು ನನಗೆ ಸರ್ವಸ್ವ.

ಮಹಾಪುರುಷ—ಈ ಹುಡುಗರು ನಿನಗೇನಾಗಬೇಕು ?

ಶಾಂತಿ—ಈ ಹುಡುಗರು ನನಗೆ ಸರ್ವಸ್ವ.

ಮಹಾಪುರುಷ—ಹಾಗಾದರೆ, ತಾಯಿ! ಶ್ಯಾಮಸುಂದರನು ನಿನಗೇನಾಗಬೇಕು ?

ಶಾಂತಿ—ಅವನು ಯಾರೆಂದು ತಿಳಿಯುವಹಾಗೆ ಹೇಳಲಾರೆನು. ಸ್ವತಂತ್ರವಾಗಿ ಧ್ಯಾನವನ್ನು ಮಾಡಲಾರದೆ ಹೋದರೆ ಸ್ವಾತಂತ್ರ್ಯವು ಮನಸ್ಸಿಗೆ ಗೋಚರವಾಗುವುದಿಲ್ಲ. ಶ್ಯಾಮಸುಂದರನು ನನಗೆ ಎಲ್ಲಾ ಆಗಬೇಕು ಅಥವಾ ನನಗೆ ಏನೂ ಆಗತಕ್ಕದ್ದಿಲ್ಲವೆಂದು ತೋರುತ್ತದೆ.

ಮಹಾಪುರುಷ—ವತ್ಸೆ! ಈ ಅಸಾರವಾದ ಸಂಸಾರದಲ್ಲಿ ನೀನೇ ಸಾರ. ಈ ಸಂಸಾರದಲ್ಲಿ ನಿನ್ನನ್ನು ಯಾರು ತಿಳಿದಿದ್ದಾನೋ ಅವನು ಎಲ್ಲವನ್ನೂ ತಿಳಿದವನು.

ತ್ವಂಶ್ರೀಸ್ತ್ವಮೀಶ್ವರೀತ್ವಂಹ್ರೀಸ್ತ್ವಂಬುದ್ಧಿರ್ಬೋಧಲಕ್ಷಣಾ |
ಲಜ್ಜಾ ಪುಷ್ಟಿಸ್ತಥಾತುಷ್ಟಿಸ್ತ್ವಂಶಾಂತಿಃಶಾಂತಿರೇವಚ ||

ಆಗ ರಮಾಪತಿಯು ಮಹಾಪುರುಷನ ಪದಪ್ರಾಂತದಲ್ಲಿ ಬಿದ್ದು, ಭಗವನ್! ಈ ಶಾಂತಿನಿಕೇತನದಲ್ಲಿ ಈ ಅಧಮನಿಗೆ ಸ್ಥಾನಸಿಕ್ಕುವುದೊ ? ಎಂದನು.

ಮಹಾಪುರುಷ—ನೀನು ದೇವತಾ. ನಿನಗೆ ನಿಷಿದ್ಧವಾದ ಸ್ಥಳವು ಯಾವುದೂ ಇಲ್ಲ. ಆದರೆ ನಿಮ್ಮ ಕರ್ತವ್ಯವು ಇನ್ನೂ ಪೂರ್ತಿಯಾಗಿಲ್ಲ. ಆದುಕಾರಣ, ವತ್ಸ! ನಿನಗೆ ಅನುರೂಪವಾದ ವ್ಯವಸ್ಥೆಯು ಏರ್ಪಾಡಾಗುವುದು.

ಸುರಬಾಲೆಯು ಶಾಂತಿದೇವಿಯ ಪಾರ್ಶ್ವದಲ್ಲಿ ನಿಂತು ನೀರವವಾಗಿ ಪ್ರೇಮಾಶ್ರುವನ್ನು ಸುರಿಸುತಲಿದ್ದಳು.

ಮಹಾಪುರುಷ—ನಡೆಯಿರಿ, ಎಲ್ಲರೂ ಹರಿಮಂದಿರಕ್ಕೆ ಹೋಗೋಣ.

ಆಗ ಮೃದಂಗತಾಳ, ಕರತಾಳ, ತುರಿ, ಬೇರಿ ಮುಂತಾದ ವಿವಿಧವಾದ ವಾದ್ಯಗಳ ಘೋಷವು ಎದ್ದಿತು. ಜಯ, ಶ್ಯಾಮಸುಂದರನಿಗೆ ಜಯವಾಗ ಲೆಂದು ದಶದಿಕ್ಕುಗಳೂ ನಿರ್ಘೋಷಿತವಾದುವು.

ಮುಂದಾಗಿ ಜ್ಞಾನಾನಂದ, ಅವನ ಹಿಂದೆ ಶಾಂತಿದೇವಿ, ಅವಳ ಹಿಂದೆ ರಮಾಪತಿ ಮತ್ತು ಸುರಬಾಲೆ, ಮತ್ತು ಉಭಯಪಾರ್ಶ್ವದಲ್ಲಿ ದೇವದೇವಿಯರು ಮಿಳಿತವಾಗಿ ಆ ಹರಿಮಂದಿರಕ್ಕೆ ಬಂದರು. ಅಲ್ಲಿ ಶ್ಯಾಮಸುಂದರನ ಅಪೂರ್ವ ವಾದ ರೂಪವನ್ನು ನೋಡಿ ರಮಾಪತಿಯೂ ಸುರಬಾಲೆಯೂ ವಿಮೋಹಿತ ರಾದರು.

ಆಗ ಆ ಮಹಾಪುರುಷನು ಕೈಮುಗಿದುಕೊಂಡು ಅಲೌಕಿಕವಾದ ಸುಸ್ವರ ದಿಂದ ಗಾನಮಾಡಿದನು :—

ಪೀತಾಂಬರಂ ಘನಶ್ಯಾಮಂ ದ್ವಿಭುಜಂ ವನಮಾಲಿನಂ |
ಬರ್ಹಿಬರ್ಹಾಕೃತಾಪೀಡಂ ಶಶಿಕೋಟಿ ನಿಭಾನನಂ ||
ಘೂರ್ಣಾಯಮಾನನಯನಂ ಕರ್ಣಿಕಾರವತಂಸಿನಂ |
ಅಭಿತಶ್ಚಂದನೇನಾಥ ಮಧ್ಯೇಕುಂಕುಮಬಿಂದುನಾ ||
ರಚಿತಂತಿಲಕಂಭಾಲೆ ಬಿಭ್ರತಂ ಮಂಡಲಾಕೃತಂ |
ತರುಣಾದಿತ್ಯಸಂಕಾಶಂ ಕುಂಡಲಾಭ್ಯಾಂ ವಿರಾಜಿತಂ ||
ಘರ್ಮಾಂಬುಕಣಿಕಾರಾಜದ್ದರ್ಪಣಾಭಕಪೋಲಕಂ |
ಪ್ರಿಯಾಮುಖಾರ್ಪಿತಾಪಾಂಗ ಲೀಲಯಾಚೋನ್ನತಭ್ರುವಂ ||
ಅಗ್ರಭಾಗನ್ಯಸ್ತಮುಕ್ತಾ ಸ್ಫುರದುಚ್ಚಸುನಾಸಿಕಂ |
ದಶನಜ್ಯೋತ್ಸ್ನಯಾರಾಜತ್ ಪಕ್ವಬಿಂಬಫಲಾಧರಂ ||

ಆ ಮೃದು ಗಂಭೀರವಾದ ಸಂಗೀತಧ್ವನಿಯು ಸರ್ವತ್ರ ಆನಂದ ಮತ್ತು ಪವಿತ್ರತೆಯನ್ನು ಬೀರುತ್ತ ಶೂನ್ಯದಲ್ಲಿ ಸೇರಿಹೋಯಿತು. ಯಾವ ಸೌಭಾಗ್ಯ ವಂತರಾದವರ ಕರ್ಣಕುಹರದಲ್ಲಿ ಆ ಅಪಾರ್ಥಿವವಾದ ಧ್ವನಿಯು ಪ್ರವೇಶ ಮಾಡಿತೋ ಅವರು ಮಹಾನಂದದಲ್ಲಿ ಮಗ್ನರಾದರು.

ಸಂಗೀತವು ಸಮಾಪ್ತವಾದಕೂಡಲೇ ಜ್ಞಾನಾನಂದನು ಕರತಾಳಿಯನ್ನು ಹಾಕುತ್ತ ನೃತ್ಯಮಾಡಲಾರಂಭಿಸಿದನು. ಆದರೆ ಮಾನವನ ಅಸಮರ್ಥವಾದ ಲೇಖನಿಗೆ ಆ ಶೋಭಾರಾಶಿಯ ಪೂರ್ಣವಾದ ಚಿತ್ರವನ್ನು ಬರೆದು ತೋರಿಸಲು ಶಕ್ತಿಯಿಲ್ಲ. ಮಿಕ್ಕವರು ದೇವದೇವಿಯರು ರಮಾಪತಿ ಸುರಬಾಲೆ ಮಾಧುರಿ ಮತ್ತು ಮಗುವೂ ಸಹ ಆ ನೃತ್ಯಕ್ಕೆ ಸೇರಿದರು ಹಾಹಾ! ಏನು ರಮಣೀಯ! ಎಂತಹ ಹೃದಯೋನ್ಮಾದಕರವಾದುದು! ಆಗ ನಯನವಾರಿಯು ರಮಾಪತಿ ಮತ್ತು ಸುರಬಾಲೆಯ ವಕ್ಷಸ್ಥಳಗಳನ್ನು ಮುಳುಗಿಸುತಲಿದೆ ಹೊಸ ಜನ್ಮವನ್ನು ಹೊಂದಿದ್ದ ವಿಹಾರಿಯೂ ಅಭಿರಾಮನೂ ಮತ್ತು ನಾರಾಯಣನೂ ಇತರರಿಗೆ ತಿಳಿಯದಹಾಗೆ ಆ ಜನರ ಗುಂಪಿನ ಮಧ್ಯದಲ್ಲಿ ಸೇರಿಕೊಂಡು ಎರಡು ಕೈಗಳಿಂದಲೂ ಅಲ್ಲಿ ನೆಲದಮೇಲಿನ ರಜಃಪುಂಜವನ್ನು ತೆಗೆದುಕೊಂಡು ತಮ್ಮ ತಮ್ಮ ದೇಹಕ್ಕೆ ಲೇಪನಮಾಡಿಕೊಳ್ಳುತ್ತಾರೆ ಆಗ ಆ ಮಹಾಪುರುಷನು ಪ್ರೇಮಪೂರ್ಣವಾದ ಸ್ವರದಿಂದ ರಮಾಪತಿ! ಎಂದು ಕೂಗಿದನು.

ರಮಾಪತಿ-- ದಯಾಮಯ!

ಮಹಾಪುರುಷ - ನಿನ್ನ ಪ್ರಥಮ ಭಾರ್ಯೆಯಲ್ಲಿ?

ರಮಾಪತಿ—ನನ್ನ ಸರ್ವಾಂಗದಲ್ಲಿ. ನನ್ನ ಹೃದಯ ಮನಸ್ಸು, ದೇಹ, ಆತ್ಮಾ ಎಲ್ಲವೂ ಶಾಂತಿಮಯವಾಗಿದೆ. ಸುಕುಮಾರಿಯು ಈಗ ಶಾಂತಿರೂಪದಿಂದ ನನ್ನ ದಗ್ಧವಾಗಿದ್ದ ಪ್ರಾಣವನ್ನು ಶೀತಲಮಾಡುತ್ತಾಳೆ.

ಮಹಾಪುರುಷ—ಅವಳ ವಿರಹದಿಂದ ನೀನು ಕಾತರನಾಗಿಲ್ಲವೆ?

ರಮಾಪತಿ—ಪ್ರಭೋ! ಅವಳಿಗೆ ದೂರವಾಗಿರಲಿ, ಅವಳಿಗೆ ಹತ್ತಿರವಾಗಿರಲಿ, ಅವಳ ವಿರಹವು ಇನ್ನು ಉಂಟಾಗದು. ಹೀಗೆ ಅವಳು ನನ್ನ ಸರ್ವಾಂಗಗಳಲ್ಲಿಯೂ ಮಿಳನವಾಗಿ ಯಾವಾಗಲೂ ಇರಲಿಲ್ಲ. ಭಗವನ್! ಈ ದಿನ ತಮ್ಮ ಕೃಪೆಯಿಂದ ನಾವು ಧನ್ಯರಾದೆವು.

ಮಹಾಪುರುಷ—ಹಾಗಾದರೆ ಶಾಂತಿ! ಬಾ—ನಾವು ನಿನ್ನನ್ನು ನಮ್ಮ ಕಾಯಮನೋವಾಕ್ಯಗಳಿಂದ ಪೂಜಿಸುವೆವು. ಈ ಪಾಪತಾಪಪೂರ್ಣವಾದ ವಸುಂಧರೆಯಲ್ಲಿ ಕೇವಲ ನೀನೊಬ್ಬಳೇ ನಿತ್ಯಾಮಳು, ಮತ್ತು ಉಪಾಸ್ಯಳು, ನಿನ್ನ ಕೃಪೆಯೊಂದುಂಟಾದರೆ ಜ್ವಾಲಾದಿ ಯಾತನೆಗಳು ಇರದು. ವ್ಯಾಧಿವೈಕಲ್ಯಗಳು ಇರದು. ಜರಾಮರಣವಿರದು. ನೀನೇ ಆಶ್ರಯ, ನೀನೇ ಸುಖ, ನೀನೇ ಸ್ವರ್ಗ. ನೀನು ಚಿರದಿನವೂ ಸುಕುಮಾರಿ—ನೀನು ಚಿರದಿನವೂ ರಮಾಪತಿಯ

*

ಹೃದಯರತ್ನ—ನೀನು ಚಿರದಿನವೂ ಸುರಬಾಲೆಯ ಆನಂದಧಾಮ. ಪ್ರೇಮಮಯಿ! ಯಾವಾಗ ನಿನ್ನ ಪ್ರೇಮದಿಂದ ವಸುಂಧರೆಯಲ್ಲಿರುವ ಜನರು ವಿಮೋಹಿತರಾಗಿ ನಿನ್ನ ಶಾಂತಿನಿಕೇತನದಲ್ಲಿ ಆಶ್ರಯವನ್ನು ಹೊಂದುವರು?

ಯಥಾನಿತ್ಯೋಹಿಭಗವಾನ್ ನಿತ್ಯಾಭಗವತೀತಥಾ |
ಸ್ವಮಾಯಯಾತಿರೋಭೂತಾ ತತ್ರೇಶೇಪ್ರಾಕೃತೆಲಯೆ ||
ಆಬ್ರಹ್ಮಸ್ತಂಬಪರ್ಯಂತಂ ಸರ್ವಂಮಿಥ್ಯೈವಂಕೃತ್ರಿಮಂ |
ದುರ್ಗಾಸತ್ಯಸ್ವರೂಪಾ ಸಾಪ್ರಾಕೃತಿಭಗವಾನ್ಯಥಾ ||
ಸಿದ್ಧ್ಯೈಶ್ವರ್ಯಾದಿಕಂಸರ್ವಂ ಯಸ್ಯಾಮಸ್ತಿಯುಗೆಯುಗೆ |
ಸಿದ್ಧಾಧಿಕೆಭಗೊಜ್ಞೇಯಸ್ತೇನ ಭಗವತೀಸ್ಮೃತಾ ||

ಅನಂತರ ನಾವು ಬ್ರಹ್ಮವಾಕ್ಯದಿಂದ ಗ್ರಂಥವನ್ನು ಸಮಾಪ್ತಿ ಮಾಡುವೆವು.

ಇಯಂಯಾಸರಮೇಷ್ಠಿನೀ ವಾಗ್ದೇವೀ ಬ್ರಹ್ಮಸಂಶಿತಾ |
ಯಯೈವಸಸೃಜೆಘೋರಂ ತೇನೈವಶಾಂತಿರಸ್ತುನಃ ||
ಇದಂಯತಪರಮೇಷ್ಠಿನಂ ಮನೋವಾಬ್ರಹ್ಮಸಂಶಿತಂ |
ಯೇನೈವಸಸೃಜೆಘೋರಂ ತೇನೈವಶಾಂತಿರಸ್ತುನಃ ||
ಇಮಾನಿಯಾನಿಪಂಚೇಂದ್ರಿಯಾಣಿ ಮನಃಷಷ್ಠಾನಿಮೆಹೃದಿ
ಬ್ರಹ್ಮಣಾಸಂಶಿತಾನಿ |
ಯೈರೆವಸಸೃಜೆಘೋರಂ ತೈರೇವಶಾಂತಿರಸ್ತುನಃ ||
—ಅಥರ್ವವೇದಸಂಹಿತಾ

(ಪರಬ್ರಹ್ಮನಿಂದ ಸಂಪಾದಿತಳಾದ ಈ ಪರಮೇಷ್ಠಿನಿಯಾದ ವಾಗ್ದೇವಿಯು ಯಾರೋ ಯಾರಿಂದ ವಿಪತ್ತುಗಳನ್ನು ಸೃಷ್ಟಿಸುತ್ತೇವೆಯೋ ಅವಳಿಂದಲೇ ನಮಗೆ ಶಾಂತಿಯುಂಟಾಗಲಿ. ಪರಬ್ರಹ್ಮನಿಂದ ಸಂಪಾದಿತವಾದ ಈ ಪರಮೇಷ್ಠಿಯಾದ ಮನಸ್ಸು ಯಾವುದೋ ಯಾವುದರ ದ್ವಾರಾ ವಿಪತ್ತುಗಳನ್ನು ಸೃಷ್ಟಿಸುತ್ತೇವೆಯೋ, ಅದರಿಂದಲೇ ನಮಗೆ ಶಾಂತಿಯುಂಟಾಗಲಿ. ಪರಬ್ರಹ್ಮನಿಂದ ಸಂಪಾದಿತವಾದ ಈ ಪಾಚೇಂದ್ರಿಯ ಮತ್ತು ಆರನೆಯದಾದ ಮನಸ್ಸು ಯಾವುವೂ ಯಾವುದರಿಂದ ವಿಪತ್ತುಗಳನ್ನು ಸೃಷ್ಟಿಸಿಕೊಳ್ಳುತ್ತೇವೆಯೋ ಅವುಗಳಿಂದಲೇ ನಮಗೆ ಶಾಂತಿಯುಂಟಾಗಲಿ).

ಓಂ ಶಾಂತಿಃ ಶಾಂತಿಃ ಶಾಂತಿಃ.